ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ವಿಕೆಟ್‌ಕೀಪರ್ ಬ್ಯಾಟರ್ ನಿರೋಷನ್ ಡಿಕ್ವೆಲಾ ಅವರು ಭಾರತ ತಂಡದ ಎದುರಿನ ಟೆಸ್ಟ್ ಸರಣಿಯಲ್ಲಿ ಆಡುವ ಶ್ರೀಲಂಕಾ ತಂಡದಲ್ಲಿ ಮರಳಿ ಸ್ಥಾನ ಪಡೆದಿದ್ದಾರೆ.

13 ಆಗಸ್ಟ್, 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -153 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಗಾಂಧಿ, ನೆಹರೂಗಳ ನಡುವೆ ಕಳೆದು ಹೋದ ವೆಂಕಯ್ಯ » 2


ರಾಜ್ಯದಲ್ಲಿ ಗುಟ್ಕಾ, ಪಾನ್ ಮಸಾಲಾ ನಿಷೇಧ » 3


ಕಾನೂನು ಪಂಡಿತರನ್ನು ಕತ್ತಲೆಯಲ್ಲಿಟ್ಟ ಸರ್ಕಾರ » 4

# ಡಿ.ಕೆ. ಸಂಪುಟದ ಸಚಿವರಿಗೆ ಖಾತೆ ಹಂಚಿಕೆ

• ಪ್ರಜೋದಯ ವರದಿ

**ಬೆಂಗಳೂರು:** ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸಚಿವ ಸಂಪುಟಕ್ಕೆ ಸೇರ್ಪಡೆಯಾಗಿದ್ದ ನೂತನ ಸಚಿವರಿಗೆ ಖಾತೆ ಹಂಚಿಕೆ ಮಾಡಲಾಗಿದೆ. ಸಚಿವ ಸಂಪುಟ ವಿಸ್ತರಣೆ ಬೆನ್ನಲ್ಲೇ ಪಕ್ಷದಲ್ಲಿ ಅಸಮಾಧಾನ ಭುಗಿಲೆದ್ದಿದ್ದ ಹಿನ್ನಲೆಯಲ್ಲಿ ಕಾಂಗ್ರೆಸ್ ಹೈಕಮಾಂಡ್, ಅಳೆದು ತೂಗಿ ನೂತನ ಸಚಿವರಿಗೆ ಜವಾಬ್ದಾರಿ ನೀಡಿದೆ.

ಆಗಸ್ಟ್ 13 ರಿಂದ 27ರವರೆಗೆ ವಿಧಾನಮಂಡಲ ಮುಂಗಾರು ಅಧಿವೇಶನ ನಡೆಯಲಿದ್ದು, ಆರಂಭದ ಮುನ್ನಾ ದಿನವೇ ನೂತನ ಸಚಿವರಿಗೆ ಇಲಾಖಾವಾರು ಜವಾಬ್ದಾರಿ ಹಂಚಿಕೆ ಮಾಡಿದೆ. ಸಚಿವರ ಅಧಿಕೃತ ಖಾತೆ ಹಂಚಿಕೆ ಪಟ್ಟಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಸಹಿ ಮಾಡಿದ್ದಾರೆ.

**ಖಾತೆ ಬದಲಾವಣೆ**

ಸಚಿವ ಕೆ.ಹೆಚ್.ಮುನಿಯಪ್ಪ ಅವರಿಗೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ಬಿಡುಗಡೆ ನೀಡಿ ಸಮಾಜ ಕಲ್ಯಾಣ ಇಲಾಖೆ



ಹೊಣೆ ಹೊರಿಸಲಾಗಿದೆ. ಆಹಾರ ಖಾತೆಯನ್ನು ರಿಜ್ವಾನ್ ಅರ್ಷದ್‌ಗೆ ಹಂಚಿಕೆ ಮಾಡಲಾಗಿದೆ. ಇನ್ನು ಜಲ ಸಂಪನ್ಮೂಲ ಖಾತೆ ನೀಡಿದ್ದಕ್ಕೆ ತೀವ್ರ ಅಸಮಾಧಾನಗೊಂಡಿದ್ದ ರಾಮಲಿಂಗಾರೆಡ್ಡಿ ಅವರು ರಾಜೀನಾಮೆ ನಿರ್ಧಾರ ಪ್ರಕಟಿಸಿದ್ದರು. ಆದರೆ, ಇದೀಗ ಅವರಿಗೆ ಅರಣ್ಯ ಖಾತೆಯನ್ನು ನೀಡಲಾಗಿದೆ.

**ಪೊನ್ನಣ್ಣ ಸಿಎಂ ರಾಜಕೀಯ ಕಾರ್ಯದರ್ಶಿ**

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ರಾಜಕೀಯ ಕಾರ್ಯದರ್ಶಿಯಾಗಿ ಶಾಸಕ ಎ.ಎಸ್.ಪೊನ್ನಣ್ಣ ಅವರನ್ನು ನೇಮಕ ಮಾಡಿ ಆದೇಶ ಮಾಡಲಾಗಿದೆ. ಈ ಹಿಂದೆ ಪೊನ್ನಣ್ಣ ಅವರ ಹೆಸರನ್ನು ವಿಧಾನಸಭೆ ಉಪಾಧ್ಯಕ್ಷರ ಹುದ್ದೆಗೆ ಸೂಚಿಸಲಾಗಿತ್ತು. ಆದರೀಗ ಹೆಸರು ಬದಲಾವಣೆ ಮಾಡಲಾಗಿದೆ. ಎ.ಎಸ್.ಪೊನ್ನಣ್ಣ ಅವರು ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಕಾನೂನು ಸಲಹೆಗಾರರಾಗಿದ್ದರು.

**ಆರ್.ವಿ.ದೇಶಪಾಂಡೆಗೆ ಸಂಪುಟ ದರ್ಜೆ ಸ್ಥಾನಮಾನ**

ಹಿರಿಯ ಶಾಸಕ ಆರ್.ವಿ.ದೇಶಪಾಂಡೆ ಅವರನ್ನು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ. ಈ ಹುದ್ದೆಗೆ ಸಂಪುಟ ದರ್ಜೆಯ ಸಚಿವರ ಸ್ಥಾನಮಾನ ನೀಡಲಾಗಿದೆ. ಸಿದ್ದರಾಮಯ್ಯ ಅವರ ಅವಧಿಯಲ್ಲೂ ಸಚಿವ ಸ್ಥಾನ ಕೈತಪ್ಪಿದ್ದು, ಈ ಬಾರಿಯೂ ಸಚಿವ ಸ್ಥಾನ ಸಿಕ್ಕಿಲ್ಲ. ಹೀಗಾಗಿ ಅವರನ್ನು ಸಂಪುಟ ದರ್ಜೆ ಸ್ಥಾನಮಾನದೊಂದಿಗೆ ಆಯೋಗದ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ.

### ಮುಖ್ಯಮಂತ್ರಿ ಬಳಿ ಹಲವು ಖಾತೆ

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಮ್ಮ ಬಳಿ ಹಲವು ಪ್ರಮುಖ ಖಾತೆಗಳನ್ನು ಉಳಿಸಿಕೊಂಡಿದ್ದಾರೆ. ಹಣಕಾಸು, ಸಂಪುಟ ವ್ಯವಹಾರ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ, ಗುಪ್ತಚರ, ಮಾಹಿತಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ ಮತ್ತು ಶಾಸನ, ಕೃಷಿ ಮಾರುಕಟ್ಟೆ ಸೇರಿ ನಗರ ಸ್ಥಳೀಯ ಸಂಸ್ಥೆಗಳು, ಬಿಡಿಎ ಮತ್ತು ಬಿಎಂಆರ್‌ಡಿಎ ವ್ಯಾಪ್ತಿಯ ನಗರ ಸ್ಥಳೀಯ ಸಂಸ್ಥೆಗಳು ಹಾಗು ಹಂಚಿಕೆಯಾಗದ ಎಲ್ಲಾ ಖಾತೆಗಳನ್ನು ತಮ್ಮ ಬಳಿಯೇ ಉಳಿಸಿಕೊಂಡಿದ್ದಾರೆ.

### ಖಾತೆಗಳ ವಿವರ

ಜಮೀರ್ ಅಹ್ಮದ್ ಖಾನ್: ವಸತಿ
ರಾಮಲಿಂಗಾ ರೆಡ್ಡಿ: ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ
ಲಕ್ಷ್ಮಣ ಸವದಿ: ಸಹಕಾರ (ಕೃಷಿ ಮಾರುಕಟ್ಟೆ ಹೊರತುಪಡಿಸಿ)
ರುದ್ರಪ್ಪ ಮಾನಪ್ಪ ಲಮಾಣಿ: ಸಕ್ಕರೆ ಮತ್ತು ಜವಳಿ
ಕೆ.ಹೆಚ್.ಮುನಿಯಪ್ಪ: ಸಮಾಜ ಕಲ್ಯಾಣ
ನರೇಂದ್ರ ಸ್ವಾಮಿ: ಕೃಷಿ
ಶಿವರಾಜ್ ತಂಗಡಗಿ: ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ
ಯು.ಟಿ.ಖಾದರ್: ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಟಿ.ರಘುಮೂರ್ತಿ: ಪರಿಶಿಷ್ಟ ಪಂಗಡಗಳ ಕಲ್ಯಾಣ
ಡಾ.ಅಜಯ್ ಸಿಂಗ್: ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ
ಚಲುವರಾಯಸ್ವಾಮಿ: ಬೃಹತ್ ಮತ್ತು ಮಧ್ಯಮ ನೀರಾವರಿ
ಮಧು ಬಂಗಾರಪ್ಪ: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಬಸವರಾಜ ರಾಯರೆಡ್ಡಿ : ಉನ್ನತ ಶಿಕ್ಷಣ
ಕೆ.ಎಂ.ಶಿವಲಿಂಗೇಗೌಡ: ಅಬಕಾರಿ
ಪುಟ್ಟರಂಗಶೆಟ್ಟಿ: ಪಶುಸಂಗೋಪನೆ ಮತ್ತು ರೇಷ್ಮೆ ಕೃಷಿ
ವಿಜಯಾನಂದ ಕಾಶಪ್ಪನವರ್: ಸಣ್ಣ ಕೈಗಾರಿಕೆಗಳು, ಸಾರ್ವಜನಿಕ ಉದ್ದಿಮೆಗಳು ಸಂತೋಷ್ ಲಾಡ್: ಕಾರ್ಮಿಕ ಮತ್ತು ಉದ್ಯೋಗ
ಕೆ.ಎಸ್.ಬಸವಂತಪ್ಪ: ಮುಜರಾಯಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ
ಎಸ್.ಎಸ್.ಮಲ್ಲಿಕಾರ್ಜುನ: ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ
ರಿಜ್ವಾನ್ ಅರ್ಷದ್: ಆಹಾರ ಮತ್ತು ನಾಗರಿಕ ಸರಬರಾಜು, ಗ್ರಾಹಕ ವ್ಯವಹಾರಗಳು
ಹೆಚ್.ಸಿ.ಬಾಲಕೃಷ್ಣ: ಪೌರಾಡಳಿತ
ಬಿ.ನಾಗೇಂದ್ರ: ಯೋಜನೆ ಮತ್ತು ಸಾಂಖ್ಯಿಕ

## ಇಎಸ್‌ಐ ಆಸ್ಪತ್ರೆ ಮೇಲ್ದರ್ಜೆಗೇರಿಸಲು ಒತ್ತಾಯ

▪ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆಗೆ ಸಂಸದ ಶ್ರೇಯಸ್ ಪಟೇಲ್ ಮನವಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಕಾರ್ಮಿಕರು ಹಾಗು ಅವರ ಕುಟುಂಬಗಳಿಗೆ ಗುಣಮಟ್ಟದ ಆರೋಗ್ಯ ಸೇವೆ ಸ್ಥಳೀಯವಾಗಿಯೇ ದೊರಕಿಸುವ ಉದ್ದೇಶದಿಂದ ನಗರದಲ್ಲಿರುವ ಇಎಸ್‌ಐ ಚಿಕಿತ್ಸಾಲಯವನ್ನು 200 ಹಾಸಿಗೆಗಳ ಪೂರ್ಣ ಪ್ರಮಾಣದ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸುವಂತೆ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರಿಗೆ ಸಂಸದ ಶ್ರೇಯಸ್ ಪಟೇಲ್ ಅವರು ಮನವಿ ಮಾಡಿದ್ದಾರೆ.

ಕೇಂದ್ರ ಸಚಿವರನ್ನು ಭೇಟಿ ಮಾಡಿದ ಅವರು, ಜಿಲ್ಲೆಯಲ್ಲಿ ಸುಮಾರು 61,337 ಇಎಸ್‌ಐ ವಿಮಾ ಫಲಾನುಭವಿಗಳು ನೋಂದಾಯಿತರಾಗಿದ್ದಾರೆ. ಆದರೆ, ಅವರಿಗೆ ಪ್ರಸ್ತುತ ಲಭ್ಯವಿರುವ ಆರೋಗ್ಯ ಸೌಲಭ್ಯಗಳು ಸಮರ್ಪಕವಾಗಿಲ್ಲ. ಗಂಭೀರ ಕಾಯಿಲೆಗಳು, ತುರ್ತು ಚಿಕಿತ್ಸೆ, ಶಸ್ತ್ರಚಿಕಿತ್ಸೆ ಹಾಗು ತಜ್ಞ ವೈದ್ಯಕೀಯ ಸೇವೆಗಳ ಅಗತ್ಯವಿದ್ದಾಗ ಇಎಸ್‌ಐ ಫಲಾನುಭವಿಗಳು ಹೊರಗಿನ ಆಸ್ಪತ್ರೆಗಳನ್ನು ಅವಲಂಬಿಸಬೇಕಾದ ಪರಿಸ್ಥಿತಿ ಇದೆ. ಇದರಿಂದ ಕಾರ್ಮಿಕರು ಮತ್ತು



ಅವರ ಕುಟುಂಬಗಳ ಮೇಲೆ ಹೆಚ್ಚುವರಿ ಆರ್ಥಿಕ ಹಾಗು ಪ್ರಯಾಣದ ಹೊರೆ ಬೀಳುತ್ತಿದೆ ಎಂದು ಮನವರಿಕೆ ಮಾಡಿಕೊಟ್ಟರು.

ಜಿಲ್ಲೆ ಕೈಗಾರಿಕೆ, ವಾಣಿಜ್ಯ ಹಾಗು ಸೇವಾ ಕ್ಷೇತ್ರಗಳಲ್ಲಿ ವೇಗವಾಗಿ ಅಭಿವೃದ್ಧಿ ಹೊಂದುತ್ತಿದೆ. ದೊಡ್ಡ

» ನಾಲ್ಕನೇ ಪುಟದಲ್ಲಿ

# ಶಿವಲಿಂಗೇಗೌಡಗೆ ಖಜಾನೆ ತುಂಬಿಸುವ ಅಬಕಾರಿ ಖಾತೆ

## ಹುಸಿಯಾದ ತೋಟಗಾರಿಕೆ, ವಸತಿ, ಪಶುಸಂಗೋಪನೆ, ನೀರಾವರಿ ಜವಾಬ್ದಾರಿ ನಿರೀಕ್ಷೆ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ಹರತೊಟ್ಟು ಸಚಿವ ಸ್ಥಾನ ಗಿಟ್ಟಿಸಿಕೊಂಡಿರುವ ಕೆ.ಎಂ.ಶಿವಲಿಂಗೇಗೌಡ ಅವರು ಅನುಭವಕ್ಕೆ ತಕ್ಕಂತೆ ಖಾತೆಗೆ ಪಟ್ಟು ಹಿಡಿಯದಿದ್ದರಿಂದ ಅಬಕಾರಿ ಖಾತೆಗೆ ತೃಪ್ತಿ ಪಟ್ಟಿಕೊಳ್ಳುವಂತಾಗಿದೆ.

ತೋಟಗಾರಿಕೆ, ವಸತಿ, ಪಶುಸಂಗೋಪನೆ ಅಥವಾ ಸಣ್ಣ ನೀರಾವರಿ ಇಲಾಖೆ ಜವಾಬ್ದಾರಿ ಸಿಗಲಿದೆ, ರೈತರು-ಬಡವರ ಪರವಾಗಿ ಕೆಲಸ ಮಾಡಲು ಅನುಕೂಲವಾಗಲಿದೆ ಎಂಬ ನಿರೀಕ್ಷೆ ಜಿಲ್ಲೆಯ ಜನರ ಮೇಲಿತ್ತು. ಆದರೆ, ಜನರ ಜೇಬಿಗೆ ಕತ್ತರಿ ಹಾಕಿ ಸರ್ಕಾರದ ಖಜಾನೆ ತುಂಬಿಸುವ ಅಬಕಾರಿ ಖಾತೆ ಸಿಕ್ಕಿದೆ.



> ಅಬಕಾರಿಯೊಂದು ಜವಾಬ್ದಾರಿಯುತ ಖಾತೆಯಾಗಿದೆ. ರಾಜ್ಯ ಸರ್ಕಾರದ ಆಯವ್ಯಯ ರಚಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಲಿದೆ. ಸರ್ಕಾರ ಮತ್ತು ಗ್ರಾಹಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕೆಲಸ ಮಾಡಲಾಗುವುದು. ಅಕ್ರಮ ಮದ್ಯ ಮಾರಾಟ ತಡೆಗೆ ಕಟ್ಟುನಿಟ್ಟಿನ ಕ್ರಮ ವಹಿಸುವ ಜೊತೆಗೆ ಕಳ್ಳಬಟ್ಟಿ ತಯಾರಿಕೆ ಮಾಡ ದಂತೆ ನೋಡಿಕೊಳ್ಳಲಾಗುವುದು.
> -ಕೆ.ಎಂ.ಶಿವಲಿಂಗೇಗೌಡ, ಅಬಕಾರಿ ಸಚಿವ

ಗ್ರಾಮೀಣ ಬದುಕಿನಿಂದ ರಾಜಕೀಯಕ್ಕೆ ಬಂದಿರುವ ಕೆ.ಎಂ.ಶಿವಲಿಂಗೇಗೌಡ ಅವರಿಗೆ ರೈತರು, ಬಡವರ ಕಷ್ಟಗಳ ಬಗ್ಗೆ ಸ್ಪಷ್ಟವಾದ ಅರಿವಿತ್ತು. ತೆಂಗು ಸೇರಿ ತೋಟಗಾರಿಕೆ ಬೆಳೆಗಳು, ಕೃಷಿ ಬಗ್ಗೆ ಸ್ವಯಂ ಅನುಭವ ಹೊಂದಿದ್ದರು. ನೀರಾವರಿ ಯೋಜನೆಗಳ ಬಗ್ಗೆ ತಿಳಿದುಕೊಳ್ಳುವ ಜೊತೆಗೆ ಬಯಲುಸೀಮೆಯಾಗಿರುವ ಅರಸೀಕೆರೆ ಕ್ಷೇತ್ರಕ್ಕೆ ನೀರು ಹರಿಸಲು ಹೋರಾಟ ಕೂಡ ನಡೆಸಿದ್ದರು. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೇ ಈ ಹಿಂದೆ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾಗಿ ರಾಜ್ಯದಲ್ಲಿನ ವಸತಿ, ನಿವೇಶನ ರಹಿತರ ಸಮಸ್ಯೆಯನ್ನು ಕಳೆದ ಮೂರು ವರ್ಷಗಳಲ್ಲಿ ಅರಿತು ಕೊಂಡಿದ್ದರು.

ಪ್ರಸ್ತುತ ಬರ ಪರಿಸ್ಥಿತಿ, ಮಳೆ ಕೊರತೆ, ಬೆಳೆ ನಷ್ಟ, ತೆಂಗು ಬೆಳೆಯಲ್ಲಿ ಕಾಡುತ್ತಿರುವ ರೋಗಬಾಧೆ, ನೀರಾವರಿ ಸಮಸ್ಯೆ ಸೇರಿ ಕೃಷಿ ಕ್ಷೇತ್ರ ಹಲವು ಸವಾಲುಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಅವರ ಅನುಭವಕ್ಕೆ ತಕ್ಕಂತೆ ತೋಟಗಾರಿಕೆ, ಕೃಷಿ, ಪಶು ಸಂಗೋಪನೆ, ವಸತಿ ಅಥವಾ ನೀರಾವರಿ ಇಲಾಖೆಗೆ ಸಂಬಂಧಿಸಿದ ಖಾತೆ ನೀಡಿದ್ದರೆ ಸಮರ್ಥವಾಗಿ ನಿಭಾಯಿಸುತ್ತಿದ್ದರು. ಅದೆಲ್ಲವನ್ನು ಬಿಟ್ಟು ಅಬಕಾರಿ ಖಾತೆ ನೀಡಿರುವುದಕ್ಕೆ ಅಭಿಮಾನಿಗಳು, ಜಿಲ್ಲೆಯ ಜನರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅಬಕಾರಿ ಇಲಾಖೆ ಜವಾಬ್ದಾರಿಯಿಂದ ಅಕ್ರಮ ಮದ್ಯ ಮಾರಾಟ ತಡೆಯಬಹುದೇ ವಿನಃ ರೈತರು, ಜನಸಾಮಾನ್ಯರ ಬದುಕಿಗೆ ಅನುಕೂಲವಾಗುವಂತಹ ಯಾವುದೇಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಲು ಸಾಧ್ಯವಾಗುವುದಿಲ್ಲ. ಸರ್ಕಾರಕ್ಕೆ ಆದಾಯ ಮಾಡಿ ಕೊಡಲಷ್ಟೇ ಈ ಖಾತೆ ಸೀಮಿತವಾಗಲಿದೆ ಎಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸರ್ಕಾರಕ್ಕೆ ಪ್ರಮುಖ ಆದಾಯ ತರುವ ಅಬಕಾರಿ ಖಾತೆ ಹೊಣೆ ಹೊತ್ತಿಕೊಂಡಿರುವ ಶಿವಲಿಂಗೇಗೌಡ ಅವರು, ಇಲಾಖೆಯ ಆಡಳಿತ, ಆದಾಯ ಸಂಗ್ರಹ, ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ, ಅಬಕಾರಿ ನಿಯಮಗಳ ಅನುಷ್ಠಾನ ಸೇರಿ ಹಲವು ಸವಾಲುಗಳು ಸಚಿವರ ಮುಂದಿವೆ.

**ಖಾತೆಗಾಗಿ ಪಟ್ಟು ಹಿಡಿಯದ ಕೆ.ಎಂ.ಶಿ.**

ಸಚಿವ ಸ್ಥಾನಕ್ಕೆ ಆಯ್ಕೆಯಾದ ಬಳಿಕ ಹಲವು ನಾಯಕರ ನಡುವೆ ತಮಗೆ ಬೇಕಾದ ಖಾತೆಗಾಗಿ ಲಾಬಿ, ಬೇಡಿಕೆಗಳು ನಡೆದಿದ್ದರೂ ಕೆ.ಎಂ.ಶಿವಲಿಂಗೇಗೌಡ ಅವರು ನಿರ್ದಿಷ್ಟ ಖಾತೆಗಾಗಿ ದೊಡ್ಡಮಟ್ಟದಲ್ಲಿ ಲಾಬಿ ನಡೆಸಲಿಲ್ಲ ಎನ್ನಲಾಗಿದೆ. ಯಾವ ಖಾತೆ ನೀಡಿದರೂ ಅದನ್ನು ಸಮರ್ಥವಾಗಿ ನಿಭಾಯಿಸುತ್ತೇನೆಂಬ ನಿಲುವನ್ನು ಅವರು ಆರಂಭದಿಂದಲೂ ವ್ಯಕ್ತಪಡಿಸುತ್ತ ಬಂದಿದ್ದರು. ಮುಖ್ಯಮಂತ್ರಿ ಹಾಗೂ ಪಕ್ಷದ ವರಿಷ್ಠರ ಮುಂದೆ ನಿರ್ದಿಷ್ಟ ಖಾತೆ ಬೇಕೆಂದು ಬೇಡಿಕೆ ಇಟ್ಟಿರಲಿಲ್ಲ. ಬದಲಾಗಿ ಜನಸಾಮಾನ್ಯರೊಂದಿಗೆ ಬೆರೆತು ಕೆಲಸ ಮಾಡಲು ಅವಕಾಶ ಕಲ್ಪಿಸುವ ಜವಾಬ್ದಾರಿ ನೀಡಿದರೆ ಸಾಕೆಂಬ ಮನೋಭಾವ ಹೊಂದಿದ್ದರು ಎನ್ನಲಾಗಿದೆ.

# ಜಿಲ್ಲೆಗೆ ಆಗಮಿಸಿದ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು

## ಹಾಸನ-ಸಕಲೇಶಪುರ ಮಾರ್ಗವಾಗಿ ಪ್ರಾಯೋಗಿಕ ಸಂಚಾರ | ಶಾಸಕ ಸಿಮೆಂಟ್ ಮಂಜು ಪೂಜೆ ಸಲ್ಲಿಸಿ ಸ್ವಾಗತ

• ಪ್ರಜೋದಯ ವರದಿ

**ಹಾಸನ:** ಬೆಂಗಳೂರು ಮತ್ತು ಮಂಗಳೂರು ನಡುವೆ ಸಂಪರ್ಕ ಕಲ್ಪಿಸುವ ಅತ್ಯಾಧುನಿಕ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಪ್ರಾಯೋಗಿಕ ಸಂಚಾರ (ಟ್ರಯಲ್ ರನ್) ಹಾಸನ ಮಾರ್ಗವಾಗಿ ಸಕಲೇಶಪುರ ನಿಲ್ದಾಣದಿಂದ ಕುಕ್ಕೆ ಸುಬ್ರಹ್ಮಣ್ಯದವರೆಗೆ ಯಶಸ್ವಿಯಾಗಿ ಸಾಗಿತು.

ಬುಧವಾರ ಬೆಳಿಗ್ಗೆ ಸಕಲೇಶಪುರ ರೈಲ್ವೆ ನಿಲ್ದಾಣಕ್ಕೆ ಆಗಮಿಸಿದ ವಂದೇ ಭಾರತ್ ರೈಲಿಗೆ ಶಾಸಕ ಸಿಮೆಂಟ್ ಮಂಜು ಅವರು ಪೂಜೆ ಸಲ್ಲಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಈ ಭಾಗದಲ್ಲಿ ವಂದೇ ಭಾರತ್ ರೈಲು ಸಂಚಾರ ಆರಂಭಿಸಲು ಶಾಸಕರು ರೈಲ್ವೆ ರಾಜ್ಯ ಖಾತೆ ಸಚಿವರಾದ ವಿ. ಸೋಮಣ್ಣ ಅವರನ್ನು ಭೇಟಿ ಮಾಡಿ ನಿರಂತರವಾಗಿ ಮನವಿ ಸಲ್ಲಿಸಿದ್ದರು. ಪೂರಕವಾಗಿ ಸಕಲೇಶಪುರ ಮಾರ್ಗದವರೆಗಿನ ರೈಲ್ವೆ ವಿದ್ಯುದ್ದೀಕರಣ ಕಾಮಗಾರಿಗಳು ಸಂಪೂರ್ಣವಾಗಿ ಪೂರ್ಣಗೊಂಡಿದ್ದು, ಈಗ ಟ್ರಯಲ್ ರನ್ ಪ್ರಕ್ರಿಯೆ ಚಾಲನೆಯಲ್ಲಿದೆ.

ಈ ವಿಶೇಷ ವಂದೇ ಭಾರತ್ ರೈಲು 20 ಬೋಗಿಗಳನ್ನು ಹೊಂದಿದ್ದು, ಏಕಕಾಲಕ್ಕೆ 1,080 ಪ್ರಯಾಣಿಕರು ಸುಖಕರವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ. ಘಾಟ್ ಪ್ರದೇಶದ ಕಡಿದಾದ ಇಳಿಜಾರಿನಲ್ಲಿ ಸುರಕ್ಷಿತವಾಗಿ ಚಲಿಸಲು ಈ ರೈಲಿನಲ್ಲಿ ಅತ್ಯಾಧುನಿಕ ಆಟೋಮ್ಯಾಟಿಕ್ ಎಮರ್ಜೆನ್ಸಿ ಬ್ರೇಕಿಂಗ್ ವ್ಯವಸ್ಥೆ ಅಳವಡಿಸಲಾಗಿದೆ. ಈ ಮೂಲಕ ಇನ್ಮುಂದೆ ಬೆಂಗಳೂರು ಹಾಗು ಕರಾವಳಿ ಭಾಗದ ಪ್ರಯಾಣಿಕರಿಗೆ ಅತ್ಯಂತ ವೇಗದ ಮತ್ತು ಐಷಾರಾಮಿ ಸಾರಿಗೆ ವ್ಯವಸ್ಥೆ ಸಿಗಲಿದೆ. ಈ ಪ್ರಾಯೋಗಿಕ ಸಂಚಾರ ಯಶಸ್ವಿಯಾದ ಬೆನ್ನಲ್ಲೇ, ಶೀಘ್ರದಲ್ಲೇ ಈ ರೈಲು ಸಾರ್ವಜನಿಕರ ಸೇವೆಗೆ ಮುಕ್ತವಾಗುವ ಸಾಧ್ಯತೆ ಇದೆ. ವಂದೇ ಭಾರತ್ ಎಕ್ಸ್‌ಪ್ರೆಸ್ ಪ್ರತಿದಿನ ನಿಯಮಿತವಾಗಿ ಸಂಚಾರ ಆರಂಭಿಸಲಿ ಎಂಬುದು ಜಿಲ್ಲೆಯ ಪ್ರಯಾಣಿಕರ ಆಶಯ.



> ಮುಂದಿನ ದಿನಗಳಲ್ಲಿ ಸಕಲೇಶಪುರಕ್ಕೆ ಇಂಟರ್‌ಸಿಟಿ ಸೇರಿ ಮತ್ತಷ್ಟು ರೈಲು ಸೇವೆಗಳನ್ನು ವಿಸ್ತರಿಸಬೇಕು. ವಂದೇ ಭಾರತ್ ರೈಲು ಪ್ರತಿದಿನ ಸಕಲೇಶಪುರದಲ್ಲಿ ನಿಲುಗಡೆ ನೀಡಿ ಸಂಚರಿಸುವಂತಾಗ ಬೇಕೆಂಬುದು ನಮ್ಮೆಲ್ಲರ ಆಶಯವಾಗಿದೆ.
> -ಸಿಮೆಂಟ್ ಮಂಜು, ಶಾಸಕ

### ಕಠಿಣ ತಿರುವುಗಳಲ್ಲಿ ಟ್ರಯಲ್ ರನ್ ಯಶಸ್ವಿ

ಅತ್ಯಂತ ಕಠಿಣ ಹಾಗು ತಿರುವುಗಳಿಂದ ಕೂಡಿದ ಶಿರಾಡಿಘಾಟ್ ಮಾರ್ಗದಲ್ಲಿ ವಂದೇ ಭಾರತ್ ರೈಲು ಸಂಚಾರ ಯಶಸ್ವಿಯಾಗಿದೆ. ರೈಲ್ವೆ ಅಧಿಕಾರಿಗಳ ತಂಡ ಸ್ಥಳಕ್ಕೆ ಆಗಮಿಸಿ ರೈಲಿನ ಪ್ರಾಯೋಗಿಕ ಸಂಚಾರಕ್ಕೆ ಸಂಬಂಧಿಸಿದ ಕಾರ್ಯಗಳನ್ನು ಪರಿಶೀಲಿಸಿತು.

**ಪ್ರಧಾನಿ, ರೈಲ್ವೆ ಸಚಿವರಿಗೆ ಅಭಿನಂದನೆ**

ಈ ವೇಳೆ ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ಮಲೆನಾಡಿನ ಜನರ ಬಹು ದಿನಗಳ ಕನಸು ನನಸಾಗುವ ಸಮಯ ಸನ್ನಿಹಿತವಾಗಿದೆ. ಬೆಂಗಳೂರು-ಮಂಗಳೂರು ನಡುವೆ ವಂದೇ ಭಾರತ್ ರೈಲಿನ

» ನಾಲ್ಕನೇ ಪುಟದಲ್ಲಿ

### ಇಂದು ಕರ್ನಾಟಕ ಬಂದ್

**ಬೆಂಗಳೂರು :** ಕರ್ನಾಟಕದಲ್ಲಿ ಮತ್ತೆ ಕಾವೇರಿ ನದಿ ನೀರು ವಿವಾದ ಮುನ್ನೆಲೆಗೆ ಬಂದಿದ್ದು, ಬರದ ಮಧ್ಯೆ ತಮಿಳುನಾಡಿಗೆ ಕಾವೇರಿ ನೀರು ಹರಿಸುವಂತೆ ಆದೇಶ ಹೊರಡಿಸಿರುವುದು ರಾಜ್ಯದ ಜನತೆಯ ಆಕ್ರೋಶಕ್ಕೆ ಕಾರಣವಾಗಿದೆ. ಕನ್ನಡ ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ಆ. 13, ಗುರುವಾರ ಕರ್ನಾಟಕ ಬಂದ್‌ಗೆ ಕರೆ ನೀಡಿದ್ದಾರೆ. ಈ ಬಂದ್‌ಗೆ ರೈತ ಸಂಘಟನೆಗಳು ಬಿಟ್ಟರೆ ಬೇರೆ ಸಂಘಟನೆಗಳು ಬೆಂಬಲಿಸಿಲ್ಲ. ಆರಂಭದಲ್ಲೇ ಬಂದ್‌ಗೆ ಬೆಂಬಲ ನೀಡುವುದಾಗಿ ಭರವಸೆ ನೀಡಿದ್ದವು. ಸ್ವಲ್ಪ ಮಳೆಯಾಗಿದ್ದರಿಂದ ಜಲಾಶಯದಲ್ಲಿ ನೀರಿನ ಪ್ರಮಾಣ ಹೆಚ್ಚಳವಾಗಿದೆ. ಮುಖ್ಯಮಂತ್ರಿ ರೈತರ ಪರ ನಿರ್ಧಾರ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

# ಸಾರ್ವಜನಿಕರ ಹಣಕ್ಕೆ ಬ್ಯಾಂಕ್ ಮಹಿಳಾ ಸಿಬ್ಬಂದಿ ಕನ್ನ

## 1 ಕೋ.ರೂ. ದುರುಪಯೋಗ | ಲೆಕ್ಕ ಪರಿಶೋಧನೆ ವೇಳೆ ಬಹಿರಂಗ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಸುರಕ್ಷತೆ ದೃಷ್ಟಿಯಿಂದ ಬ್ಯಾಂಕ್‌ನಲ್ಲಿಟ್ಟಿದ್ದ ಸುಮಾರು 1 ಕೋ.ರೂ. ಹಣವನ್ನು ಇಬ್ಬರು ಮಹಿಳಾ ಸಿಬ್ಬಂದಿ ದುರುಪಯೋಗಪಡಿಸಿಕೊಂಡಿರುವ ಘಟನೆ ತಾಲ್ಲೂಕಿನ ನುಗ್ಗೇಹಳ್ಳಿ ಹೆಚ್‌ಡಿಸಿಸಿ ಬ್ಯಾಂಕ್ ಶಾಖೆಯಲ್ಲಿ ನಡೆದಿದೆ.

ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಹಾಗು ನೊಂದವರಿಗೆ ನ್ಯಾಯ ಒದಗಿಸಬೇಕೆಂದು ಆಗ್ರಹಿಸಿ ಬುಧವಾರ ಕರ್ನಾಟಕರ ರಾಜ್ಯ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಅನೇಕ ವರ್ಷಗಳಿಂದ ಬ್ಯಾಂಕ್‌ನಲ್ಲಿ ಸ್ತ್ರೀ ಶಕ್ತಿ ಸಂಘ, ಸ್ವಸಹಾಯ ಸಂಘ, ಒಡವೆ ಸಾಲ, ರಾಗಿ



ಸಹಾಯಧನ, ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಸಾಲ ಪಡೆದಿರುವ ರೈತರ ಸಹಾಯಧನ ಸೇರಿ ವಿವಿಧ ಖಾತೆಗಳಲ್ಲಿ ಸುಮಾರು 1 ಕೋ.ರೂ. ಬ್ಯಾಂಕ್‌ನ ಇಬ್ಬರು ಮಹಿಳಾ ಸಿಬ್ಬಂದಿ ದುರುಪಯೋಗ ಮಾಡಿಕೊಂಡಿದ್ದಾರೆಂದು ಆರೋಪಿಸಿದರು.

» ನಾಲ್ಕನೇ ಪುಟದಲ್ಲಿ

### ನೌಕರರ ಅಮಾನತು, ಹಣ ಮರುಪಾವತಿ

ಬ್ಯಾಂಕ್ ಶಾಖಾ ವ್ಯವಸ್ಥಾಪಕ ಬಾಬು ಅವರು ಮಾತನಾಡಿ, ಬ್ಯಾಂಕ್‌ನ ಇಬ್ಬರು ಮಹಿಳಾ ಸಿಬ್ಬಂದಿ ನಿಷ್ಕ್ರಿಯ ಖಾತೆಗಳನ್ನು ಬಳಸಿ ಸುಮಾರು 80 ಲ.ರೂ. ವರ್ಗಾವಣೆ ಮಾಡಿಕೊಂಡಿದ್ದಾರೆ. ಮೂರು ತಿಂಗಳ ಹಿಂದೆ ಆಡಿಟ್ ವೇಳೆ ಅನುಮಾನ ಬಂದ ಹಿನ್ನಲೆಯಲ್ಲಿ ತನಿಖೆ ನಡೆಸಿ ಹಣ ವರ್ಗಾವಣೆ ಆಗಿರುವ ಬಗ್ಗೆ ಪತ್ತೆ ಹಚ್ಚಲಾಯಿತು. ಸದ್ಯ ದುರುಪಯೋಗ ಆಗಿರುವ ಹಣವನ್ನು ಆ ಸಿಬ್ಬಂದಿಯಿಂದಲೇ ಕಟ್ಟಿಸಲಾಗಿದೆ. ಜೊತೆಗೆ ಇಬ್ಬರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ ಎಂದರು.

## ವಕೀಲನ ವಿರುದ್ಧ ಪ್ರಕರಣ: ಪ್ರತಿಭಟನೆ



• ಪ್ರಜೋದಯ ವರದಿ

**ಬೇಲೂರು:** ವಕೀಲ ಪ್ರದೀಪ್ ಅವರ ವಿರುದ್ಧ ಹಳೇಬೀಡು ಪೊಲೀಸ್ ಠಾಣೆ ಪಿಎಸ್‌ಐ ಮಂಜುನಾಥ್ ಅವರು ಸುಳ್ಳು ಪ್ರಕರಣ ದಾಖಲಿಸಿದ್ದಾರೆಂದು ಆರೋಪಿಸಿ ತಾಲ್ಲೂಕು ವಕೀಲರ ಸಂಘದ ಸದಸ್ಯರು ನ್ಯಾಯಾಲಯದ ಕಲಾಪದಿಂದ ಹೊರಗುಳಿದು ಪ್ರತಿಭಟನೆ ನಡೆಸಿದರು. ಬಳಿಕ ಹಳೇಬೀಡು ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್‌ಗೆ ಮನವಿ ಸಲ್ಲಿಸಿ, ಪ್ರಕರಣದ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ವಕೀಲರ ಸಂಘದ ಅಧ್ಯಕ್ಷ ಕೆ.ಎಲ್.ನಟರಾಜ್ ಮಾತನಾಡಿ, ವಕೀಲ ಪ್ರದೀಪ್ ಅವರ ವಿರುದ್ಧ ಎಸ್‌ಸಿ-ಎಸ್‌ಟಿ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಆದರೆ, ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಸಲಾಗಿರುವ ಘಟನೆ ನಡೆದ ಸಂದರ್ಭದಲ್ಲಿ ಪ್ರದೀಪ್ ಅವರು ನ್ಯಾಯಾಲಯದ ಕಲಾಪದಲ್ಲಿ ನಿರತರಾಗಿದ್ದರು. ಅದಕ್ಕೆ ಪೂರಕವಾಗಿ ನ್ಯಾಯಾಲಯದ ದಾಖಲೆಗಳು, ವಕಾಲತ್ತು ಸೇರಿ ಅಗತ್ಯ ದಾಖಲೆಗಳು ಲಭ್ಯವಿವೆ. ಹೀಗಿದ್ದರೂ ಸುಳ್ಳು ದೂರು ಹಾಗು ಅಫಿಡವಿಟ್ ಆಧರಿಸಿ ಪ್ರಕರಣ ದಾಖಲಿಸಿರುವುದು ಖಂಡನೀಯವೆಂದು ಹೇಳಿದರು.

ವಕೀಲ ಪ್ರದೀಪ್ ಮಾತನಾಡಿ, ಪೊಲೀಸ್ ಅಧಿಕಾರಿಗಳು ಪ್ರಕರಣವನ್ನು ನಿಷ್ಪಕ್ಷಪಾತವಾಗಿ ಪರಿಶೀಲಿಸಿ, ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಸುನಿಲ್, ವಕೀಲರಾದ ಸಿ.ಎಂ.ಪೃಥ್ವಿ, ರತೀಶ್, ಲೋಕೇಶ್, ಶ್ರೀನಿಧಿ, ಭೂಮಿಕಾ, ಜಯಣ್ಣ ಸೇರಿ ಹಲವು ವಕೀಲರು ಉಪಸ್ಥಿತರಿದ್ದರು.

## ಕ್ರಿಮಿ-ಕೀಟಗಳ ವಾಸ ಸ್ಥಾನವಾಗಿರುವ ಖಾಲಿ ನಿವೇಶನ | ಕಣ್ಮುಚ್ಚಿ ಕುಳಿತ ಮಹಾನಗರ ಪಾಲಿಕೆ

# ಹಾಸನ ನಗರದಲ್ಲಿ ಮರೀಚಿಕೆಯಾದ ಸ್ವಚ್ಛತೆ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ನಗರದ ಬಡಾವಣೆಗಳಲ್ಲಿ ಸ್ವಚ್ಛತೆ ಎಂಬುದು ಮರೀಚಿಕೆಯಾಗಿದ್ದು, ಖಾಲಿ ನಿವೇಶನಗಳು ಹಾವು, ಹೆಗ್ಗಣಗಳ ಆವಾಸ ತಾಣವಾಗಿ ಮಾರ್ಪಟ್ಟಿರುವುದು ಮಾತ್ರವಲ್ಲದೆ ದುರ್ವಾಸನೆ ಹರಡುತ್ತಿವೆ.

ಶಾಂತಿನಗರ, ವಿಶ್ವೇಶ್ವರಯ್ಯ ಬಡಾವಣೆ, ತಮ್ಲಾಪುರ, ಹೇಮಾವತಿ ನಗರ, ಉತ್ತರ ಬಡಾವಣೆಯಲ್ಲಿ ಅವ್ಯವಸ್ಥೆ ಹೇಳತೀರದಾಗಿದೆ. ಅವೈಜ್ಞಾನಿಕ ರಸ್ತೆ, ಚರಂಡಿ ನಿರ್ಮಾಣದಿಂದಾಗಿ ಕೊಳಚೆ ನೀರು ರಸ್ತೆಯ ಮೇಲೆ ಹರಿಯುತ್ತಿರುವ ಪರಿಣಾಮ ಜನರು ಪರದಾಡುತ್ತಿದ್ದಾರೆ. ಸ್ವಚ್ಛತಾ ಕೆಲಸ ಕೈಗೊಳ್ಳುವಂತೆ ಮಹಾನಗರ ಪಾಲಿಕೆಗೆ ಮನವಿ ಸಲ್ಲಿಸಿ ಸುಸ್ತಾಗಿರುವ ನಿವಾಸಿಗಳು ಮೌನಕ್ಕೆ ಶರಣಾಗಿದ್ದಾರೆ. ಅನೈರ್ಮಲ್ಯದಿಂದ ಸಾಂಕ್ರಾಮಿಕ ರೋಗ ಹರಡುವ ಭೀತಿಯೂ ಕಾಡುತ್ತಿದೆ.

ಖಾಲಿ ನಿವೇಶನಗಳಲ್ಲಿ ಹಲವು ವರ್ಷಗಳಿಂದ ಯಾವುದೇ ಕಟ್ಟಡ ಕಾಮಗಾರಿ ಪ್ರಾರಂಭವಾಗದ ಹಿನ್ನಲೆಯಲ್ಲಿ ಪಾರ್ಥೇನಿಯಂ ಸೇರಿ ಇತರ ಗಿಡಗಂಟಿಗಳು ಬೆಳೆದು ನಿಂತಿವೆ. ಅದೇ ಜಾಗದಲ್ಲಿ ಸಾರ್ವಜನಿಕರು ತ್ಯಾಜ್ಯ ಸುರಿಯುತ್ತಿರುವ ಹಿನ್ನಲೆಯಲ್ಲಿ ಪ್ರದೇಶವು ದುರ್ನಾತ ಬೀರುತ್ತಿದೆ.



ಈ ಪರಿಣಾಮ ಇಲಿ, ಹೆಗ್ಗಣ, ಹಾವು ಮತ್ತಿತರ ಕ್ರಿಮಿ ಕೀಟಗಳ ಸಂಖ್ಯೆ ಹೆಚ್ಚಾಗಿ ತೊಂದರೆಯಾಗುತ್ತಿದೆ. ಹಗಲು ಹೊತ್ತಿನಲ್ಲಿ ಕಾಣಿಸಿಕೊಳ್ಳದ ಹೆಗ್ಗಣಗಳು ರಾತ್ರಿಯಾದರೆ ಮನೆ ಬಾಗಿಲಿಗೆ ಬಂದು ದರ್ಶನ ನೀಡುತ್ತಿರುವುದು ಶಾಂತಿನಗರ, ಉತ್ತರ ಬಡಾವಣೆಯಲ್ಲಿ ಕಂಡುಬಂದಿದೆ. ಹೀಗಾಗಿ ಸಾರ್ವಜನಿಕರು ಯಾವಾಗಲೂ ಮನೆ ಬಾಗಿಲು ಹಾಕಿಕೊಂಡೇ ಇರಬೇಕಾದ ದುಸ್ಥಿತಿ ನಿರ್ಮಾಣವಾಗಿದೆ. ಖಾಲಿ ನಿವೇಶನಗಳಲ್ಲಿ ಮನೆ ನಿರ್ಮಿಸಿಕೊಳ್ಳದ ಮಾಲೀಕರಿಗೆ ದಂಡ ವಿಧಿಸುವ ಅಥವಾ ಸ್ವಚ್ಛತೆಯ ಹೊಣೆ ಹೊರೆಸಲಾಗಿದೆಯಾದರೂ ನಗರದಲ್ಲಿ ಕಾರ್ಯಗತಕ್ಕೆ ಬಂದಿಲ್ಲ. ಖಾಲಿ ನಿವೇಶನಗಳಲ್ಲಿ ಮನೆ ನಿರ್ಮಿಸಿ ಕೊಂಡಿರುವವರು ತಮ್ಮ ಸುತ್ತಲಿನ ಪರಿಸರ ಕಂಡು ಮರುಗುವಂತಾಗಿದೆ.

**ಚರಂಡಿ ನೀರು ಹರಿದು ಹೋಗುತ್ತಿಲ್ಲ**

ಶಾಂತಿನಗರದ ಬಹುತೇಕ ಕಡೆ ಚರಂಡಿ ನೀರು ಸರಾಗವಾಗಿ ಹರಿದು ಹೋಗಲು ವ್ಯವಸ್ಥೆ ಇಲ್ಲವಾಗಿದೆ. ನಿರ್ಮಿಸಿರುವ ಚರಂಡಿ ಸಂಪೂರ್ಣ ಗಿಡಗಂಟಿಗಳಿಂದ ಮುಚ್ಚಿರುವುದರಿಂದ ಕೊಳಚೆ ನೀರು ಒಂದೆಡೆ ಸಂಗ್ರಹವಾಗಿ ದುರ್ವಾಸನೆ ಬೀರುತ್ತಿದೆ. ಅದರಿಂದ ಸೊಳ್ಳೆಗಳ ಕಾಟ ವಿಪರೀತವಾಗಿದೆ. ಕಡಿಮೆ ಖರ್ಚಿನಲ್ಲಿ ಸ್ವಚ್ಛತೆ ಕೆಲಸ ಮುಗಿಯುವ ಹಾಗಿದ್ದರೆ ನಾವೇ ಮಾಡಿಕೊಳ್ಳುತ್ತಿದ್ದೆವು. ಆದರೆ, ಭಾರೀ ಹಣ ವ್ಯಯವಾಗುವುದರಿಂದ ಸುತ್ತಲಿನ ನಿವಾಸಿಗಳು ಮನಸ್ಸು ಮಾಡುತ್ತಿಲ್ಲವೆಂದು ಸ್ಥಳೀಯ ನಿವಾಸಿ ಹೇಳಿದರು.

ಬಡಾವಣೆ ಮುಖ್ಯ ರಸ್ತೆಗಳು ಸಂಪೂರ್ಣ ಹದಗೆಟ್ಟು ಸ್ವಲ್ಪ ಮಳೆಯಾದರೂ ಆಳೆತ್ತರ ಗುಂಡಿಯಲ್ಲಿ ನೀರು ನಿಲ್ಲುತ್ತದೆ. ಈ ರಸ್ತೆಗಳಲ್ಲಿ ಬೈಕ್ ಓಡಿಸುವುದು ಸಾಹಸದ ಕೆಲಸವಾಗಿದೆ. ಅಲ್ಪ ಎಚ್ಚರ ತಪ್ಪಿದರೂ ಗುಂಡಿಗೆ ಬಿದ್ದು ಗಾಯ ಮಾಡಿಕೊಳ್ಳುವಂತಾಗಿದೆ. ಇನ್ನು ಬೀದಿ ದೀಪಗಳಿಲ್ಲದೆ ಸಂಜೆ ಬಳಿಕ ಮನೆಯಿಂದ ಹೊರಬರಲು ಸಾಧ್ಯವಾಗುತ್ತಿಲ್ಲ ಎಂಬುದು ಅವರ ಆರೋಪವಾಗಿದೆ.

**ಸಮಸ್ಯೆ ಯಾರಿಗೆ ಹೇಳುವುದು**

ನಿಗದಿತ ತೆರಿಗೆ ಪಾವತಿಸಿದರೂ ಮೂಲ ಸೌಕರ್ಯಗಳಿಲ್ಲ. ಮಹಾನಗರ ಪಾಲಿಕೆಗೆ ಚುನಾಯಿತ ಪ್ರತಿನಿಧಿಗಳಿಲ್ಲದೆ ಸಮಸ್ಯೆಯನ್ನು ಯಾರಿಗೆ ಹೇಳುವುದು ಎನ್ನುವಂತಾಗಿದೆ. ಅಧಿಕಾರಿಗಳಿಗೆ ಹೇಳಿದರೆ ಸ್ಪಂದನೆ ಸಿಗುವುದಿಲ್ಲ. ವಾರ್ಡ್ ಸದಸ್ಯರು ಇದ್ದಿದ್ದರೆ ಅವರಿಗೆ ದುಂಬಾಲು ಬಿದ್ದು ಕೆಲಸ ಮಾಡಿಸಿಕೊಳ್ಳಬಹುದಿತ್ತು. ಓಟಿನ ಆಸೆಗೆ ಅವರು ಮುತುವರ್ಜಿ ವಹಿಸುತ್ತಿದ್ದರು. ಆದರೆ, ಚುನಾವಣೆ ನಡೆಯದೆ ಭಾರೀ ಸಮಸ್ಯೆಯಾಗಿದೆ ಎಂದರು.

ಬಡಾವಣೆ ಮಾತ್ರವಲ್ಲದೆ ಮುಖ್ಯ ರಸ್ತೆಗಳಲ್ಲೂ ಸ್ವಚ್ಛತೆ ಮರೀಚಿಕೆಯಾಗಿದೆ. ರಸ್ತೆಯ ಎಲ್ಲೆಂದರಲ್ಲಿ ಕಸದ ರಾಶಿಗಳು ಗೋಚರಿಸುತ್ತಿವೆ. ಮಹಾನಗರ ಪಾಲಿಕೆಯಲ್ಲಿ ಪೌರ ಕಾರ್ಮಿಕರ ಕೊರತೆಯಿಂದ ಸ್ವಚ್ಛತಾ ಕೆಲಸಗಳು ಸಮರ್ಪಕವಾಗಿ ಆಗುತ್ತಿಲ್ಲ. ಹಾಸನ ನಗರಸಭೆಯಿಂದ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿದ ಬಳಿಕ ಸಮಸ್ಯೆಗಳು ಜಟಿಲವಾಗುತ್ತಲೇ ಇವೆ.

### ಇತಿಹಾಸ ನೆನಪಿಟ್ಟುಕೊಳ್ಳುವ ಕೆಲಸ ಮಾಡಲು ಶ್ರೀಗಳ ಸಲಹೆ

• ಪ್ರಜೋದಯ ವರದಿ

**ಮಾಡಾಳು:** ಸಚಿವ ಸ್ಥಾನದ ಅವಕಾಶವನ್ನು ಬಡವರ ಏಳಿಗೆಗೆ ಬಳಸಿಕೊಳ್ಳುವ ಮೂಲಕ ಇತಿಹಾಸದ ಪುಟಗಳಲ್ಲಿ ತಮ್ಮ ಹೆಸರು ಚಿರಸ್ಥಾಯಿಯಾಗಿ ಉಳಿಯುವಂತೆ ಕೆಲಸ ಮಾಡಿ ಎಂದು ನಿರಂಜನ ಪೀಠದ ರುದ್ರಮುನಿ ಸ್ವಾಮೀಜಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರಿಗೆ ಸಲಹೆ ನೀಡಿದರು.

ಅರಸೀಕೆರೆ ತಾಲ್ಲೂಕಿನ ಕಣಕಟ್ಟೆ ಹೋಬಳಿಯಲ್ಲಿ ಬರ ಪರಿಶೀಲನೆಗೆ ಆಗಮಿಸಿದ್ದ ಸಚಿವರು ಮಾರ್ಗಮಧ್ಯೆ ನಿರಂಜನ ಪೀಠಕ್ಕೆ ಭೇಟಿ ಶ್ರೀಗಳ ಆಶೀರ್ವಾದ ಪಡೆದರು. ಈ ವೇಳೆ ಮಾತನಾಡಿದ ಸ್ವಾಮೀಜಿ, ಭ್ರಷ್ಟಾಚಾರ ಮುಕ್ತ ವ್ಯವಸ್ಥೆ ರೂಪಿಸುವುದು ನಿಮ್ಮ ಆದ್ಯತೆಯಾಗಬೇಕು. ಶಿಕ್ಷಣ ಕ್ಷೇತ್ರದಲ್ಲಿ ಲಂಚ ಕೊಡದಿದ್ದರೆ ಕೆಲಸ ಆಗುತ್ತಿಲ್ಲ. ರೈತರು ತಮ್ಮ ಮೇಲೆ ಇಟ್ಟಿರುವ ನಿರೀಕ್ಷೆಗಳನ್ನು ಹುಸಿಗೊಳಿಸದೆ ಕ್ಷೇತ್ರ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಕೆರೆಗಳನ್ನು ತುಂಬಿಸಲು ನೀರಾವರಿ ಯೋಜನೆಯನ್ನು ಪೂರ್ಣಗೊಳಿಸಬೇಕೆಂದರು.

» ನಾಲ್ಕನೇ ಪುಟದಲ್ಲಿ

CMYK CMYK CMYK CMYK

# ಗಾಂಧಿ, ನೆಹರೂಗಳ ನಡುವೆ ಕಳೆದುಹೋದ ವೆಂಕಯ್ಯ!

**“ಗಣರಾಜ್ಯೋತ್ಸವದ ದಿನವಾದರೂ ಹಾರಾಡುವ ಬಾವುಟ ಕಾಣಬಹುದಾ ಅಂದರೆ ಆಗಲೂ ನಮ್ಮ ದುರದೃಷ್ಟಕ್ಕೆ ಹಾರಾಡುವ ಬಾವುಟದ ದೃಶ್ಯ ಸಿಗುತ್ತಲೇ ಇರಲಿಲ್ಲ. ದೂರದ ನೆಹರೂ ಮೈದಾನದಲ್ಲಿ, ಗಾಂಧಿ ಮಂದಿರದ ಎದುರು ದೊಡ್ಡ ಬಾವುಟಗಳು ಹಾರಾಡುತ್ತವಂತೆ ಅಂತ ಕೇಳಿದ್ದಷ್ಟೆ. ಹೀಗಾಗಿ ನಮ್ಮ ಪಾಲಿಗೆ ಈ ಹಾರಾಡುತ್ತಿದ್ದ ಬಾವುಟ ಅಂದರೆ ಅದು ಈ ಪದ್ಯದ ಜತೆಗಿದ್ದ ಚಿತ್ರವಷ್ಟೆ. ಆದರೆ ಇದೊಂದು ಮಾದರಿ ಚಿತ್ರವಾಗಿಬಿಟ್ಟಿತ್ತು.**





ಪದಸಾಗರ

ಎಷ್ಟು ಕೃತಘ್ನರಲ್ಲವೇ ನಾವು? ರಾಷ್ಟ್ರಧ್ವಜ ಕೊಟ್ಟ ಮಹಾತ್ಮನನ್ನು ಬರೋಬ್ಬರಿ ಎಪ್ಪತ್ತೈದು ವರ್ಷಗಳ ನಂತರ ನೆನಪಿಸಿಕೊಳ್ಳುತ್ತಿದ್ದೇವೆ. ಗಾಂಧಿ ನೆಹರೂಗಳಿಗೆ ದೇಶದ ತುಂಬ ರಸ್ತೆಗಳು, ಕ್ರೀಡಾಂಗಣಗಳು. ಏನೇನಕ್ಕೆಲ್ಲ ಅವರ ಹೆಸರಿಡಬಹುದೋ ಇಟ್ಟಿದ್ದೇವೆ. ಎಲ್ಲಿ ಪ್ರತಿಮೆ ನಿರ್ಮಿಸಬಹುದೋ ನಿರ್ಮಿಸಿದ್ದೇವೆ. ಆದರೆ ಪಿಂಗಳಿ ವೆಂಕಯ್ಯನವರನ್ನು ನೆನಪಿಸಿಕೊಳ್ಳೋಕೆ ಪುಸ್ತಕದಂದು ಪಾಠವಿಲ್ಲ.

**ಏರುತಿಹುದು ಹಾರುತಿಹುದು.. ನೋಡು ನಮ್ಮ ಬಾವುಟ..**
**ತೋರುತಿಹುದು ಹೊಡೆದು ಹೊಡೆದು.. ಬಾನಿನಗಲ ಪಟಪಟ.**
**ಕೇಸರಿ ಬಿಳಿ ಹಸಿರು ಮೂರು.. ಬಣ್ಣ ನಡುವೆ ಚಕ್ರವು.. ಸತ್ಯ**
**ಶಾಂತಿ ತ್ಯಾಗ ಮೂರ್ತಿ.. ಗಾಂಧಿ ಹಿಡಿದ ಚರಕವು**
**ಇಂಥ ಧ್ವಜವು ನಮ್ಮ ಧ್ವಜವು.. ನೋಡು ಹಾರುತಿರುವುದು..**
**ಧ್ವಜದ ಶಕ್ತಿ ನಮ್ಮ ಭಕ್ತಿ.. ನಾಡ ಸಿರಿಯ ಮೆರೆವುದು**
**ಕೆಂಪು ಕಿರಣ ತುಂಬಿ ಗಗನ.. ಹೊನ್ನ ಬಣ್ಣವಾಗಿದೆ.. ನಮ್ಮ**
**ನಾಡ ಗುಡಿಯ ಬಣ್ಣ.. ನೋಡಿರಣ್ಣ ಹೇಗಿದೆ**

**- ಕಯ್ಯಾರ** ಕಿಞ್ಞಣ್ಣ ರೈ




ಕೈಕಟ್ಟಿಕೊಂಡು ಮುಂದಕ್ಕೆ ಹಿಂದಕ್ಕೆ ಮೈ ತೂಗಿಸುತ್ತಾ ಟಿಪಿಕಲ್ ಪದ್ಯ ವಾಚನ ಶೈಲಿಯಲ್ಲಿ ಬಾಯಿಪಾಠ ಮಾಡಿಕೊಂಡು ಬಂದು ಹಾಡುತ್ತಿದ್ದ ನಮ್ಮ ಬಾವುಟ ಪದ್ಯ ಇದು.

ಎರಡನೇ ತರಗತಿಯ ಕನ್ನಡ ಭಾರತಿ ಪುಸ್ತಕದಲ್ಲಿತ್ತು. ಪೂರ್ತಿ ಪದ್ಯ ಓದಿ ಕಯ್ಯಾರ ಕಿಞ್ಞಣ್ಣ ರೈ ಹೆಸರು ಹೇಳಿದರೇನೇ ಸಮಾಧಾನ. ಆ ಪದ್ಯದ ಜತೆಗೆ ಒಂದು ಬಾವುಟದ ಚಿತ್ರವಿತ್ತು. ಇಡೀ ಪುಸ್ತಕದಲ್ಲಿ ಪದೇಪದೆ ನೋಡುತ್ತಿದ್ದ ಫೋಟೋ ಅದು. ಮೂರು ಗೋಲಾಕಾರದ ಮೆಟ್ಟಿಲುಗಳ ಮೇಲೊಂದು ಕಂಬ. ಕಂಬದ ತುದಿಯಲ್ಲಿ ಗಾಳಿಯಲ್ಲಿ ಅಲೆಅಲೆಯಾಗಿ ತೇಲುತ್ತಾ ಹಾರಾಡುತ್ತಿರುವ ತ್ರಿವರ್ಣ ಧ್ವಜ. ಬಾವುಟದ ಮೇಲೆ ಲವ್ ಆದ ಘಳಿಗೆ ಅದು. ಸ್ವಾತಂತ್ರ್ಯ ದಿನದಂದು ಮಲೆನಾಡಿನ ಸಾಗರದಂಥ ಊರಿನಲ್ಲಿ ಸದಾ ಮಳೆ. ಶಾಲೆಯ ಬಾವುಟ ಹಾರಾಡುತ್ತಿರಲಿಲ್ಲ. ಒದ್ದೆಮುದ್ದೆಯಾಗಿರುತ್ತಿತ್ತು.

ಗಣರಾಜ್ಯೋತ್ಸವದ ದಿನವಾದರೂ ಹಾರಾಡುವ ಬಾವುಟ ಕಾಣಬಹುದಾ ಅಂದರೆ ಆಗಲೂ ನಮ್ಮ ದುರದೃಷ್ಟಕ್ಕೆ ಹಾರಾಡುವ ಬಾವುಟದ ದೃಶ್ಯ ಸಿಗುತ್ತಲೇ ಇರಲಿಲ್ಲ. ದೂರದ ನೆಹರೂ ಮೈದಾನದಲ್ಲಿ, ಗಾಂಧಿ ಮಂದಿರದ ಎದುರು ದೊಡ್ಡ ಬಾವುಟಗಳು ಹಾರಾಡುತ್ತವಂತೆ ಅಂತ ಕೇಳಿದ್ದಷ್ಟೆ. ಹೀಗಾಗಿ ನಮ್ಮ ಪಾಲಿಗೆ ಈ ಹಾರಾಡುತ್ತಿದ್ದ ಬಾವುಟ ಅಂದರೆ ಅದು ಈ ಪದ್ಯದ ಜತೆಗಿದ್ದ ಚಿತ್ರವಷ್ಟೆ. ಆದರೆ ಇದೊಂದು ಮಾದರಿ ಚಿತ್ರವಾಗಿಬಿಟ್ಟಿತ್ತು.

ಬಾವುಟದ ಚಿತ್ರ ಬಿಡಿಸಬೇಕು ಅಂದರೆ ನಮ್ಮ ಬಾವುಟ ಪದ್ಯದ ಚಿತ್ರವೇ ಸ್ಯಾಂಪಲ್. ಬೆಂಗಳೂರಿಗೆ ಬಂದಾಗ ವಿಧಾನ ಸೌಧದ ಎದುರು ಹಾರುತ್ತಿದ್ದ ಬಾವುಟ ನೋಡುವುದೇ ಒಂದು ಸಂಭ್ರಮ. ಇಸ್ರೋ ಕೆಲಸಕ್ಕೆ ಸೇರಿದ್ದಾಗಲೂ ಆ ಕಚೇರಿಯ ಮೇಲೆ ಹಾರುತ್ತಿದ್ದ ಬಾವುಟವೊಂದು ನನ್ನ ಪ್ರತಿದಿನದ ಆಕರ್ಷಣೆ. ಇಂದಿಗೂ ತಾರಾಲಯದ ಬಳಿ ಹಾದು ಹೋಗುವಾಗ ಅ ನಿಂತು ಅತಿ ಎತ್ತರದಲ್ಲಿ ಹಾರುವ ಬಾವುಟವನ್ನು ಒಂದರೆ ನಿಮಿಷವಾದರೂ ಕಣ್ತುಂಬಿಕೊಂಡು ಬರುತ್ತೇನೆ. ಚಂದ್ರಾ ಲೇಔಟಿನಲ್ಲಿ ಎರಡು ವರ್ಷಗಳ ಹಿಂದೆ ಒಂದು ಬೃಹತ್ ಧ್ವಜಸ್ತಂಭ ನಿಲ್ಲಿಸಿ ಧ್ವಜಾ ರೋಹಣ ಮಾಡಿದ್ದಾರೆ.

ನನ್ನ ಪಾಲಿನ ಪ್ರಮುಖ ಆಕರ್ಷಣೆ ಅದು. ಜಗತ್ತಿನ ಯಾವ ದೇಶದ ಧ್ವಜವೂ ನಮ್ಮ ಧ್ವಜದಷ್ಟು ಸುಂದರ ಅಲ್ಲ ಅಂತಲೇ ಅನಿಸುತ್ತದೆ. ಆಯಾ ದೇಶಗಳ ಪ್ರಜೆಗಳಿಗೆ ಅವರವರ ಧ್ವಜದ ಬಗ್ಗೆ ಹೀಗೆಯೇ ಅನಿಸಬಹುದೇನೋ. ಆದರೆ ನಮ್ಮ ಧ್ವಜ ಚಿತ್ರಿಸಲೂ ಸರಳ.

ನೋಡಲೂ ಸುಂದರ ಅನ್ನೋದರಲ್ಲಿ ಅನುಮಾನವೇ ಇಲ್ಲ. ಅದೆಷ್ಟೋ ದೇಶಗಳ ಧ್ವಜಗಳು ಭಾರತದ ಬಾವುಟವನ್ನೇ ಅಲ್ಪಸ್ವಲ್ಪ ಬದಲಿಸಿಕೊಂಡು ಬಂದಂತಿವೆ. ಏರುತಿಹುದು ಹಾರುತಿಹುದು... ಮತ್ತು ಝುಂಡಾ ಊಂಚಾ ರಹೇ ಹಮಾರಾ.... ಈ ಎರಡು ಪದ್ಯಗಳು ನನ್ನ ಮಟ್ಟಿಗೆ ಈ ದೇಶದ ರಾಷ್ಟ್ರಧ್ವಜದ ಬಗೆಗಿನ ಅಭಿಮಾನವನ್ನು ಯಾವತ್ತೂ ಅಳಿಸಿ ಹೋಗದ ಹಾಗೆ ಭದ್ರವಾಗಿ ಕಾಯ್ದಿಟ್ಟಿವೆ. ಆದರೆ ಇಷ್ಟೂ ವರ್ಷಗಳಲ್ಲಿ ಈ ಬಾವುಟದ ನಿರ್ಮಾತೃ ಯಾರು? ಇದನ್ನು ಡಿಸೈನ್ ಮಾಡಿದ್ದು ಯಾರು? ಎಂಬ ಪ್ರಶ್ನೆ ನನ್ನೊಳಗೆ ಬಂದೇ ಇರಲಿಲ್ಲ.

ರಾಷ್ಟ್ರಧ್ವಜ ಅಧಿಕೃತವಾಗಿ ಎಲ್ಲಿ ತಯಾರಾಗುತ್ತದೆ ಎಂಬ ವಿಚಾರ ತಿಳಿದಿದ್ದು ಕೂಡ ದಶಕದ ಹಿಂದೆ ತೆರೆಕಂಡಿದ್ದ ವಿಷ್ಣುವರ್ಧನ್ ಅಭಿನಯದ ವೀರಪ್ಪ ನಾಯ್ಕ ಚಿತ್ರದಿಂದಲೇ. ಹುಬ್ಬಳ್ಳಿ ಧಾರವಾಡದ ಗರಗ ಮತ್ತು ಬೆಂಗೇರಿ ಬಗ್ಗೆ ತಿಳಿದುಕೊಂಡಿದ್ದೇ ಈ ಸಿನಿಮಾ ಬಂದ ನಂತರ. ಇಡೀ ರಾಷ್ಟ್ರಕ್ಕೆ ಅಧಿಕೃತ ರಾಷ್ಟ್ರಧ್ವಜ ತಯಾರಿಸಿಕೊಡೋದು ಕರ್ನಾಟಕ ಎಂದು ತಿಳಿದಾಗ ಒಂದು ಹೆಮ್ಮೆ. ಆದರೆ ರಾಷ್ಟ್ರಧ್ವಜವನ್ನು ರೂಪಿಸಿದ್ದು ಯಾರು ಎಂಬ ಪ್ರಶ್ನೆಯೂ ಮೂಡಿರಲಿಲ್ಲ.

ಒಂದೊಮ್ಮೆ ಯಾರಾದರೂ ಕೇಳಿದ್ದಿದ್ದರೆ ಗಾಂಧೀಜಿ ಅಂದುಬಿಡುತ್ತಿನೇನೋ! ಈಗ ಮೂರು ವರ್ಷಗಳ ಹಿಂದೆ ಪ್ರಧಾನಿ ಮೋದಿ ದೇಶಕ್ಕೊಂದು ಸಂದೇಶ ನೀಡಿದ್ದರು. ಆಗ ಎರಡನೇ ತಾರೀಕು ದೇಶದ ಎಲ್ಲ ನೆಟ್ಟಿಗರು ತಮ್ಮ ಸೋಷಿಯಲ್ ಮೀಡಿಯಾದ ಕವರ್ ಪೇಜಲ್ಲಿ ಈ ಫೋಟೋ ಹಾಕಿಕೊಳ್ಳಿ ಎಂದು ಮನವಿ ಮಾಡಿದ್ದರು. ಯಾರ ಫೋಟೋ ಅದು? ಪಿಂಗಳಿ ವೆಂಕಯ್ಯನವರ ಫೋಟೋ. ಮೋದಿಯವರ ಆ ಸಂದೇಶದ ತನಕ ನನಗೂ ಸೇರಿದಂತೆ ಬಹಳಷ್ಟು ಜನರಿಗೆ ಆ ಹೆಸರೇ ಗೊತ್ತಿರಲಿಲ್ಲ.

ಹೌದು. ರಾಷ್ಟ್ರಧ್ವಜವನ್ನು ರೂಪಿಸಿದ ಆ ಪುಣ್ಯಾತ್ಮನ ಹೆಸರು ಪಿಂಗಳಿ ವೆಂಕಯ್ಯ. ಸ್ವತಂತ್ರ ಭಾರತದ ರಾಷ್ಟ್ರಧ್ವಜಕ್ಕೆ ಅಫಿಷಿಯಲಿ ಈಗ ಎಪ್ಪತ್ತೊಂಬತ್ತು ತುಂಬಿ ಎಂಬತ್ತು ತಲುಪುತ್ತಿದೆ. ಧ್ವಜದ ಜನನಕ್ಕೆ ಕಾರಣರಾದ ಪಿಂಗಳಿ ವೆಂಕಯ್ಯನವರ ಜನ್ಮದಿನ ಆಗ ಎರಡು. ಎಷ್ಟು ಕೃತಘ್ನರಲ್ಲವೇ ನಾವು? ರಾಷ್ಟ್ರಧ್ವಜ ಕೊಟ್ಟ ಮಹಾತ್ಮನನ್ನು ಬರೋಬ್ಬರಿ ಎಪ್ಪತ್ತೈದು ವರ್ಷಗಳ ನಂತರ ನೆನಪಿಸಿಕೊಳ್ಳುತ್ತಿದ್ದೇವೆ.

ಕೊನೆಯ ಬಾರಿ ಪಿಂಗಳಿ ವೆಂಕಯ್ಯನವರನ್ನು ನೆನಪಿಸಿಕೊಂಡದ್ದು ಯಾವಾಗ? 2009-10ರಲ್ಲಿ. ಅವರ ಸ್ಮರಣಾರ್ಥ ಒಂದು ಅಂಚೆಚೀಟಿ ಬಿಡುಗಡೆಯಾಗಿತ್ತಂತೆ. ಗಾಂಧಿ ನೆಹರೂಗಳಿಗೆ ದೇಶದ ತುಂಬ ರಸ್ತೆಗಳು, ಕ್ರೀಡಾಂಗಣಗಳು. ಏನೇನಕ್ಕೆಲ್ಲ ಅವರ ಹೆಸರಿಡಬಹುದೋ ಇಟ್ಟಿದ್ದೇವೆ. ಎಲ್ಲಿ ಪ್ರತಿಮೆ ನಿರ್ಮಿಸಬಹುದೋ ನಿರ್ಮಿಸಿದ್ದೇವೆ. ಆದರೆ ಪಿಂಗಳಿ ವೆಂಕಯ್ಯನವರನ್ನು ನೆನಪಿಸಿ ಕೊಳ್ಳೋಕೆ ಪುಸ್ತಕದಂದು ಪಾಠವಿಲ್ಲ, ಹೀಗಿದ್ದರು ಅನ್ನೋಕೊಂದು ಪ್ರತಿಮೆ ಇಲ್ಲ. ಅವರ ಸ್ಮರಣಾರ್ಥ ಕಟ್ಟಡ, ರಸ್ತೆ ಏನಂದ್ರ ಏನೂ ಇಲ್ಲ.

ಕಾಟಾಚಾರಕ್ಕೊಂದು ಅಂಚೆಚೀಟಿ ಬಿಡುಗಡೆ ಮಾಡಿ ಕೈತೊಳೆದುಕೊಂಡಿತ್ತು ಅಂದಿನ ಮನಮೋಹನ್ ಸರಕಾರ. ಹಾಗಂತ ಇಂದಿನ ಪ್ರಧಾನಿ ಮೋದಿಯೂ ಪಿಂಗಳಿ ವೆಂಕಯ್ಯನವರ ಗೌರವಾರ್ಥ ದೊಡ್ಡದೇನನ್ನೂ ಮಾಡಿಲ್ಲ. ಅವರು ಮಾಡಿದ ಮಹದುಪಕಾರ ಅಂದರೆ, ಆಗ 2, 2023ರಂದು ಸೋಷಿಯಲ್ ಮೀಡಿಯಾದ ಮೂಲಕ ಇಡೀ ದೇಶಕ್ಕೆ ಪಿಂಗಳಿ ವೆಂಕಯ್ಯನವರನ್ನು ಪರಿಚಯಿಸಿಕೊಟ್ಟಿದ್ದು. ಈ ಮೂರು ವರ್ಷಗಳಲ್ಲಿ ಪ್ರತಿ ಮಾಧ್ಯಮ, ಸಾಮಾಜಿಕ ಜಾಲತಾಣ ಪಿಂಗಳಿ ವೆಂಕಯ್ಯನವರನ್ನು ಗಟ್ಟಿಯಾಗಿ ದಾಖಲಿಸಿತು.

ಫಲವಾಗಿ ಲಕ್ಷಾಂತರ ಕೋಟ್ಯಂತರ ಜನರಿಗೆ ವೆಂಕಯ್ಯನವರ ಪರಿಚಯವಾಯಿತು. ಅವರ ಕೊಡುಗೆಗೆ ಕೊನೆಗೂ ಅಕ್ಷರಮಟ್ಟಿಗಿನ ಗೌರವ ಸಂದಿತು. ಪಿಂಗಳಿ ವೆಂಕಯ್ಯನವರು ಹುಟ್ಟಿದ್ದು 1876 ಆಗ 2ರಂದು. ಮದರಾಸಿನ ಬ್ರಾಹ್ಮಣ ಕುಟುಂಬದಲ್ಲಿ ಜನಿಸೋ ವೆಂಕಯ್ಯನವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ, ಉನ್ನತ ಶಿಕ್ಷಣಕ್ಕೆ ಕೇಂಬ್ರಿಜ್ ಯೂನಿವರ್ಸಿಟಿಗೆ ಹೋದರು. ಜಿಯೋಲಜಿ, ಕೃಷಿ, ಶೈಕ್ಷಣಿಕ ಶಾಸ್ತ್ರ, ಭಾಷಾ ಶಾಸ್ತ್ರ, ಇವೆಲ್ಲದರ ಕಡೆ ಆಸಕ್ತಿ ತೋರೋ ವೆಂಕಯ್ಯನವರು, ತಮ್ಮ ವಿದ್ಯಾಭ್ಯಾಸ ಮುಗಿಸಿದ ತಕ್ಷಣ ವಾಪಸ್ ಭಾರತಕ್ಕೆ ಬಂದರು. ಆ ಹೊತ್ತಿಗಿನ್ನೂ ಭಾರತ ಬ್ರಿಟಿಷರ ಬಿಗಿ ಹಿಡಿತದ ಇತ್ತು. ಆಗ ವೆಂಕಯ್ಯನವರು ಬ್ರಿಟಿಷ್ ಇಂಡಿಯನ್ ಆರ್ಮಿಗೆ ಭರ್ತಿ ಆಗ್ತಾರೆ. ಅದೇ ಅವರ ಜೀವನದಲ್ಲಿ ದೊಡ್ಡ ತಿರುವು ಕೂಡ ಆಗುತ್ತದೆ. ಆರ್ಮಿಯಿಂದ ಅವರನ್ನು ಯುದ್ಧಕಾರಣಕ್ಕಾಗಿ ದಕ್ಷಿಣ ಆಫ್ರಿಕಾಗೆ ಕಳಿಸಲಾಗುತ್ತೆ. ಅಲ್ಲಿ ಪ್ರಪ್ರಥಮ ಬಾರಿಗೆ ಅವರು ಮೋಹನದಾಸ್ ಗಾಂಧೀಯವರನ್ನು ಭೇಟಿ ಮಾಡ್ತಾರೆ. ಗಾಂಧಿಯವರ ತತ್ತ್ವಗಳಿಂದ ಮತ್ತು ಜೀವನ ಶೈಲಿಗಳಿಂದ ತುಂಬ ಪ್ರಭಾವಕ್ಕೆ ಒಳಗಾಗುವ ವೆಂಕಯ್ಯ, ಅಲ್ಲಿಂದ ಮುಂದೆ ಗಾಂಧೀಜಿಯ ಅಪ್ಪಟ ಹಿಂಬಾಲಕರಾಗಿಬಿಡ್ತಾರೆ.



ಗಾಂಧೀಜಿಗಿಂತ ಕೇವಲ ಏಳು ವರ್ಷ ಚಿಕ್ಕವರಾದ್ರೂ, ಅವರನ್ನು ಗುರುಸ್ಥಾನದಲ್ಲಿಟ್ಟು ನೋಡ್ತಾರೆ ವೆಂಕಯ್ಯನವರು. 1913 ರಲ್ಲಿ ಆಂಧ್ರದ ವಿದ್ಯಾಸಂಸ್ಥೆಯಲ್ಲಿ, ಜಪಾನಿ ಭಾಷೆಯಲ್ಲಿ ಭಾಷಣ ಮಾಡುವ ವೆಂಕಯ್ಯನವರಿಗೆ ಭಯಂಕರ ಖ್ಯಾತಿ ಸಿಗುತ್ತದೆ. ಅಂದಿನಿಂದ ಅವರನ್ನು ಎಲ್ಲರೂ ಜಪಾನ್ ವೆಂಕಯ್ಯ ಅಂತ ಕರೆಯಲು ಪ್ರಾರಂಭಿಸುತ್ತಾರೆ. ತಮಾಷೆ ಅಂದರೆ ವೆಂಕಯ್ಯನವರಿಗೆ ಕಾಲದಿಂದ ಕಾಲಕ್ಕೆ ಹೊಸ ವಿಶೇಷಣ ಸೇರಿಕೊಳ್ಳುತ್ತಲೇ ಹೋಗುತ್ತದೆ.

ವಜ್ರದ ಗಣಿಯಲ್ಲಿ ಕರ್ತವ್ಯ ನಿರ್ವಹಿಸಿದ್ದ ಅವರನ್ನು ವಜ್ರಾಲ ವೆಂಕಯ್ಯ ಅಂತಲೂ ಕರೆಯುತ್ತಿದ್ದರು. ಈ ಮಧ್ಯ ಅಮ್ರ ಕಾಂಬೋಡಿಯಾದ ಹತ್ತಿ ಬಗ್ಗೆ ಅಧ್ಯಯನ ನಡೆಸಿ ಅದರಲ್ಲಿ ಪಿಹೆಚ್.ಡಿ ಪಡೆದುಕೊಳ್ಳುತ್ತಾರೆ. ಆಗ ಮತ್ತೊಂದು ಹೊಸ ಬಿರುದು ಸೇರಿಕೊಳ್ಳುತ್ತದೆ. ಜನರೆಲ್ಲ ಅವರನ್ನು ಪತ್ತಿ ವೆಂಕಯ್ಯ ಎಂದು ಕರೆಯೋಕೆ ಶುರುವಿಡುತ್ತಾರೆ. ಪತ್ತಿ ಅಂದ್ರೆ ತೆಲುಗಲ್ಲಿ ಹತ್ತಿ ಎಂದರ್ಥ. ಇದೇ ಅಧ್ಯಯನ ಮುಂದೆ ಅವರಿಗೆ ಬಾವುಟ ರೂಪಿಸಲು ಪ್ರೇರಣೆ ಆಗಿಬಿಡುತ್ತದೆ. ರಾಷ್ಟ್ರಕ್ಕೊಂದು ಧ್ವಜ ಕೊಡಬೇಕು ಎಂಬ ಕನಸು ಮೊಳಕೆ ಒಡೆಯುತ್ತದೆ.

1916ರಲ್ಲಿ ಭಾರತಕ್ಕೊಂದು ರಾಷ್ಟ್ರಧ್ವಜ ಎಂಬ ಚಿಕ್ಕ ಪುಸ್ತಕವನ್ನು ಪ್ರಕಟಿಸುವ ವೆಂಕಯ್ಯನವರು, 1919-1921ರ ಅವಧಿಯಲ್ಲಿ ಒಟ್ಟಾರೆ ಸುಮಾರು ಮೂವತ್ತು ವಿನ್ಯಾಸದ ಧ್ವಜ ತಯಾರು ಮಾಡಿ ಅಂದಿನ ನಾಯಕರ ಎದುರು ಇಡುತ್ತಾರೆ. ಕೇಸರಿ ಮತ್ತು ಹಸಿರು ಬಣ್ಣದಿಂದ ಕೂಡಿದ್ದ ಹಾಗೂ ಕಮಲದ ದಳಗಳನ್ನು ಹೊಂದಿದ್ದ ಬಹಳಷ್ಟು ವಿನ್ಯಾಸಗಳು ಒಂದ ಒಂದು ಕಾರಣಕ್ಕೆ ಅಪ್ರೂವ್ ಆಗುವುದೇ ಇಲ್ಲ. ವಿಶೇಷವಾಗಿ ಗಮನಿಸಬೇಕಾದ ಅಂಶ ಅಂದ್ರೆ, ಅಂದು ತಯಾರಾದ ಎಲ್ಲ ವಿನ್ಯಾಸಗಳಲ್ಲೂ ವಂದೇ ಮಾತರಂ ಎಂಬ ಘೋಷವಾಕ್ಯ ಇತ್ತು.

ಅಂದಿನ ಕಾಂಗ್ರೆಸ್ ನಾಯಕರು ಸುತರಾಂ ಆ ಧ್ವಜಗಳನ್ನು ಒಪ್ಪಿಕೊಳ್ಳಲಿಲ್ಲ. ಅಂತಿಮವಾಗಿ ವೆಂಕಯ್ಯನವರು ಕೇಸರಿ ಮತ್ತು ಹಸಿರು ಬಣ್ಣದ ವಿನ್ಯಾಸ ತಯಾರು ಮಾಡಿದಾಗ, ಶಿಕ್ಷಣ ತಜ್ಞ ಮತ್ತು ಸ್ವಾತಂತ್ರ್ಯ ಹೋರಾಟಗಾರ ಲಾಲಾ ಹ ರಾಜ್ ಅವರು, ಬಾವುಟದ ಮಧ್ಯದಲ್ಲಿ ಒಂದು ಚಿಹ್ನೆ ಇರಲಿ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಆಗ ಬಾವುಟ ಮಧ್ಯದಲ್ಲಿ ಚಕ್ರ ಅಳವಡಿಸಲಾಗುತ್ತದೆ. ಈ ಬಾವುಟವನ್ನು ನೋಡುವ ಗಾಂಧಿ, ಅಂತಿಮವಾಗಿ ಒಂದು ಸಲಹೆ ಕೊಡುತ್ತಾರೆ... ಕೇಸರಿ ಹಸಿರು ಬಣ್ಣಗಳ ಮಧ್ಯೆ ಬಿಳಿ ಬಣ್ಣ ಬರಲಿ. ಬಿಳಿ ಬಣ್ಣದ ಮೇಲೆ ಚಕ್ರ ಬರಲಿ ಅಂತ!

ಗಾಂಧೀಜಿ ಮಾತನ್ನು ಗೌರವಿಸುವ ವೆಂಕಯ್ಯ, ನಡುವೆ ಚಕ್ರವಿರುವ ತ್ರಿವರ್ಣ ಧ್ವಜವನ್ನು ತಯಾರಿಸಿ ಗಾಂಧಿಯೆದುರು ಇಡುತ್ತಾರೆ. ಈ ಬಾವುಟವನ್ನು ಗಾಂಧಿ ಬಹಳ ಸಂತೋಷದಿಂದ ಒಪ್ಪಿ ಅಂತಿಮಗೊಳಿಸುತ್ತಾರೆ. 1947ರ ಜುಲೈ 22ರಂದು ಈ ಧ್ವಜಕ್ಕೆ ರಾಷ್ಟ್ರಧ್ವಜ ಎಂಬ ಅಧಿಕೃತ ಒಪ್ಪಿಗೆ ಸಿಗುತ್ತದೆ. ಪಿಂಗಳಿ ವೆಂಕಯ್ಯ ಈ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿ ಆಗುತ್ತಾರೆ.

ಬ್ರಿಟಿಷ್ ಸರಕಾರದ ಅಡಿಯಲ್ಲಿ ಹಲವಾರು ಕರ್ತವ್ಯಗಳನ್ನು ನಿಭಾಯಿಸುತ್ತಾರೆ. ರಾಷ್ಟ್ರಧ್ವಜವನ್ನೂ ರೂಪಿಸುತ್ತಾರೆ. ಆದರೆ ತಮ್ಮ ವೈಯಕ್ತಿಕ ಜೀವನದಲ್ಲಿ ಮಾತ್ರ ಎಂದಿಗೂ ಸುಖವನ್ನು ಕಾಣುವುದೇ ಇಲ್ಲ. ಬಡತನದ ತಮ್ಮ ಬದುಕನ್ನು ಮುಗಿಸಿಬಿಡ್ತಾರೆ. 1963 ಜುಲೈ ನಾಲ್ಕರಂದು ಪಿಂಗಳಿ ವೆಂಕಯ್ಯನವರ ದೇಹಾಂತ್ಯವಾಗುತ್ತದೆ. ದೇಶಕ್ಕೆ ಧ್ವಜ ರೂಪಿಸಿಕೊಟ್ಟ ಈ ಪುಣ್ಯಾತ್ಮನನ್ನು ದೇಶ ಅಂದೇ ಸಂಪೂರ್ಣವಾಗಿ ಮರೆತುಬಿಡುತ್ತದೆ. ಮತ್ತೆ ನೆನಪಿಸಿಕೊಂಡಿದ್ದು ಅವರು ತೀರಿಕೊಂಡ ನಲವತ್ತಾರು ವರ್ಷಗಳ ನಂತರ. ಅಂದ್ರೆ, 2009ರಲ್ಲಿ. ಅಂಚೆಚೀಟಿ ಬಿಡುಗಡೆ ಮಾಡುವ ಮೂಲಕ. ಆನಂತರ ಮತ್ತೆ ನೆನಪಾಗಿದ್ದು, 2023ರಲ್ಲಿ.

ಸದ್ಯ ಅಂದಿನಿಂದ ನಿರಂತರವಾಗಿ ಪಿಂಗಳಿ ವೆಂಕಯ್ಯನವರ ಸ್ಮರಣೆಯಾಗುತ್ತಲಿದೆ. ಸೋಷಿಯಲ್ ಮೀಡಿಯಾಗಳಲ್ಲಿ ವಿಡಿಯೋಗಳು, ಸ್ಟೋರಿಗಳು ಹರಿದಾಡುತ್ತಿವೆ. ಕೇಂದ್ರ ಸರಕಾರ ಆಗ ಎರಡರಂದು ವೆಂಕಯ್ಯನವರನ್ನು ನೆನಪಿಸಿಕೊಳ್ಳುವುದನ್ನು ಮರೆಯುತ್ತಿಲ್ಲ. ಧ್ವಜ ಅನ್ನೋದು ದೇಶದ ಉಡುಪಿದ್ದಂತೆ. ಉಡುಪು ಕೊಟ್ಟಾತನನ್ನು ದೇಶ ಮರೆಯಬಾರದಲ್ಲವೇ? ಬಾವುಟವನ್ನು ಪರಿಚಯಿಸುವುದರ ಜತೆಜತೆಗೆ ಪಠ್ಯದ ಮೂಲಕ ಪಿಂಗಳಿ ವೆಂಕಯ್ಯನವರನ್ನು ಚಿಕ್ಕಂದಿನಿಂದಲೇ ದೇಶದ ಪ್ರಜೆಗಳಿಗೆ ಪರಿಚಯಿಸಿಕೊಡಬೇಕಿದೆ. ಈ ದೇಶ ಅಂದರೆ ಕೇವಲ ಗಾಂಧಿ ನೆಹರೂ ಅಲ್ಲ ಎಂಬುದನ್ನು ಇತಿಹಾಸದ ಇಂಥ ಪ್ರಮುಖ ವಿಷಯಗಳ ಮೂಲಕ ಮನಗಾಣಬೇಕಿದೆ.

**- ನವೀನ್** ಸಾಗರ್

# ಡಿಜಿಟಲ್ ಪಾವತಿ ಶುಲ್ಕ: ಸಾಧಕ ಬಾಧಕಗಳು

**“ಯಾವುದೇ ವಿಷಯದಲ್ಲಿ ತಮ್ಮದೇ ನರೇಟಿವ್ ಸೃಷ್ಟಿಸುವ ಸಾಮರ್ಥ್ಯ ಪಡೆದುಕೊಂಡಿರುವ ಸಾಮಾಜಿಕ ಮಾಧ್ಯಮಗಳಲ್ಲಿ ಇನ್ಮುಂದೆ ಪ್ರತಿಯೊಂದು ಯುಪಿಐ ವಹಿವಾಟಿಗೂ ಶುಲ್ಕ ಪಾವತಿಸಬೇಕು ಎಂಬ ಅರ್ಥ ಕೊಡುವ ಪೋಸ್ಟ್‌ಗಳು ವೈರಲ್ ಆಗುತ್ತಿವೆ. ಇದರಿಂದಾಗಿ ಕೋಟ್ಯಂತರ ಬಳಕೆದಾರರು ಮತ್ತು ಸಣ್ಣ ವ್ಯಾಪಾರಿಗಳು ಆತಂಕಕ್ಕೆ ಒಳಗಾಗಿದ್ದಾರೆ.**






ಪಾವತಿ ಪ್ರಪಂಚ ಆಜುಮಾಸು 145 ಕೋಟಿಯಷ್ಟು ಜನಸಂಖ್ಯೆ ಹೊಂದಿರುವ ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಯುನಿಫೈಡ್ ಪೇಮೆಂಟ್ಸ್ ಇಂಟರ್ ಫೇಸ್ (ಯುಪಿಐ) ಯಾನೆ ಡಿಜಿಟಲ್ ಪಾವತಿ ವ್ಯವಸ್ಥೆ ತಂದಿರುವ ಕ್ರಾಂತಿ ಅಭೂತ ಪೂರ್ವವಾದದ್ದು. ಹಳ್ಳಿಯ ಮೂಲೆಯ ಕಿರಾಣಿ ಅಂಗಡಿಯಿಂದ ಹಿಡಿದು ನಗರದ ಬೃಹತ್ ಶಾಪಿಂಗ್ ಮಾಲ್‌ಗಳವರೆಗೆ ಇಂದು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಕ್ಷಣ ಮಾತ್ರದಲ್ಲಿ ಹಣ ಪಾವತಿಸುವುದು ಬಹುತೇಕರ ಸಾಮಾನ್ಯ ದಿನಚರಿ. ಈ ಅತ್ಯಂತ ಜನಪ್ರಿಯ ಉಚಿತ ಸೇವೆಗೆ ಶುಲ್ಕ ವಿಧಿಸುವ ಕುರಿತಾದ ಮಸೂದೆ ತಿದ್ದುಪಡಿ ವದಂತಿಗಳು, ಎನ್‌ಪಿಸಿಐ ಇತ್ತೀಚೆಗೆ ತಂದಿರುವ ಪಿಪಿಐ ಮಾರ್ಗಸೂಚಿಗಳು ಹಾಗೂ ಆರ್‌ಬಿಐ ಪರಿಶೀಲನೆಗಳ ಕುರಿತು ಜನಸಾಮಾನ್ಯರಲ್ಲಿ ಚರ್ಚೆ ಮತ್ತು ವ್ಯಾಪಾರಿಗಳಲ್ಲಿ ತಳಮಳ ಸೃಷ್ಟಿಸಿವೆ.

ಯಾವುದೇ ವಿಷಯದಲ್ಲಿ ತಮ್ಮದೇ ನರೇಟಿವ್ ಸೃಷ್ಟಿಸುವ ಸಾಮರ್ಥ್ಯ ಪಡೆದುಕೊಂಡಿರುವ ಸಾಮಾಜಿಕ ಮಾಧ್ಯಮಗಳಲ್ಲಿ ಇನ್ಮುಂದೆ ಪ್ರತಿಯೊಂದು ಯುಪಿಐ ವಹಿವಾಟಿಗೂ ಶುಲ್ಕ ಪಾವತಿಸಬೇಕು ಎಂಬ ಅರ್ಥ ಕೊಡುವ ಪೋಸ್ಟ್‌ಗಳು ವೈರಲ್ ಆಗುತ್ತಿವೆ. ಇದರಿಂದಾಗಿ ಕೋಟ್ಯಂತರ ಬಳಕೆದಾರರು ಮತ್ತು ಸಣ್ಣ ವ್ಯಾಪಾರಿಗಳು ಆತಂಕಕ್ಕೆ ಒಳಗಾಗಿದ್ದಾರೆ. ಆದರೆ, ವಾಸ್ತವವೇ ಬೇರೆ ಇದೆ.

ಕೇಂದ್ರ ಸರಕಾರ, ಹಣಕಾಸು ಸಚಿವಾಲಯ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ನೀಡಿರುವ ಸ್ಪಷ್ಟನೆಯ ಪ್ರಕಾರ, ಸಾಮಾನ್ಯ ಬಳಕೆದಾರರು (ಗ್ರಾಹಕರು) ತಮ್ಮ ದೈನಂದಿನ ವಹಿವಾಟುಗಳಿಗೆ, ಸ್ನೇಹಿತರಿಗೆ ಅಥವಾ ಕುಟುಂಬದವರಿಗೆ ಬ್ಯಾಂಕ್ ಖಾತೆಯಿಂದ ಹಣ ಕಳುಹಿಸಲು ಯುಪಿಐ ಹಣ ವರ್ಗಾವಣೆಯ ಡಿಜಿಟಲ್ ವ್ಯವಸ್ಥೆಯನ್ನು ಎಂದಿನಂತೆ ಉಚಿತವಾಗಿಯೇ ಬಳಸಬಹುದು. ಈಗ ಮಾಡಿರುವ ಶುಲ್ಕದ ನಿಯಮವು ಕೇವಲ ಪಿಪಿಐ ವಾಲೆಟ್ ಮತ್ತು ಕ್ರೆಡಿಟ್ ಕಾರ್ಡ್ ಬಳಸಿ ಮಾಡುವ ವ್ಯಾಪಾರಿ ವಹಿವಾಟುಗಳಿಗೆ ಮಾತ್ರ ಅನ್ವಯವಾಗಲಿದೆ.

ಸಾಮಾನ್ಯ ಬ್ಯಾಂಕ್ ಖಾತೆಗಳ ಮೂಲಕ ನಡೆಯುವ ಯುಪಿಐ ವರ್ಗಾವಣೆಗೆ ಯಾವುದೇ ಶುಲ್ಕ ವಿಲ್ಲ ಎನ್ನುವ ಸ್ಪಷ್ಟತೆಯನ್ನು ಸರಕಾರ ನೀಡಿದೆ. ಬೀದಿಬದಿ ವ್ಯಾಪಾರಿಗಳು, ಬಾಡಿಗೆ ವಾಹನ ಚಲಾಯಿಸುವವರು ಮತ್ತು ದೈನಂದಿನ ಚಿಲ್ಲರೆ ವ್ಯಾಪಾರಸ್ಥರಿಗೆ ಈ ಶುಲ್ಕದಿಂದ ಸಂಪೂರ್ಣ ವಿನಾಯಿತಿ ಮುಂದುವರಿಯುವ ಬಗ್ಗೆ ಸರಕಾರ ಸ್ಪಷ್ಟತೆ ಹೊಂದಿದೆ. ಸರಿಯಾದ, ಸಮರ್ಪಕ ಮತ್ತು ಅಧಿಕೃತ ಮಾಹಿತಿಯ ಕೊರತೆಯಿಂದ ಜನರಲ್ಲಿನ ಆತಂಕ ಇನ್ನೂ ಪೂರ್ಣ ಪ್ರಮಾಣದಲ್ಲಿ ತಗ್ಗಿಲ್ಲ. ಈ ವ್ಯವಸ್ಥೆಯ ಕುರಿತು ಒಂದಿಷ್ಟು ವಿಚಾರಗಳನ್ನು ಸರಳವಾಗಿ ಅರ್ಥೈಸಿಕೊಳ್ಳಲು ಪ್ರಯತ್ನಿಸೋಣ.

ಡಿಜಿಟಲ್ ಪಾವತಿಗಳಿಗೆ ಶುಲ್ಕ ವಿಧಿಸುವ ವಿಚಾರದಲ್ಲಿ ಮುಖ್ಯವಾಗಿ ಅರ್ಥ ಮಾಡಿಕೊಳ್ಳಬೇಕಾದ ತಾಂತ್ರಿಕ ಪದವೆಂದರೆ ಎಂಡಿಆರ್. ಗ್ರಾಹಕರು ವಸ್ತು ಕೊಂಡಾಗ ಅಥವಾ ಸೇವೆ ಸ್ವೀಕರಿಸಿದಾಗ ಡಿಜಿಟಲ್ ರೂಪದಲ್ಲಿ ಹಣ ಪಾವತಿಸುತ್ತಾರೆ. ಆ ವಹಿವಾಟನ್ನು ಯಶಸ್ವಿಯಾಗಿ ನಿರ್ವಹಿಸಲು ಬ್ಯಾಂಕ್‌ಗಳು ಮತ್ತು ಪಾವತಿ ಸೇವಾ ಸಂಸ್ಥೆಗಳು ತಾಂತ್ರಿಕ ವೇದಿಕೆ ಒದಗಿಸುತ್ತವೆ. ಈ ಸೇವೆಗಾಗಿ ವ್ಯಾಪಾರಿಯು ಸೇವಾದಾರರಿಗೆ ಪಾವತಿಸಬೇಕಾದ ನಿರ್ದಿಷ್ಟ ಶೇಕಡಾ ವಾರು ಶುಲ್ಕದ ಹೆಸರು ಎಂಡಿಆರ್.

2019ರ ಜನವರಿಯಿಂದ ಭಾರತ ಸರಕಾರವು ಯುಪಿಐ ಮತ್ತು ರುಪೇ ಡೆಬಿಟ್ ಕಾರ್ಡ್ ವಹಿವಾಟುಗಳ ಮೇಲಿನ ಈ ಎಂಡಿಆರ್ ಶುಲ್ಕವನ್ನು ಸಂಪೂರ್ಣವಾಗಿ ರದ್ದುಗೊಳಿಸಿತ್ತು. ಇದರಿಂದಾಗಿ ವ್ಯಾಪಾರಿಗಳು ಯಾವುದೇ ಹೆಚ್ಚುವರಿ ಆರ್ಥಿಕ ಹೊರೆಯಿಲ್ಲದೆ ಡಿಜಿಟಲ್ ಪಾವತಿಗಳನ್ನು ಸ್ವೀಕರಿಸಲು ಆರಂಭಿಸಿದರು. ಇದು ದೇಶದಲ್ಲಿ ಯುಪಿಐ ಬಳಕೆಯ ಕ್ರಾಂತಿ ಮತ್ತು ಕ್ಷಿಪ್ರ ಬೆಳವಣಿಗೆಗೆ ಆನೆಬಲ ನೀಡಿತು.

ಒಂದು ಕಡೆ ಗ್ರಾಹಕರಿಗೆ ಈ ಡಿಜಿಟಲ್ ಸೇವೆ ಉಚಿತವಾಗಿ ಸಿಗುತ್ತಿದ್ದರೆ, ಇನ್ನೊಂದು ಕಡೆ ಈ ವ್ಯವಸ್ಥೆಯನ್ನು ನಿರ್ವಹಿಸುವ ಬ್ಯಾಂಕುಗಳು ಮತ್ತು ಪಾವತಿ ಸೇವಾ ಸಂಸ್ಥೆಗಳು ಈ ಸೇವೆಯನ್ನು ದೇಶಾದ್ಯಂತ 24/7 ಆವರ್ತನದಲ್ಲಿ ನೀಡಲು ದೊಡ್ಡ ಮೊತ್ತವನ್ನು ಭರಿಸುತ್ತಿವೆ. ಯುಪಿಐ ವ್ಯವಸ್ಥೆಯು ವೇಗವಾಗಿ ಬೆಳೆದಂತೆ, ಅದರ ಸರ್ವರ್‌ಗಳ ನಿರ್ವಹಣೆ, ತಾಂತ್ರಿಕ ಮೂಲಸೌಕರ್ಯಗಳ ಮೇಲ್ದರ್ಜೆಗೇರಿಸುವಿಕೆ, ಡೇಟಾ ಭದ್ರತೆ ಮತ್ತು ಸೈಬರ್ ವಂಚನೆಗಳನ್ನು ತಡೆಯುವ ವ್ಯವಸ್ಥೆಗಳಿಗಾಗಿ ಪ್ರತಿ ವರ್ಷ ಸಾವಿರಾರು ಕೋಟಿ ರೂಪಾಯಿಗಳ ವೆಚ್ಚ-ಹೂಡಿಕೆ ಮಾಡಬೇಕಾಗುತ್ತದೆ.

ಶೂನ್ಯ ಎಂಡಿಆರ್ ನೀತಿಯಿಂದಾಗಿ, ಬ್ಯಾಂಕುಗಳಿಗೆ ಮತ್ತು ಈ ವ್ಯವಸ್ಥೆ ಒದಗಿಸುತ್ತಿರುವ ಸಂಸ್ಥೆಗಳಿಗೆ ನಿರ್ವಹಣಾ ವೆಚ್ಚವನ್ನು ಭರಿಸಲು ಯಾವುದೇ ನೇರ ಆದಾಯದ ಮೂಲವಿಲ್ಲದಂತಾಗಿದೆ. ಇಂಥಾ ವೆಚ್ಚಗಳು ಬ್ಯಾಂಕುಗಳಿಗೆ ಅಯಾಚಿತ ಆರ್ಥಿಕ ಹೊರೆ ಎಂಬುದು ನಿರ್ವಿವಾದ. ಹೀಗಾಗಿ, ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ಮುಂದಿನ ದಿನಗಳಲ್ಲಿ ಸುಸ್ಥಿರವಾಗಿ ನಡೆಸಿ ಕೊಂಡು ಹೋಗಲು ಮತ್ತು ತಾಂತ್ರಿಕವಾಗಿ ಮತ್ತಷ್ಟು ಬಲಪಡಿಸಲು, ಕನಿಷ್ಠ ಶುಲ್ಕವನ್ನು ವಿಧಿಸುವುದು ಅನಿವಾರ್ಯ ಎಂದು ಬ್ಯಾಂಕಿಂಗ್ ವಲಯವು ಸರಕಾರವನ್ನು ಒತ್ತಾಯಿಸುತ್ತಲೇ ಬಂದಿದೆ.

ಒತ್ತಾಯಕ್ಕೆ ಪೂರಕವಾಗಿ ಕೇಂದ್ರ ಸರಕಾರ ಒಂದಷ್ಟು ನಿರ್ಣಯ ತೆಗೆದುಕೊಳ್ಳಲು ಅಣಿಯಾಗಿದೆ. ಅದರ ಮುಂದುವರಿದ ಭಾಗವೇ ಎನ್‌ಪಿಸಿಐ ಜಾರಿಗೆ ತಂದಿರುವ ಪಿಪಿಐ ವಾಲೆಟ್ ಮತ್ತು ಕ್ರೆಡಿಟ್ ಕಾರ್ಡ್ ಆಧಾರಿತ ಯುಪಿಐ ವಹಿವಾಟುಗಳ ಮೇಲಿನ ಶುಲ್ಕದ ಮಾರ್ಗಸೂಚಿಗಳು. ತೆರಿಗೆ ಮತ್ತು ಇತರೆ ಕಾಯ್ದೆಗಳ ತಿದ್ದುಪಡಿ ವಿಧೇಯಕ 2026ರ ಹೊಸ ನಿಯಮಾವಳಿಯು ಎಂಡಿಆರ್/ಇಂಟರ್ ಚೇಂಜ್ ಶುಲ್ಕವನ್ನು ನಿಗದಿಪಡಿಸುವ, ನಿಯಂತ್ರಿಸುವ ಮತ್ತು ವಿಧಿಸುವ ಅಧಿಕಾರವನ್ನು ಎನ್‌ಪಿಸಿಐ ಮತ್ತು ರಿಸರ್ವ್ ಬ್ಯಾಂಕ್‌ಗೆ ನೀಡಿದೆ.

ನಿಯಮಾವಳಿಯು ಜಾರಿಗೆ ಬಂದ ನಂತರ, ಸರಕಾರವು ಈ ಬಗ್ಗೆ ಸ್ಪಷ್ಟವಾದ ಅಧಿಸೂಚನೆಗಳನ್ನೂ ನೀಡಿದೆ. ಅಧಿಕೃತ ಮಾಹಿತಿಯ ಪ್ರಕಾರ, ಪಿಪಿಐ (ಪ್ರಿಪೇಯ್ಡ್ ಪೇಮೆಂಟ್ ಇನ್ ಸ್ಟ್ರುಮೆಂಟ್ಸ್) ವಾಲೆಟ್ ಮೂಲಕ ನಡೆಯುವ 2000 ರೂಪಾಯಿಗಿಂತ ಮೇಲ್ಪಟ್ಟ ವ್ಯಾಪಾರಿ ವಹಿವಾಟುಗಳ ಮೇಲೆ 1.1%ರವರೆಗೆ ಇಂಟರ್‌ಚೇಂಜ್ ಶುಲ್ಕವನ್ನು ವಿಧಿಸಬಹುದು. ಈ ಮೂಲಕ ಸಣ್ಣ ವ್ಯಾಪಾರಿಗಳನ್ನು ರಕ್ಷಿಸುವ ಸಮತೋಲಿತ ಹೆಜ್ಜೆಯನ್ನು ಸರಕಾರ ಇಡುತ್ತಿದೆ. ಇದು ಸದ್ಯಕ್ಕಿರುವ ಮಾಹಿತಿ.

**ಈ ನಿಯಮಾವಳಿಗಳ ಜಾರಿಯಿಂದ ಆಗಲಿರುವ ಸಂಭಾವ್ಯ ಅನುಕೂಲಗಳು:**

ಬ್ಯಾಂಕುಗಳು ಮತ್ತು ಪಾವತಿ ಸೇವಾ ಸಂಸ್ಥೆಗಳಿಗೆ ನಿರ್ದಿಷ್ಟ ಆದಾಯದ ಮೂಲ ಸೃಷ್ಟಿಯಾಗುವುದರಿಂದ, ಅವರು ಯುಪಿಐ ಮೂಲಸೌಕರ್ಯವನ್ನು ಇನ್ನಷ್ಟು ಬಲಪಡಿಸಲು ಈ ಆದಾಯ ಸಹಕಾರಿ. ಸೈಬರ್ ಭದ್ರತೆ ವ್ಯವಸ್ಥೆಯಲ್ಲಿ ಹೆಚ್ಚಿನ ಹೂಡಿಕೆ ಮಾಡಿ ಗ್ರಾಹಕರ ಹಣ ಮತ್ತು ದತ್ತಾಂಶ ಹೆಚ್ಚು ಸುರಕ್ಷಿತವಾಗಿಡಬಹುದು. ಹಬ್ಬದ ದಿನ ಅಥವಾ ವಹಿವಾಟುಗಳ ಸಂಖ್ಯೆ ಮಿತಿಮೀರಿದಾಗ ಸರ್ವರ್ ಡೌನ್ ಆಗಿ ಪಾವತಿ ವಿಫಲವಾಗುವ ಸಮಸ್ಯೆಗಳು ಸಾಕಷ್ಟಿವೆ.

ಸೇವಾ ಶುಲ್ಕದಿಂದ ಬರುವ ಈ ಆದಾಯವನ್ನು ಸರ್ವರ್ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಬಳಸಿ, ಇಂತಹ ತಾಂತ್ರಿಕ ಅಡಚಣೆಗಳನ್ನು ಗಣನೀಯವಾಗಿ ಕಡಿಮೆ ಮಾಡಬಹುದು. ಯಾವುದೇ ತಂತ್ರಜ್ಞಾನ ಬೆಳೆಯ ಬೇಕಾದರೆ ಸಂಶೋಧನೆ, ಅಭಿವೃದ್ಧಿ ಮತ್ತು ನಿರಂತರ ಅಪ್‌ಗ್ರೇಡ್ ಅಗತ್ಯ. ಎಂಡಿಆರ್ ಮರುಪರಿಚಯಿಸುವುದರಿಂದ ಪಾವತಿ ವಲಯದ ಸ್ಟಾರ್ಟಪ್‌ಗಳಿಗೆ ಮತ್ತು ಆ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಕಂಪನಿಗಳಿಗೆ ಹೊಸ ತಂತ್ರಜ್ಞಾನಗಳನ್ನು ಆವಿಷ್ಕರಿಸಲು ಆರ್ಥಿಕ ಬಲ ಸಿಗಲಿದೆ.

**ಅನಾನುಕೂಲಗಳು ಮತ್ತು ಎದುರಾಗಲಿರುವ ಸವಾಲುಗಳು:**

ಸರಕಾರವು ಕೇವಲ ವಾಲೆಟ/ಕ್ರೆಡಿಟ್ ಕಾರ್ಡ್ ಬಳಕೆಯ ಬೃಹತ್ ವ್ಯಾಪಾರಿಗಳಿಗೆ ಮಾತ್ರ ಶುಲ್ಕ ವಿಧಿಸಿದರೂ, ಆ ವ್ಯಾಪಾರಿಗಳು ತಮಗೆ ತಗಲುವ ಈ ಹೆಚ್ಚುವರಿ ವೆಚ್ಚವನ್ನು ಸರಕು ಮತ್ತು ಸೇವೆಗಳ ಬೆಲೆಯನ್ನು ಹೆಚ್ಚಿಸುವ ಮೂಲಕ ಪರೋಕ್ಷವಾಗಿ ಗ್ರಾಹಕರಿಗೆ ವರ್ಗಾಯಿಸಲಿದ್ದಾರೆ. ಹಾಗಾದಾಗ ಈ ವೆಚ್ಚವನ್ನು ಗ್ರಾಹಕರು ವಿಧಿಯಿಲ್ಲದೆ ಭರಿಸಲೇಬೇಕು!



ಶುಲ್ಕದ ಕುರಿತಾದ ಗೊಂದಲ ಮತ್ತು ಭೀತಿಯಿಂದಾಗಿ, ಅನೇಕ ವ್ಯಾಪಾರಿಗಳು ಯುಪಿಐ ಕ್ಯೂಆರ್ ಕೋಡ್‌ಗಳನ್ನು ತೆಗೆದು ಹಾಕಿ, ಮತ್ತೆ ನಗದು ವ್ಯವಹಾರಕ್ಕೆ ಮರಳುವ ಸಾಧ್ಯತೆ ಇದೆ. ಕಪ್ಪುಹಣ ನಿಯಂತ್ರಿಸುವ ನಿಟ್ಟಿನಲ್ಲಿ ಇದು ತೀವ್ರ ಹಿನ್ನಡೆಯಾಗಬಹುದು. ಈ ಸೇವಾ ಶುಲ್ಕವು ಕೇವಲ ನಿರ್ದಿಷ್ಟ ಮಾದರಿಯ ವ್ಯಾಪಾರಿಗೆ ಎನ್ನುವ ನಿಯಮ ಬಂದರೂ, ಸಮರ್ಪಕ ಮಾಹಿತಿಯ ಅರಿವಿನ ಕೊರತೆಯಿಂದ ಸಣ್ಣ ವ್ಯಾಪಾರಿಗಳು ಕೂಡ ತಾವು ಶುಲ್ಕ ಕಟ್ಟಬೇಕಾಗಬಹುದು ಎನ್ನುವ ಹೆದರಿಕೆಯಿಂದ ಡಿಜಿಟಲ್ ಪಾವತಿಯಿಂದ ವಿಮುಖರಾಗಬಹುದು.

ಭಾರತವು ಇತ್ತೀಚಿನ ದಿನಗಳಲ್ಲಿ ಕ್ಯಾಶ್‌ಲೆಸ್ ಎಕಾನಮಿಯ ಕಡೆಗೆ ವೇಗವಾಗಿ ಹೆಜ್ಜೆ ಹಾಕುತ್ತಿದೆ. ದೇಶದ ಮೂಲೆ ಮೂಲೆಗಳಿಗೂ ಮೊಬೈಲ್ ನೆಟ್ ವರ್ಕ್ ಮತ್ತು ಯುಪಿಐ ವ್ಯವಸ್ಥೆ ತಲುಪುತ್ತಿದೆ. ಈ ನಿರ್ಣಾಯಕ ಹಂತದಲ್ಲಿ ಈ ಶುಲ್ಕದ ಪ್ರಸ್ತಾಪವು ಡಿಜಿಟಲ್ ಪಾವತಿ ವ್ಯವಸ್ಥೆ ಅಳವಡಿಕೆಯ ವೇಗವನ್ನು ಒಂದಷ್ಟು ತಗ್ಗಿಸಬಹುದು.




ಅಪಾಯವಿದೆ.

ಸಾಮಾಜಿಕ ಮಾಧ್ಯಮಗಳಲ್ಲಿ ಬರುತ್ತಿರುವ ಆಧಾರರಹಿತ ಮಾಹಿತಿಗಳನ್ನು ನಂಬಿ ಗೊಂದಲಕ್ಕೀಡಾಗುವ ಬದಲು, ಆರ್‌ಬಿಐ, ಎನ್‌ಪಿಸಿಐ ಅಥವಾ ಕೇಂದ್ರ ಹಣಕಾಸು ಸಚಿವಾಲಯ ಹೊರಡಿಸುವ ಅಧಿಕೃತ ಪ್ರಕಟಣೆಗಳನ್ನು ಮಾತ್ರವೇ ನಂಬಬೇಕಾಗಿರುವುದು ಸದ್ಯದ ತುರ್ತು. ಯಾವುದೇ ಹೊಸ ಕಾನೂನು, ಕಾಯಿದೆ, ನಿಯಮ ಜಾರಿಗೆ ತರುವುದಕ್ಕೆ ಮೊದಲು ಅದು ಸಾರ್ವಜನಿಕ ವಲಯದಲ್ಲಿ ವಿಸ್ತೃತ ಚರ್ಚೆಯ ಜೊತೆಗೆ ಸಾಕಷ್ಟು ಪೂರ್ವಭಾವಿ ಅಧಿಸೂಚನೆಗಳು, ಕಠಿಣ ಪರಾಮರ್ಶೆಯ ನಂತರವೇ ಜಾರಿಯಾಗುತ್ತದೆ.

ಹಾಗಾಗಿ, ಗ್ರಾಹಕರು ತಾವು ದೈನಂದಿನ ಜೀವನದಲ್ಲಿ ನಡೆಸುವ ಸಣ್ಣಪುಟ್ಟ ಡಿಜಿಟಲ್ ವಹಿವಾಟುಗಳನ್ನು ಮುಂದುವರಿಸಿಕೊಂಡು ಹೋಗಬಹುದು ಮತ್ತು ಅಂಥಾ ಸಾಮಾನ್ಯ ವರ್ಗಾವಣೆಗಳಿಗೆ ಸದ್ಯದ ಮಟ್ಟಿಗೆ ಯಾವುದೇ ಶುಲ್ಕ ವಿಧಿಸುವ ಪ್ರಸ್ತಾವನೆ ಇದ್ದಂತಿಲ್ಲ.

ಯುಪಿಐ ವಹಿವಾಟುಗಳ ಮೇಲೆ ಯಾವುದೇ ವಿಧದ ಶುಲ್ಕ ವಿಧಿಸುವುದಿಲ್ಲ ಮತ್ತು ಡಿಜಿಟಲ್ ಪಾವತಿ ವ್ಯವಸ್ಥೆ ಉಚಿತವಾಗಿಯೇ ಮುಂದುವರಿಯಲಿದೆ ಎಂದು ಲೋಕಸಭೆಯಲ್ಲಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಸ್ಪಷ್ಟಪಡಿಸಿರುವುದು ಜನರಲ್ಲಿ ಒಂದಷ್ಟು ನಿರಾಳತೆ ತಂದಿದೆ. ಭಾರತದ ಯುಪಿಐ ವ್ಯವಸ್ಥೆ ಇಂದು ಇಡೀ ಜಗತ್ತಿಗೇ ಅನುಸರಿಸಲು ಯೋಗ್ಯ, ಉತ್ಕೃಷ್ಟ ಮತ್ತು ಅದ್ಭುತ ಮಾದರಿಯಾಗಿ ಬೆಳೆದು ನಿಂತಿದೆ!

ಭಾರತಕ್ಕಿಂತ ಹೆಚ್ಚು ಮುಂದುವರಿದ ರಾಷ್ಟ್ರಗಳೂ ಕೂಡ ನಮ್ಮ ಈ ಡಿಜಿಟಲ್ ಪಾವತಿ ತಂತ್ರಜ್ಞಾನದ ವೇಗ ಮತ್ತು ಯಶಸ್ಸನ್ನು ಕಂಡು ಬೆರಗಾಗಿವೆ. ಇಂತಹ ವಿಶ್ವದರ್ಜೆಯ ವ್ಯವಸ್ಥೆಯನ್ನು ದೀರ್ಘಕಾಲದವರೆಗೆ ಸಂಪೂರ್ಣವಾಗಿ ಉಚಿತವಾಗಿ ನೀಡುವುದು ಆರ್ಥಿಕ ದೃಷ್ಟಿಯಿಂದ ಸವಾಲಿನ ಕೆಲಸ ಎಂಬ ವಾಸ್ತವವನ್ನು ಒಪ್ಪಿಕೊಳ್ಳಲೇಬೇಕು. ಆದರೆ, ಅದೇ ಸಮಯದಲ್ಲಿ, ಡಿಜಿಟಲ್ ಪಾವತಿಗಳನ್ನು ಉತ್ತೇಜಿಸುವ ಸರಕಾರದ ಮೂಲ ಉದ್ದೇಶಕ್ಕೆ ಧಕ್ಕೆಯಾಗದಂತೆ ಎಚ್ಚರ ವಹಿಸುವುದು ಕೂಡ ಅಷ್ಟೇ ಮುಖ್ಯವಾಗಿದೆ. ಈ ಶುಲ್ಕ ವಿಧಿಸುವ ಕುರಿತಾದ ಚರ್ಚೆಗಳು ಅಥವಾ ಹೊಸ ನಿಯಮಗಳು ಬ್ಯಾಂಕುಗಳ ಆರ್ಥಿಕ ಹಿತಾಸಕ್ತಿಯ ಜೊತೆಗೆ ಕೋಟ್ಯಂತರ ಜನಸಾಮಾನ್ಯರ ಮತ್ತು ಸಣ್ಣ ವ್ಯಾಪಾರಿಗಳ ನಂಬಿಕೆಯನ್ನು ಉಳಿಸಿಕೊಳ್ಳುವ ಕಡೆಗೂ ಗಮನಹರಿಸಬೇಕಾಗಿದೆ.

ಈ ಎಲ್ಲಾ ಅಂಶಗಳನ್ನು ಮತ್ತಷ್ಟು ಕೂಲಂಕಷವಾಗಿ ಪರಾಮರ್ಶಿಸಿ, ಎಲ್ಲರಿಗೂ ಅನುಕೂಲವಾಗುವ ನಿಟ್ಟಿನಲ್ಲಿ ವಿಚಾರಗಳು, ಶುಲ್ಕಗಳು ಜಾರಿಗೆ ಬರಲಿ. ಕೋಟಿಗಳಲ್ಲಿ ವಹಿವಾಟು ನಡೆಸುವ ಕಾರ್ಪೊರೇಟ್ ಸಂಸ್ಥೆಗಳು ಮತ್ತು ದೊಡ್ಡ ವ್ಯಾಪಾರಿಗಳಿಂದ ಮಾತ್ರ ನ್ಯಾಯೋಚಿತ ಶುಲ್ಕವನ್ನು ಸಂಗ್ರಹಿಸಿ, ಸಾಮಾನ್ಯ ಜನರಿಗೆ ಡಿಜಿಟಲ್ ಪಾವತಿಯನ್ನು ಉಚಿತವಾಗಿ ಮತ್ತು ಸುಲಭವಾಗಿ ಲಭ್ಯವಾಗುವಂತೆ ಮಾಡುವ ಸಮತೋಲಿತ ಮಾರ್ಗವನ್ನು ಕೇಂದ್ರ ಆಯ್ದುಕೊಂಡಿದೆ.

ಡಿಜಿಟಲ್ ಇಂಡಿಯಾದ ಬೆಳವಣಿಗೆ ಯಾವುದೇ ಅಡೆತಡೆಯಿಲ್ಲದೆ ಮುಂದುವರಿಯಲಿದೆ. ಅದಾಗಲೇ ಬೆಲೆಯೇರಿಕೆಯಿಂದ ಕಂಗೆಟ್ಟಿರುವ ಸಣ್ಣ ವ್ಯಾಪಾರಿಗಳು ಮತ್ತು ಗ್ರಾಹಕರ ಜೇಬಿಗೆ, ಅಲ್ಲಲ್ಲ ವ್ಯಾಲೆಟ್‌ಗೆ ಮತ್ತೊಮ್ಮೆ ಕತ್ತರಿ ಬೀಳದಂತೆ ನೋಡುವ ಕರ್ತವ್ಯ ಮತ್ತು ಜವಾಬ್ದಾರಿ ಕೇಂದ್ರ ಸರಕಾರದ್ದು. ಪ್ರಶ್ನೆ ಪತ್ರಿಕೆ ಲೀಕ್ ವಿಚಾರದಿಂದಾಗಿ ನಲುವತ್ತು ಕೋಟಿ ಜೆನ್ ಝಿಯ ಕೆಂಗಣ್ಣಿಗೆ ಗುರಿಯಾಗಿರುವ ಕೇಂದ್ರ ಸರಕಾರ ಈಗ ಡಿಜಿಟಲ್ ಪಾವತಿ ಶುಲ್ಕ ಎನ್ನುವ ಜೇನು ಗೂಡಿಗೆ ಕೈ ಹಾಕಿ ಮತ್ತಷ್ಟು ಜನರ ಕೆಂಗಣ್ಣಿಗೆ ಗುರಿಯಾಗದಿರಲಿ. ಹಾವೂ ಸಾಯಬಾರದು, ಕೋಲೂ ಮುರಿಯಬಾರದು ಅಷ್ಟೇ!

**- ರವೀ** ಸಜಂಗದ್ದೆ

## ಸ್ಕ್ವಾಡ್ರನ್ ಲೀಡರ್ ಭಾವನಾ ಕಾಂತ್: ಆಕಾಶವನ್ನೇ ಗೆದ್ದ ಭಾರತದ ಹೆಮ್ಮೆಯ ಪುತ್ರಿ

ಒಂದೊಳ್ಳೆ ಮಾತು

ಬಿಹಾರದ ದರ್ಭಾಂಗದಂತಹ ಒಂದು ಸಣ್ಣ ಪಟ್ಟಣದಿಂದ ಬಂದ ಹುಡುಗಿಯೊಬ್ಬಳು ಆಕಾಶದ ಎತ್ತರವನ್ನು ಮುಟ್ಟುವ ಕನಸು ಕಾಣುವುದು ಮತ್ತು ಆ ಕನಸನ್ನು ಕೇವಲ ನನಸಾಗಿಸುವುದು ಮಾತ್ರವಲ್ಲದೆ, ಇಡೀ ದೇಶವೇ ತನ್ನತ್ತ ಹೆಮ್ಮೆಯಿಂದ ತಿರುಗಿ ನೋಡುವಂತೆ ಮಾಡುವುದು ನಿಜಕ್ಕೂ ಒಂದು ಅದ್ಭುತ ಹಾಗೂ ರೋಮಾಂಚಕಾರಿ ಕಥೆ. ಈ ಕಥೆಯ ನಾಯಕಿ ಬೇರಾರೂ ಅಲ್ಲ, ಭಾರತೀಯ ವಾಯುಪಡೆಯ ಹೆಮ್ಮೆಯ ಸ್ಕ್ವಾಡ್ರನ್ ಲೀಡರ್ ಭಾವನಾ ಕಾಂತ್. ತಮ್ಮ ಅಪ್ರತಿಮ ಧೈರ್ಯ, ಛಲ ಮತ್ತು ಕಠಿಣ ಪರಿಶ್ರಮದಿಂದ ಅವರು ಭಾರತೀಯ ಸೇನಾ ಇತಿಹಾಸದಲ್ಲಿ ಮತ್ತೊಂದು ಹೊಸ ಮೈಲಿಗಲ್ಲನ್ನು ಸ್ಥಾಪಿಸಿದ್ದಾರೆ.

ಭಾರತೀಯ ವಾಯುಪಡೆಯು ಮಹಿಳೆಯರಿಗೂ ಫೈಟರ್ ಪೈಲಟ್ ಆಗಲು ಅವಕಾಶ ನೀಡಿದಾಗ, ಆ ಸವಾಲನ್ನು ಎದೆಯೊಡ್ಡಿ ಸ್ವೀಕರಿಸಿದವರಲ್ಲಿ ಭಾವನಾ ಮುಂಚೂಣಿಯಲ್ಲಿದ್ದರು. ಭಾರತದ ಮೊಟ್ಟಮೊದಲ ಮೂವರು ಮಹಿಳಾ ಫೈಟರ್ ಪೈಲಟ್‌ಗಳಲ್ಲಿ ಒಬ್ಬರಾಗಿ ಕಮಿಷನ್ ಪಡೆಯುವ ಮೂಲಕ ಅವರು ಇತಿಹಾಸ ನಿರ್ಮಿಸಿದರು.

ಹಗಲು ಹೊತ್ತಿನ ಫೈಟರ್ ಯುದ್ಧ ಕಾರ್ಯಾಚರಣೆಗಳಿಗೆ ಅಧಿಕೃತವಾಗಿ ಅರ್ಹತೆ ಪಡೆದ ಭಾರತದ ಮೊದಲ ಮಹಿಳಾ ಪೈಲಟ್ ಎಂಬ ಕೀರ್ತಿಗೆ ಅವರು ಭಾಜನರಾದರು. ನವದೆಹಲಿಯ ರಾಜಪಥದಲ್ಲಿ ನಡೆದ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಪಾಲ್ಗೊಂಡ ಮೊದಲ ಮಹಿಳಾ ಫೈಟರ್ ಪೈಲಟ್ ಎಂಬ ಹೆಗ್ಗಳಿಕೆಯೂ ಅವರ ಮುಡಿಗೇರಿತು.

ಅಲ್ಲಿಂದ ಶುರುವಾದ ಅವರ ವಿಜಯಯಾತ್ರೆ ಇಂದಿಗೂ ನಿಂತಿಲ್ಲ. ಇದೀಗ, ತಮ್ಮ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಭಾವನಾ ಕಾಂತ್ ಸೇರಿಸಿದ್ದಾರೆ. ಗ್ವಾಲಿಯರ್‌ನಲ್ಲಿರುವ ಭಾರತೀಯ ವಾಯುಪಡೆಯ ಟಿಎಸಿಡಿಇ ಕೇಂದ್ರದಲ್ಲಿ ಫೈಟರ್ ಕಾಂಬ್ಯಾಟ್ ಲೀಡರ್ (ಎಫ್‌ಸಿಎಲ್) ಎಂಬ ಪ್ರತಿಷ್ಠಿತ ಕೋರ್ಸ್ ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಮೊಟ್ಟ ಮೊದಲ ಮಹಿಳಾ ಫೈಟರ್ ಪೈಲಟ್ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ.

ಈ ಎಫ್‌ಸಿಎಲ್ ಕೋರ್ಸ್ ಎನ್ನುವುದು ಸಾಮಾನ್ಯವಾದ ತರಬೇತಿಯಲ್ಲ. ಇದು ಬರೋಬ್ಬರಿ 20 ವಾರಗಳ ಕಾಲ ನಡೆಯುವ ಅತ್ಯಂತ ಕಠಿಣ ಹಾಗೂ ಸವಾಲಿನ ತರಬೇತಿ. ಕೇವಲ ಆಯ್ದ, ಅತ್ಯುತ್ತಮ ಫೈಟರ್ ಪೈಲಟ್‌ಗಳಿಗೆ ಮಾತ್ರ ಇದರಲ್ಲಿ ಪಾಲ್ಗೊಳ್ಳುವ ಅವಕಾಶ ಸಿಗುತ್ತದೆ. ಈ ಕೋರ್ಸ್ ಅನ್ನು ಪೂರ್ಣಗೊಳಿಸುವುದು ಎಂದರೆ, ಕೇವಲ ಯುದ್ಧ ವಿಮಾನವನ್ನು ಚಲಾಯಿಸುವುದಷ್ಟೇ ಅಲ್ಲ, ಬದಲಾಗಿ ಅತ್ಯಂತ ಸಂಕೀರ್ಣವಾದ ವಾಯು ಯುದ್ಧ ಕಾರ್ಯಾಚರಣೆಗಳನ್ನು ಮುಂಚೂಣಿಯಲ್ಲಿ ನಿಂತು ಮುನ್ನಡೆಸುವ ಸಾಮರ್ಥ್ಯವನ್ನು ಸಾಬೀತುಪಡಿಸಿದಂತೆ. ಭಾವನಾ ಅವರ ಸಮವಸ್ತ್ರದ ಮೇಲಿರುವ ಈ ಹೊಸ ಬ್ಯಾಡ್ಜ್ ಕೇವಲ ಲಾಂಛನವಲ್ಲ.

ಇದು ಅವರನ್ನು ಭಾರತೀಯ ವಾಯುಪಡೆಯ ಮುಂಚೂಣಿ ಯುದ್ಧ ತಂತ್ರಜ್ಞರ ಸಾಲಿನಲ್ಲಿ ಹೆಮ್ಮೆಯಿಂದ ನಿಲ್ಲಿಸಿದೆ. ಹೆಣ್ಣುಮಕ್ಕಳಿಗೆ ಯುದ್ಧಭೂಮಿ ಒಗ್ಗುವುದಿಲ್ಲ ಎನ್ನುವ ಸಮಾಜದ ಹಳೆಯ ಕಲ್ಪನೆಗಳಿಗೆ, ಆಕಾಶದ ಯುದ್ಧದ ತಂತ್ರಗಳನ್ನು ರೂಪಿಸುವ ಭಾವನಾ ಕಾಂತ್ ಅವರ ಈ ಯಶೋಗಾಥೆ ಒಂದು ದಿಟ್ಟ ಉತ್ತರ. ಅವರು ಭೇದಿಸುತ್ತಿರುವ ಪ್ರತಿಯೊಂದು ಅಡೆತಡೆಗಳೂ, ದೇಶದ ಅಸಂಖ್ಯಾತ ಹೆಣ್ಣು ಮಕ್ಕಳಿಗೆ ಹೊಸ ಭರವಸೆಯನ್ನು ನೀಡುತ್ತಿವೆ.

ಬಿಹಾರದ ದರ್ಭಾಂಗದಿಂದ ಶುರುವಾದ ಈ ಪಯಣ, ಇಂದು ಇಡೀ ದೇಶಕ್ಕೆ ಸ್ಫೂರ್ತಿಯಾಗಿದೆ. ಇಂದು ಭಾರತದ ಯಾವುದೇ ಮೂಲೆಯಲ್ಲಿರುವ ಒಬ್ಬ ಹೆಣ್ಣುಮಗಳು ಆಕಾಶದತ್ತ ಮುಖಮಾಡಿ ನೋಡಿದಾಗ, ಅವಳ ಕಣ್ಣುಗಳಲ್ಲಿ ಕೇವಲ ಮೋಡಗಳಷ್ಟೇ ಕಾಣುವುದಿಲ್ಲ; ಬದಲಾಗಿ, ಭಾವನಾ ಕಾಂತ್ ಅವರಂತಹ ಧೀರ ಮಹಿಳೆ ಎತ್ತರದಲ್ಲಿ ಹಾರಾಡುತ್ತಿರುವುದು ಕಾಣುತ್ತದೆ. ತಾನೂ ಕೂಡ ಅಡೆತಡೆಗಳನ್ನು ಮೀರಿ ಆಕಾಶವನ್ನು ಆಳಬಲ್ಲೆ ಎಂಬ ಅಚಲವಾದ ವಿಶ್ವಾಸ ಆಕೆಯ ಮನಸ್ಸಿನಲ್ಲಿ ಮೂಡುತ್ತದೆ. ಆಕಾಶದ ಎಲ್ಲೆಗಳನ್ನು ಮೀರಿ ಬೆಳೆಯುತ್ತಿರುವ ಭಾರತೀಯ ವಾಯುಪಡೆಯ ಈ ಹೆಮ್ಮೆಯ ಪುತ್ರಿಗೆ ಇಡೀ ದೇಶದ ಸಲಾಂ!

ನಮ್ಮ ಮನೆಯ ಹೆಣ್ಣು ಮಕ್ಕಳಿಗೆ ಇಂತಹ ನಿದರ್ಶನಗಳನ್ನ ನೀಡಿ ಅವರನ್ನು ಬದುಕಿನಲ್ಲಿ ಗುರಿಯತ್ತ ಮುಖ ಮಾಡಿ ಎಂತಹ ಕಷ್ಟವೇ ಬರಲಿ ಅಂದುಕೊಂಡದ್ದನ್ನು ಸಾಧಿಸಬೇಕು ಎಂದು ಪ್ರೇರೇಪಿಸಬೇಕು. ಶಾಲಾ ಕಾಲೇಜುಗಳಲ್ಲಿ ಸುತ್ತಲಿನ ಸಮಾಜದಲ್ಲಿ ನಮ್ಮನ್ನು ಅನುಮಾನಿಸುವ ನಮ್ಮ ದಾರಿಗೆ ಅಡ್ಡ ಬರುವ ನೂರಾರು ಪ್ರಯತ್ನಗಳು ನಿರಂತರವಾಗಿ ನಡೆದಿರುತ್ತದೆ. ಆದರೆ ಪರಿಶ್ರಮ ನಿಶ್ಚಲವಾದ ಗುರಿ ಇದ್ದಾಗ ಯಾವುದೂ ಅಸಾಧ್ಯವಲ್ಲ.




**- ರೂಪಾ** ಗುರುರಾಜ್

# ರಾಜ್ಯದಲ್ಲಿ ಗುಟ್ಕಾ, ಪಾನ್ ಮಸಾಲಾ ನಿಷೇಧ

## ಸಾರ್ವಜನಿಕರ ಆರೋಗ್ಯ ಹಿತದೃಷ್ಟಿಯಿಂದ ರಾಜ್ಯ ಸರ್ಕಾರದಿಂದ ಮಹತ್ವದ ಆದೇಶ

• ಪ್ರಜೋದಯ ವರದಿ



**ಬೆಂಗಳೂರು:** ಆಹಾರ ಸುರಕ್ಷತೆ ದೃಷ್ಟಿಯಿಂದ ಹೋಟೆಲ್, ರೆಸ್ಟೋರೆಂಟ್‌ಗಳ ಮೇಲೆ ದಾಳಿ ನಡೆಸಿ ಶಾಕ್ ನೀಡಿದ್ದ ರಾಜ್ಯ ಆರೋಗ್ಯ ಇಲಾಖೆಯು ಗುಟ್ಕಾ, ಪಾನ್ ಮಸಾಲ ಪ್ರಿಯರಿಗೆ ಆಘಾತ ನೀಡಿದ್ದು, ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ತಂಬಾಕು ಹಾಗೂ ನಿಕೋಟಿನ್ ಹೊಂದಿರುವ ಉತ್ಪನ್ನಗಳ ವಿರುದ್ಧ ರಾಜ್ಯಾದ್ಯಂತ ಕಟ್ಟುನಿಟ್ಟಿನ ಕ್ರಮ ಜರುಗಿಸಿದೆ.

ರಾಜ್ಯದಲ್ಲಿ ಎಲ್ಲ ವಿಧದ ಗುಟ್ಕಾ, ಪಾನ್ ಮಸಾಲಾ ನಿಷೇಧಿಸಿ ಆದೇಶಿಸಿದೆ. ಆಗಸ್ಟ್ 10ರಂದು ಗುಟ್ಕಾ ನಿಷೇಧ ಸಂಬಂಧಿ ಅಧಿಸೂಚನೆ ಹೊರಡಿಸಲಾಗಿದೆ ಎಂದು ಬುಧವಾರ ಖುದ್ದು ಆರೋಗ್ಯ ಇಲಾಖೆಯೇ ಪ್ರಕಟಿಸಿದೆ. ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಆಹಾರ ಸುರಕ್ಷತಾ ವಿಭಾಗದ ವತಿಯಿಂದ ಗುಟ್ಕಾ ಬ್ಯಾನ್ ನಿರ್ಧಾರ ಕೈಗೊಂಡಿದೆ.

ಸಾರ್ವಜನಿಕ ಆರೋಗ್ಯದ ಹಿತ ದೃಷ್ಟಿಯಿಂದ ತಂಬಾಕು ಹಾಗೂ ನಿಕೋಟಿನ್ ಹೊಂದಿರುವ ಉತ್ಪನ್ನಗಳ ವಿರುದ್ಧ ರಾಜ್ಯಾದ್ಯಂತ ಕಟ್ಟುನಿಟ್ಟಿನ ಜಾರಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ರಾಜ್ಯದಲ್ಲಿ ಪ್ರತಿ ಹಂತದಲ್ಲೂ ಗುಟ್ಕಾ ನಿಷೇಧ! ತಂಬಾಕು/ ನಿಕೋಟಿನ್ ಹೊಂದಿರುವ ಗುಟ್ಕಾ, ಪಾನ್ ಮಸಾಲಾ ಹಾಗೂ ಇತರೆ ನಿಷೇಧಿತ ಉತ್ಪನ್ನಗಳ ತಯಾರಿಕೆ, ಸಂಗ್ರಹಣೆ, ಸಾಗಣೆ, ವಿತರಣೆ ಮತ್ತು ಮಾರಾಟದ ವಿರುದ್ಧ ಆಹಾರ ಸುರಕ್ಷತಾ ಅಧಿಕಾರಿಗಳ ನೇತೃತ್ವದಲ್ಲಿ ವಿಶೇಷ ತಪಾಸಣೆ ಹಾಗೂ ಜಾರಿ ಕಾರ್ಯಾಚರಣೆ ನಡೆಸಲಾಗಿದೆ.

ಒಂದು ವರ್ಷ ಗುಟ್ಕಾ ನಿಷೇಧ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯು ಆಹಾರ ಸುರಕ್ಷತೆ ಮತ್ತು 2006 ರ ಕಲಂ 30(2) 8 , 2011ರ ನಿಯಮದಡಿ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಕರ್ನಾಟಕ ರಾಜ್ಯದಲ್ಲಿ ತಂಬಾಕು ಹಾಗೂ ನಿಕೋಟಿನ್ ಹೊಂದಿರುವ ಉತ್ಪನ್ನಗಳ ಮಾರಾಟ ಮತ್ತು ವಿತರಣೆ ನಿಷೇಧಿಸಲಾಗಿದೆ. ಆಗಸ್ಟ್ 10ರಂದು ಮುಂದಿನ 1 ವರ್ಷದ ಅವಧಿಗೆ ನಿಷೇಧ ನಿಯಮ ಜಾರಿಯಲ್ಲಿರುತ್ತದೆ.

ವ್ಯಸನಮುಕ್ತ ಸಮಾಜ ನಿರ್ಮಾಣ ಗುರಿ ನಿಷೇಧಿತ ತಂಬಾಕು ಹಾಗೂ ನಿಕೋಟಿನ್ ಉತ್ಪನ್ನಗಳ ತಯಾರಿಕೆ, ಮಾರಾಟ ಅಥವಾ ವಿತರಣೆ ಕಂಡುಬಂದಲ್ಲಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಿ, ಆರೋಗ್ಯಕರ ಹಾಗೂ ವ್ಯಸನಮುಕ್ತ ಕರ್ನಾಟಕ ನಿರ್ಮಾಣಕ್ಕೆ ಸಾರ್ವಜನಿಕರು ಸಹಕರಿಸುವಂತೆ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ತಾನು ಹೊರಡಿಸಿರುವ ಆದೇಶದಲ್ಲಿ ಕೋರಿದೆ.

ರಾಜ್ಯದಲ್ಲಿ ಕಳೆ ನಾಲ್ಕು ವರ್ಷಗಳಿಂದ ಅಡಿಕೆ ಬೆಳೆ ಬೆಳೆಯುವ ಪದ್ಧತೆ ಬೇರೆ ಬೇರೆ ಭಾಗಗಳಿಗೂ ವಿಸ್ತರಣೆ ಆಗಿದೆ. ಆದರೆ ಅಡಿಕೆ ಇಳುವರಿ ಸುಮಾರು ಶೇ.37ರಷ್ಟು ಕುಸಿತ ಆಗಿದೆ. ಇಳುವರಿ ಕುಸಿತಕ್ಕೆ ಎಲೆ ಚುಕ್ಕೆ ರೋಗ ಸೇರಿದಂತೆ ಇನ್ನಿತರ ಕಾರಣಗಳಿವೆ. ಇದೀಗ ಗುಟ್ಕಾ ಬ್ಯಾನ್ ಆಗಿದ್ದರಿಂದ ಇದು ಅಡಿಕೆ ಬೆಲೆ, ಉತ್ಪಾದನೆ, ಬೆಳೆಗಾರರ ಆರ್ಥಿಕತೆ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

# ಹೋಟೆಲ್‌ಗಳಲ್ಲಿ ಆಹಾರ ಸುರಕ್ಷತೆ: ಮಾರ್ಗಸೂಚಿ ಜಾರಿ

• ಪ್ರಜೋದಯ ವರದಿ

## ಆರೋಗ್ಯ ಸಚಿವ ಯು.ಟಿ.ಖಾದರ್ ಎಚ್ಚರಿಕೆ



**ಬೆಂಗಳೂರು:** ಆಹಾರ ಸುರಕ್ಷತೆ ಮತ್ತು ಎಫ್‌ಎಸ್‌ಎಸ್‌ಎಐ ನಿಯಮಗಳ ಉಲ್ಲಂಘನೆ ಕಾರಣಕ್ಕೆ ರಾಜ್ಯಾದ್ಯಂತ ಹೋಟೆಲ್, ರೆಸ್ಟೋರೆಂಟ್‌ಗಳ ಮೇಲೆ ದಾಳಿ ಮುಂದುವರಿಸಿದೆ. ಸಾಮಾನ್ಯ ಸೇರಿದಂತೆ ತ್ರಿಸ್ಟಾರ್, ಫೈವ್ ಸ್ಟಾರ್ ಹೋಟೆಲ್‌ಗಳಲ್ಲೇ ಬಳಕೆಗೆ ಯೋಗ್ಯವಲ್ಲದ ಮಾಂಸ, ಹಾಲು ಇನ್ನಿತರ ವಸ್ತುಗಳು ಪತ್ತೆಯಾದ ಬೆನ್ನಲ್ಲೆ ಇದೀಗ ಆರೋಗ್ಯ ಇಲಾಖೆ ಕಟ್ಟುನಿಟ್ಟಿನ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದ್ದು, ಪಾಲಿಸದೇ ಹೋದರೆ ಕಠಿಣ ಕ್ರಮ ಕೈಗೊಳ್ಳುವುದಾಗಿ ರಾಜ್ಯ ಆರೋಗ್ಯ ಇಲಾಖೆ ಸಚಿವ ಯು.ಟಿ.ಖಾದರ್ ಅವರು ಎಚ್ಚರಿಕೆ ನೀಡಿದ್ದಾರೆ.

ಕೋಟ್, ಟೈ ಹಾಕಿಕೊಂಡು ದೊಡ್ಡ ದೊಡ್ಡ ಹೋಟೆಲ್‌ಗಳಲ್ಲಿ ನಮ್ಮನ್ನು ಸ್ವಾಗತಿಸುವುದನ್ನು ನೋಡಿ ಬೆರಗಾದವರು ಸಾಕಷ್ಟು ಜನರಿದ್ದಾರೆ. ಆದರೆ ಕಿಚನ್, ದಾಸ್ತಾನು ಕೋಣೆಯನ್ನು ಯಾರು ನೋಡಿರುವುದಿಲ್ಲ, ಊಟಕ್ಕೆ ಏನು ಹಾಕಿ ಕೊಡುತ್ತಾರೆ. ಎಕ್ಸ್‌ಪೈರಿ ಡೇಟ್ ಕುರಿತು ಚಿಂತಿಸದೇ ದೊಡ್ಡ ಹೋಟೆಲ್, ರೆಸ್ಟೋರೆಂಟ್ ಎಂದು ಅಧಿಕ ಹಣ ಪಾವತಿಸಿ ಬರುತ್ತೇವೆ. ಇದೀಗ ಅಂತಹ ಹೋಟೆಲ್‌ಗಳಲ್ಲೇ ಆಹಾರ ಸುರಕ್ಷತೆಗಳ ಬಗ್ಗೆ ಅನುಮಾನ ವ್ಯಕ್ತವಾಗಿದೆ. ಇವರೆಲ್ಲ ಗ್ರಾಹಕರನ್ನು ಯಾಮಾರಿಸುತ್ತಿರುವುದು ಅಧಕಾರಿಗಳ ದಾಳಿಯಿಂದ ಗೊತ್ತಾಗಿದೆ. ಪಾಲಿಸಲೇಬೇಕಾದ ಆರೋಗ್ಯ ಇಲಾಖೆ ಮಾರ್ಗ ಸೂಚಿಗಳು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ ಹಾಗೂ 2011ರ ನಿಯಾಮಗಳನ್ವಯ ಈ ಕೆಳಕಂಡ ಮಾರ್ಗ ಸೂಚಿಗಳನ್ನು ಸಣ್ಣ ಹೋಟೆಲ್‌ಗಳು, ಧಾಬಾಗಳು, ರೆಸ್ಟೋರೆಂಟ್‌ಗಳು ಹಾಗೂ ಇತರೆ ಆಹಾರ ಸೇವಾ ಕೇಂದ್ರಗಳು ಕಟ್ಟುನಿಟ್ಟಾಗಿ ಅನುಸರಿಸುವಂತೆ ಸೂಚಿಸಲಾಗಿದೆ.

ಆಹಾರ ವ್ಯವಹಾರದ ಪರವಾನಗಿಯನ್ನು ಸಂಸ್ಥೆಯ ಆವರಣದಲ್ಲಿ ಎಲ್ಲರಿಗೂ ಗೋಚರಿಸುವ ಪ್ರಮುಖ ಸ್ಥಳದಲ್ಲಿ ಕಡ್ಡಾಯವಾಗಿ ಪ್ರದರ್ಶಿಸಬೇಕು. ಆಹಾರ ವ್ಯವಹಾರದ ಪ್ರಕ್ರಿಯೆಗಳು, ಚಟುವಟಿಕೆಗಳು ಅಥವಾ ಇತರೆ ವಿವರಗಳಲ್ಲಿ ಯಾವುದೇ ಬದಲಾವಣೆ/ ಮಾರ್ಪಾಡು ಮಾಡಿದಲ್ಲಿ ಸಂಬಂಧಿತ ಪ್ರಾಧಿಕಾರಕ್ಕೆ ಮಾಹಿತಿ ನೀಡಬೇಕು. ಅಡುಗೆ ಪ್ರದೇಶವನ್ನು ಸದಾ ಸ್ವಚ್ಛವಾಗಿ, ವ್ಯವಸ್ಥಿತವಾಗಿ ನಿರ್ವಹಿಸಬೇಕು. ಬಳಸುವ ಕಚ್ಚಾ ಆಹಾರ ಪದಾರ್ಥಗಳು ಉತ್ತಮ ಗುಣಮಟ್ಟದ್ದಾಗಿದ್ದು, ವಿಶ್ವಾಸಾರ್ಹ ಮೂಲದಿಂದ ಖರೀದಿಸಬೇಕು. ಹಣ್ಣು ಮತ್ತು ತರಕಾರಿ ತೊಳೆದೇ ಬಳಸಬೇಕು. ಆಹಾರವನ್ನು ಸಮರ್ಪಕ ವಾಗಿ ತಯಾರಿಸಿ, ಸಂಸ್ಕರಿಸಿ ಮತ್ತು ಸಂಪೂರ್ಣವಾಗಿ ಬೇಯಿಸಬೇಕು. ಸಸ್ಯಾಹಾರಿ ಮತ್ತು ಮಾಂಸಾಹಾರಿ ಆಹಾರ ತಯಾರಿಕೆಯನ್ನು ಪ್ರತ್ಯೇಕ ವಾಗಿ ನಿರ್ವಹಿಸಬೇಕು. ಬಳಸಿದ ಅಡುಗೆ ಎಣ್ಣೆಯನ್ನು ಮರುಬಳಕೆ ಮಾಡುವುದನ್ನು ತಪ್ಪಿಸಬೇಕು. ಆಹಾರವನ್ನು ಸಂಪೂರ್ಣವಾಗಿ ಬೇಯಿಸ ಬೇಕು. ಅಡುಗೆಮನೆ ಮತ್ತು ಆಹಾರ ಸೇವಾ ಸಿಬ್ಬಂದಿಯ ವಾರ್ಷಿಕ ವೈದ್ಯಕೀಯ ಆರೋಗ್ಯ/ ಫಿಟ್ನೆಸ್ ದಾಖಲೆ ನವೀಕರಿಸಬೇಕು.

ಬಾಟಲಿ ಪಾನೀಯಗಳು, ಸ್ಟೆರಿಲೈಸ್ ಮಾಡಿದ ಹಾಲು, ಕ್ಯಾನ್ ಆಹಾರ ಮುಂತಾದ ಪ್ಯಾಕೇಜ್ ಮಾಡಿದ ಆಹಾರಗಳ ಪ್ಯಾಕಿಂಗ್/ಸೀಲ್ಗಳು ಹಾನಿಯಾಗದಂತೆ ಸಾಗಣೆ ಸಂದರ್ಭದಲ್ಲಿ ಸರಿಯಾಗಿ ಸಂಗ್ರಹಿಸಬೇಕು. ಹೋಟೆಲ್‌ಗಳಿಗೆ ಭೇಟಿ ನೀಡುವ ಸಾರ್ವಜನಿಕರಿಗೆ ಶೌಚಾಲಯದ ಉಚಿತ ಬಳಕೆಗೆ ಅವಕಾಶ ಕಲ್ಪಿಸಬೇಕು. ಅಡುಗೆಮನೆ, ಗೋಡೆಗಳು, ನೆಲ ಮತ್ತು ಮೇಲ್ಛಾವಣಿಯನ್ನು ಸ್ವಚ್ಛವಾಗಿ, ಸಮತಟ್ಟಾಗಿ ಮತ್ತು ಉತ್ತಮ ಸ್ಥಿತಿಯಲ್ಲಿ ನಿರ್ವಹಿಸಬೇಕು. ಶೀತಲೀಕರಿಸಿದ ಆಹಾರವನ್ನು 4ಕ್ಕಿಂತ ಕಡಿಮೆ ತಾಪಮಾನದಲ್ಲಿ ಮತ್ತು ಫ್ರೋಜನ್ ಆಹಾರ ಪದಾರ್ಥಗಳನ್ನು -18 ತಾಪಮಾನದಲ್ಲಿ ಸಂಗ್ರಹಿಸಬೇಕು. ಕಲರ್ ಬಳಸಿದ ಅಡುಗೆ ಎಣ್ಣೆ, ಅವಧಿ ಮೀರಿದ ವಸ್ತುಳನ್ನು ಬಳಸುವಂತಿಲ್ಲ ಎಂಬುದು ಸೇರಿದಂತೆ ಹಲವು ನಿಯಮಗಳನ್ನು ಪಾಲಿಸುವಂತೆ ಸೂಚನೆ ನೀಡಲಾಗಿದೆ.

ಮೇಲ್ಕಂಡ ಆಹಾರ ಸುರಕ್ಷತೆ, ನೈರ್ಮಲ್ಯ, ಸಂಗ್ರಹಣೆ, ಸಿಬ್ಬಂದಿಯ ವೈಯಕ್ತಿಕ ಸ್ವಚ್ಛತೆ, ಕೀಟ ನಿಯಂತ್ರಣ ಹಾಗೂ ತಾಪಮಾನ ನಿಯಂತ್ರಣಕ್ಕೆ ಸಂಬಂಧಿಸಿದ ಎಲ್ಲಾ ಕ್ರಮಗಳನ್ನು ಹೋಟೆಲ್‌ಗಳು, ಧಾಬಾಗಳು ಮತ್ತು ಇತರೆ ಆಹಾರ ಸೇವಾ ಸಂಸ್ಥೆಗಳು ಕಡ್ಡಾಯವಾಗಿ ಪಾಲಿಸಬೇಕು. ಅವಧಿ ಮುಗಿದ ಆಹಾರ ಉತ್ಪನ್ನಗಳ ಬಳಕೆ ಅಥವಾ ಸಂಗ್ರಹಣೆ, ಕಳಪೆ ನೈರ್ಮಲ್ಯ, ಆಹಾರ ಕಲುಷಿತಗೊಳ್ಳುವಿಕೆ, ಅಸುರಕ್ಷಿತ ನೀರಿನ ಬಳಕೆ ಅಥವಾ ಆಹಾರ ಸುರಕ್ಷತಾ ಮಾನದಂಡಗಳ ಉಲ್ಲಂಘನೆ ಕಂಡು ಬಂದಲ್ಲಿ, ನಿಯಮಗಳ ಪ್ರಕಾರ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಇಲಾಖೆ ಎಚ್ಚರಿಕೆ ಕೊಟ್ಟಿದೆ.

## ಇಂದು- ನಾಳೆ ವಿದ್ಯುತ್ ವ್ಯತ್ಯಯ

ಹಾಸನ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಯಿಂದ 66 ಕೆವಿ ಚಿಕ್ಕಮಗಳೂರು-ಕಳಸಾಪುರ ಹೈಟೆನ್ಷನ್ ವಿದ್ಯುತ್ ಪ್ರಸರಣ ಮಾರ್ಗದಲ್ಲಿ ತುರ್ತು ನಿರ್ವಹಣಾ ಕೆಲಸಗಳನ್ನು ಹಮ್ಮಿಕೊಂಡಿರುವುದರಿಂದ, ಆ.13 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 06 ಗಂಟೆಯ ವರೆಗೆ ಹಳೇಬೀಡು ಮತ್ತು ಗಂಗೂರು ವಿ.ವಿ. ಕೇಂದ್ರಗಳಿಂದ ವಿದ್ಯುತ್ ಸರಬರಾಜಾಗುವ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಕಾರ್ಯಾಚರಣೆಗಳ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

ಆ.14 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 06 ಗಂಟೆಯ ವರೆಗೆ ಸದರಿ ವಿ.ವಿ ಕೇಂದ್ರಗಳಿಂದ ವಿದ್ಯುತ್ ಸರಬರಾಜಾಗುವ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಇಂಜಿನಿಯರ್ ತಿಳಿಸಿದ್ದಾರೆ.

# ಗುರುವಿನಿಂದ ಕಲಿತ ವಿದ್ಯೆ ಜೀವನದ ದಾರಿದೀಪ

• ಪ್ರಜೋದಯ ವರದಿ

## ವೇದ ಬ್ರಹ್ಮ ಶ್ರೀ ಕೃಷ್ಣಮೂರ್ತಿ ಘನಪಾಠಿ



**ಹಾಸನ:** ಗುರು ಎಂಬ ಶಬ್ದವು ಗು ವೆಂದರೆ ಅಂಧಕಾರ ರು ಎಂದರೆ ದೂರ ಮಾಡುವುದು ಅಂಧಕಾರವನ್ನು ದೂರ ಮಾಡುವುದು ಎಂಬುದು ಗುರು ಶಬ್ದದ ಅರ್ಥವಾಗಿದೆ. ಚಿಕ್ಕವಯಸ್ಸಿನಲ್ಲಿ ನಾವು ಮಕ್ಕಳಿಗೆ ನೀಡುವ ಸಂಸ್ಕಾರ ಅವರ ಜೀವನವನ್ನೇ ಬದಲಾಯಿಸುತ್ತದೆ ಆದ್ದರಿಂದ ಮಕ್ಕಳಿಗೆ ಸಂಸ್ಕಾರಯುತ ವಿದ್ಯೆಯನ್ನು ಚಿಕ್ಕ ವಯಸ್ಸಿನಲ್ಲಿಯೇ ಒತ್ತಾಯಪೂರ್ವಕವಾಗಿ ಆದರೂ ಹೇಳಿಕೊಡಬೇಕು, ಅದು ಸಂಸ್ಕಾರ ರೂಪದಲ್ಲಿ ಕಾರ್ಯ ನಿರ್ವಹಿಸುತ್ತದೆ ಎಂದು ವೇದ ವಿದ್ವಾಂಸ ಕೃಷ್ಣಮೂರ್ತಿ ಘನಪಾಠಿ ಅವರು ಹೇಳಿದರು.

ಸಂಸ್ಕೃತ ಪಾಠಶಾಲೆಯ ವತಿಯಿಂದ ಗುರು ಪೂರ್ಣಿಮೆಯ ಅಂಗವಾಗಿ ಸಂಸ್ಕೃತ ಸಂಘದ ಸಂಸ್ಕೃತ ಪಾಠಶಾಲೆಯಿಂದ ನಡೆದ ಗುರು ಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯೆಯನ್ನು ಗುರು ಸನ್ನಿಧಿಯಲ್ಲಿ ಕಲಿತರೆ ಮಾತ್ರ ವಿದ್ಯೆಯ ಮಹತ್ವವನ್ನು ಉಚ್ಚಾರಣಾ ಕ್ರಮವನ್ನು ತಿಳಿಯಲು ಅನುಕೂಲವಾಗುತ್ತದೆ, ಗುರುವಿನಿಂದ ಕಲಿತ ವಿದ್ಯೆ ಜೀವನಪರ್ಯಂತ ಮಕ್ಕಳಿಗೆ ದಾರಿದೀಪವಾಗಲಿದೆ, ಗುರುವನ್ನು ಅನನ್ಯ ಭಕ್ತಿಯಿಂದ ಭಾವಿಸಿದಾಗಲೂ ಸಹ ವಿದ್ಯೆಯು ಬರುತ್ತದೆ, ನಾವು ಕಲಿಯುವ ವಿದ್ಯೆ ಜೀವನವನ್ನು ಸುಂದರಗೊಳಿಸುತ್ತದೆ ಎಂದು ಕಿವಮಾತು ಹೇಳಿದರು.

ಗುರು ಶಿಷ್ಯನನ್ನು ಸಂಪೂರ್ಣವಾಗಿ ತಿದ್ದಿ, ತೀಡಿ ಸಮಾಜಕ್ಕೆ ಅತ್ಯುತ್ತಮ ರತ್ನವನ್ನು ನೀಡುತ್ತಾನೆ. ಗುರು ಎಂದಿಗೂ ಕೇಡನ್ನು ಬಯಸುವುದಿಲ್ಲ, ಹಾಗೂ ಅಹಿತವಾದ ಕೆಟ್ಟ ಪದವನ್ನು ಹೇಳಿಕೊಡುವುದಿಲ್ಲ ಗುರುವಿಲ್ಲದೆ ಸಂಪೂರ್ಣ ಜ್ಞಾನವನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ ಒಂದಕ್ಷರ ಕಲಿಸಿದ ಗುರುವಿನ ಋಣವನ್ನು ಎಂದಿಗೂ ತೀರಿಸಲು ಸಾಧ್ಯವಿಲ್ಲ, ಆದ್ದರಿಂದ ಸಮಾಜದಲ್ಲಿ ಗುರುವಿಗೆ ಮಹತ್ತರವಾದ ಸ್ಥಾನವನ್ನು ಇಂದಿಗೂ ನೀಡಲಾಗಿದೆ ಎಂಬ ಆಶಯವನ್ನು ಅವರು ವ್ಯಕ್ತಪಡಿಸಿದರು

ಅಧ್ಯಕ್ಷತೆ ವಹಿಸಿದ್ದ ಸಂಸ್ಕೃತ ಸಂಘದ ಅಧ್ಯಕ್ಷ ಎಂ.ಎಸ್. ಶ್ರೀಕಂಠಯ್ಯ ಅವರು ಸಂಸ್ಕೃತ ಪಾಠಶಾಲೆಯ ಮಹತ್ವವನ್ನು ಮತ್ತು ನಿವೃತ್ತ ಅಧ್ಯಾಪಕರುಗಳ ಕಾರ್ಯ ವೈಖರಿಯನ್ನು ಶ್ಲಾಘಿಸಿದರು. ಇದೇ ಸಂದರ್ಭದಲ್ಲಿ ಸಂಸ್ಕೃತ ಪಾಠಶಾಲೆಯಲ್ಲಿ ಸುಮಾರು 30 ವರ್ಷಗಳ ಕಾಲ ಸೇವೆ ಸಲ್ಲಿಸಿ, ನಿವೃತ್ತರಾಗಿದ್ದ ಆರ್.ನಾಗರತ್ನ, ಎಸ್.ಆರ್. ಸರಸ್ವತಮ್ಮ ಹಾಗೂ ಗಾಯತ್ರಿ ಈ ಮೂವರು ಶಿಕ್ಷಕರನ್ನು ಗೌರವಿಸಲಾಯಿತು. ಅಧ್ಯಾಪಕ ಮಂಜುನಾಥ್ ಭಟ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು.

ಲಕ್ಷ್ಮಿ ಅವರು ಸ್ವಾಗತಿಸಿದರು, ಧನುಷ್ ವಂದನೆಯನ್ನು ಸಲ್ಲಿಸಿದರು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮವು ನೆರವೇರಿತು. ಸಂಸ್ಕೃತ ಸಂಘದ ಪದಾಧಿಕಾರಿಗಳು ಹಾಗೂ ಹಳೆ ವಿದ್ಯಾರ್ಥಿಗಳು ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

# ದೇಶದ ಅಭಿವೃದ್ಧಿಗೆ ಯುವಶಕ್ತಿಯೇ ಕಾರಣ



• ಪ್ರಜೋದಯ ವರದಿ

**ಆಲೂರು:** ಭಾರತ ಇಂದು ಅಭಿವೃದ್ಧಿಯತ್ತ ಮುನ್ನುಗ್ಗುತ್ತಿರುವುದಕ್ಕೆ ಯುವಶಕ್ತಿಯ ಸಾಧನೆ ಕಾರಣವಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ತಿಳಿಸಿದರು.

ಹರ್ ಘರ್ ತಿರಂಗಾ ಅಭಿಯಾನದ ಅಂಗವಾಗಿ ಬುಧವಾರ ತ್ರಿವರ್ಣ ಧ್ವಜವನ್ನು ಹಿಡಿದು ಉದ್ಘಾಟಿಸಿ ಮಾತನಾಡಿದರು. ಪ್ರತಿಯೊಬ್ಬ ಯುವ ಸಮೂಹ ಈ ದೇಶ ಮೊದಲು ಎಂಬ ಭಾವನೆಯೊಂದಿಗೆ ಜೀವಿಸಬೇಕು. ದೇಶದ ಇತಿಹಾಸವನ್ನು ಅರಿಯಬೇಕು. ಸ್ವಾತಂತ್ರಕ್ಕೋಸ್ಕರ ಹೋರಾಟ ಮಾಡಿರುವ ಮಹಾನುಭಾವರನ್ನು ನೆನಪಿಸಿಕೊಳ್ಳುತ್ತಾ ಇತಿಹಾಸ ಚರಿತ್ರೆಯನ್ನು ಓದಿ ತಿಳಿದುಕೊಳ್ಳಬೇಕು. ಇಲ್ಲಿವರೆಗೆ ವಿದೇಶಗಳಲ್ಲಿ ಓಡಾಡುತ್ತಿರುವಂತಹ ರೈಲುಗಳು ಇಂದು ನಮ್ಮ ಮನೆ ಬಾಗಿಲಿನಲ್ಲಿ ಓಡಾಡುತ್ತಿರುವುದನ್ನು ನೋಡುತ್ತಿದ್ದೇವೆ. ಭಾರತ ದೇಶ ಯುವಸಮೂಹ ಹೊಂದಿರುವ ದೇಶವಾಗಿದೆ. ಯುವ ಜನರು ಮನಸ್ಸು ಮಾಡಿದರೆ ದೇಶವನ್ನು ಅಗಾಧವಾಗಿ ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತದೆ ಎಂದರು.

ಇದೆ ಸಂದರ್ಭದಲ್ಲಿ ಸುಮಾರು 150 ಮೀ. ಉದ್ದ ಬಾವುಟವನ್ನು ವಿದ್ಯಾರ್ಥಿಗಳು ಕೆ.ಇ.ಬಿ. ವೃತದಿಂದ ವೀರಶೈವ ಕಲ್ಯಾಣ ಮಂಟಪದವರೆಗೆ ಹೊತ್ತು ನೂರಾರು ದೇಶಭಕ್ತರೊಂದಿಗೆ ಹೆಜ್ಜೆ ಹಾಕಿದರು.

ಇದೆ ಸಂದರ್ಭದಲ್ಲಿ ನಿವೃತ್ತ ಯೋಧರಿಗೆ ಸನ್ಮಾನಿಸಲಾಯಿತು. ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ತಾಲ್ಲೂಕು ಅಧ್ಯಕ್ಷೆ ಉಮಾ ರವಿಪ್ರಕಾಶ್, ಬಿಜೆಪಿ ಜಿಲ್ಲಾ ಪದಾಧಿಕಾರಿಗಳು, ತಾಲೂಕು ಪದಾಧಿಕಾರಿಗಳು, ವಿದ್ಯಾರ್ಥಿಗಳು, ಶಾಲಾ ಶಿಕ್ಷಕರು, ಸ್ಥಳೀಯ ಮುಖಂಡರು, ಕಾರ್ಯಕರ್ತರು ಹಾಗೂ ದೇಶಭಕ್ತರು ಪಾಲ್ಗೊಂಡಿದ್ದರು.

## ವ್ಯಕ್ತಿತ್ವ ವಿಕಸನಕ್ಕೆ ಎನ್‌ಎಸ್‌ಎಸ್ ಸಹಕಾರಿ



• ಪ್ರಜೋದಯ ವರದಿ

**ಹಾಸನ:** ರಾಷ್ಟ್ರೀಯ ಸೇವಾ ಯೋಜನೆಯು ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ, ದೇಶಪ್ರೇಮ ಹಾಗು ವ್ಯಕ್ತಿತ್ವ ವಿಕಸನದಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತದೆಂದು ಹಾಸನ ವಿಶ್ವ ವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಸಂಯೋಜನಾಧಿಕಾರಿ ರವಿಕುಮಾರ್ ಅವರು ಹೇಳಿದರು.

ನಗರದ ಜ್ಞಾನಧಾರೆ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕದಿಂದ ನಡೆದ ಅಭಿವಿನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಈ ಚಟುವಟಿಕೆಯಲ್ಲಿ ಭಾಗವಹಿಸುವ ಮೂಲಕ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳಬೇಕೆಂದರು.

ಅಧ್ಯಕ್ಷತೆಯನ್ನು ಪ್ರಾಂಶುಪಾಲ ಎಂ.ಎನ್.ಕಾಂತರಾಜು ವಹಿಸಿದ್ದರು. ಜಿಲ್ಲಾ ಯುವ ಸಮನ್ವಯ ಅಧಿಕಾರಿ ಜಿತ್ಯಾ, ಕಾಲೇಜಿನ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಸಂಜಯ್ ಕುಮಾರ್, ಉಪನ್ಯಾಸಕ ಶ್ರೀನಿವಾಸ್, ಸುನಿಲ್, ಪೂಜಾ ಮತ್ತಿತರರಿದ್ದರು.

# ಸೆಪ್ಟೆಂಬರ್‌ನಲ್ಲಿ ಭಾರತ-ಆಫ್ಘನ್ ಟಿ-20 ಸರಣಿ

## ಬಿ.ಸಿ.ಸಿ.ಐ-ಅಫ್ಘಾನಿಸ್ತಾನ ಕ್ರಿಕೆಟ್ ಮಂಡಳಿ ನಡುವಿನ ಸಂಬಂಧ ಮತ್ತಷ್ಟು ಗಟ್ಟಿ

• ಪ್ರಜೋದಯ ವರದಿ



**ನವದೆಹಲಿ:** ಭಾರತ ಮತ್ತು ಅಫ್ಘಾನಿಸ್ತಾನ ನಡುವಿನ ಮುಂಬರುವ ಮೂರು ಪಂದ್ಯಗಳ ಟಿ-20 ಅಂತಾರಾಷ್ಟ್ರೀಯ ಸರಣಿಯನ್ನು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಖಚಿತಪಡಿಸಿದೆ.

ಸರಣಿಯ ಮೊದಲ ಪಂದ್ಯ ಸೆಪ್ಟೆಂಬರ್ 13ರಂದು ನಡೆಯಲಿದ್ದು, ಎರಡನೇ ಹಾಗೂ ಮೂರನೇ ಪಂದ್ಯಗಳು ಕ್ರಮವಾಗಿ ಸೆಪ್ಟೆಂಬರ್ 15 ಮತ್ತು 17ರಂದು ನಡೆಯಲಿವೆ. ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣವು ಸರಣಿಯ ಎಲ್ಲಾ ಮೂರು ಪಂದ್ಯಗಳಿಗೆ ಆತಿಥ್ಯ ವಹಿಸಲಿದೆ.

ಅಫ್ಘಾನಿಸ್ತಾನವು ಆತಿಥೇಯ ತಂಡವಾಗಿ ಈ ಸರಣಿಯಲ್ಲಿ ಆಡಲಿದೆ. ಬಿಸಿಸಿಐ ಅಧ್ಯಕ್ಷ ಮಿಥುನ್ ಮನ್ಹಾಸ್ ಅವರು ಈ ಬೆಳವಣಿಗೆಯನ್ನು ಖಚಿತಪಡಿಸಿದ್ದು, ಅಫ್ಘಾನಿಸ್ತಾನ ಕ್ರಿಕೆಟ್‌ಗೆ ಬೆಂಬಲ ನೀಡುವ ಬಿಸಿಸಿಐನ ಬದ್ಧತೆಯನ್ನು ಮತ್ತೊಮ್ಮೆ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಮತ್ತು ಅಫ್ಘಾನಿಸ್ತಾನ ಕ್ರಿಕೆಟ್ ಮಂಡಳಿ ನಡುವಿನ ಸಂಬಂಧವನ್ನು ಈ ಸರಣಿ ಮತ್ತಷ್ಟು ಬಲಪಡಿಸಲಿದೆ ಎಂದು ಅವರು ಹೇಳಿದ್ದಾರೆ.

''ಅಫ್ಘಾನಿಸ್ತಾನದಲ್ಲಿ ಕ್ರಿಕೆಟ್ ಬೆಳವಣಿಗೆಗೆ ಬೆಂಬಲ ನೀಡಲು ಮತ್ತು ಅದರ ಆಟಗಾರರಿಗೆ ಉನ್ನತ ಮಟ್ಟದಲ್ಲಿ ಸ್ಪರ್ಧಿಸುವ ಅವಕಾಶಗಳನ್ನು ಒದಗಿಸಲು ಬಿಸಿಸಿಐ ಬದ್ಧವಾಗಿದೆ. ದ್ವಿಪಕ್ಷೀಯ ಕ್ರಿಕೆಟ್ ಇದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಗುಣಮಟ್ಟದ ಎದುರಾಳಿಗಳ ವಿರುದ್ಧ ನಿಯಮಿತವಾಗಿ ಆಡುವುದರಿಂದ ತಂಡಗಳಿಗೆ ಅಮೂಲ್ಯವಾದ ಅನುಭವ ದೊರೆಯುತ್ತದೆ ಎನ್ನಲಾಗಿದೆ.

ಈ ಸರಣಿಗಾಗಿ ಅಫ್ಘಾನಿಸ್ತಾನ ಕ್ರಿಕೆಟ್ ಮಂಡಳಿಯನ್ನು ಭಾರತಕ್ಕೆ ಸ್ವಾಗತಿಸುತ್ತೇವೆ. ಸರಣಿಯನ್ನು ಯಶಸ್ವಿಗೊಳಿಸಲು ಅವರೊಂದಿಗೆ ನಿಕಟವಾಗಿ ಕೆಲಸ ಮಾಡಲು ಎದುರು ನೋಡುತ್ತಿದ್ದೇವೆ. ಎರಡೂ ದೇಶಗಳ ಕ್ರಿಕೆಟ್ ಸಂಬಂಧವನ್ನು ಮತ್ತಷ್ಟು ಬಲಪಡಿಸುವುದರ ಜೊತೆಗೆ, ಒಟ್ಟಾಗಿ ಇನ್ನಷ್ಟು ಕೆಲಸ ಮಾಡುವ ಅವಕಾಶಗಳಿವೆ ಎಂಬ ನಂಬಿಕೆ ನಮಗಿದೆ,'' ಎಂದು ಮನ್ಹಾಸ್ ಅವರು ಸುದ್ದಿಗಾರರೊಂದಿಗೆ ಹೇಳಿದ್ದಾರೆ.

ಈ ಮಧ್ಯೆ, ಬಿಸಿಸಿಐ ಅಫ್ಘಾನಿಸ್ತಾನ ವಿರುದ್ಧದ ಸರಣಿಯನ್ನು ಅಧಿಕೃತವಾಗಿ ಖಚಿತಪಡಿಸಿರುವ ಹಿನ್ನೆಲೆಯಲ್ಲಿ, ಭಾರತದ ಪ್ರಸ್ತಾವಿತ ಬಾಂಗ್ಲಾದೇಶ ಪ್ರವಾಸ ನಡೆಯುವ ಸಾಧ್ಯತೆ ಮತ್ತಷ್ಟು ಕಡಿಮೆಯಾಗಿದೆ.

ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ (ಬಿಸಿಬಿ) ಸೆಪ್ಟೆಂಬರ್ 1ರಿಂದ 13ರವರೆಗೆ ಆರು ಪಂದ್ಯಗಳ ವೈಟ್-ಬಾಲ್ ಸರಣಿಗಾಗಿ ಸಮಯವನ್ನು ನಿಗದಿಪಡಿಸಿತ್ತು.

## ಆಗಸ್ಟ್ - ಸೆಪ್ಟಂಬರ್ ತಿಂಗಳ ಪಡಿತರ ವಿತರಣೆ

• ಪ್ರಜೋದಯ ವರದಿ

**ಹಾಸನ:** ಪ್ರಸ್ತುತ ಆಗಸ್ಟ್ ಮಾಹೆಯಲ್ಲಿ ಎರಡು ತಿಂಗಳು ಒಟ್ಟಿಗೆ ಆಗಸ್ಟ್- 2026 ಮತ್ತು ಸೆಪ್ಟೆಂಬರ್-2026 ಮಾಹೆಗಳಿಗೆ ಸೇರಿಸಿ ರಾಜ್ಯ ವ್ಯಾಪ್ತಿಯ ಪ್ರತಿ ಪಿ.ಎಚ್.ಎಚ್. ಫಲಾನುಭವಿಗೆ ತಲಾ 5 ಕೆಜಿ ಅಕ್ಕಿಯಂತೆ 10 ಕೆ.ಜಿ. ಹಂಚಿಕೆ ಪ್ರಮಾಣವನ್ನು ನಿಗದಿಪಡಿಸಿ ಹಂಚಿಕೆ ನೀಡಿದೆ ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ಪ್ರಸ್ತುತ ಆಗಸ್ಟ್-2026 ಮಾಹೆಯಲ್ಲಿ ಆದ್ಯತೇತರ ಪಡಿತರ ಚೀಟಿ (ಎ.ಪಿ.ಎಲ್) ಗೆ ಯಾವುದೇ ಆಹಾರ ಧಾನ್ಯ ಹಂಚಿಕೆಯಾಗಿರುವುದಿಲ್ಲವೆಂದು ಪಡಿತರ ಚೀಟಿದಾರರಿಗೆ ಈ ಮೂಲಕ ತಿಳಿಯಪಡಿಸಿದೆ.

ಒಂದು ರಾಷ್ಟ್ರ ಒಂದು ಪಡಿತರ ಚೀಟಿ(ಅಂತರ್‌ರಾಜ್ಯ/ಅಂತರ್‌ಜಿಲ್ಲೆ) ಪೋರ್ಟೆ ಬಿಲಿಟಿ ಜಾರಿಯಲ್ಲಿರುವುದರಿಂದ ಯಾವುದೇ ರಾಜ್ಯದ ಪಡಿತರ ಚೀಟಿದಾರರು ಮತ್ತು ಯಾವುದೇ ವರ್ಗದ ಪಡಿತರ ಚೀಟಿದಾರರು ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಯಾವುದೇ ನ್ಯಾಯ ಬೆಲೆ ಅಂಗಡಿದಾರರು ಕಡಿಮೆ ಪ್ರಮಾಣದ ಪಡಿತರವನ್ನು ವಿತರಣೆ ಮಾಡಿದ್ದಲ್ಲಿ, ಹಣ ಕೇಳಿದ್ದಲ್ಲಿ ಮತ್ತು ಇತರೆ ದೂರುಗಳಿಗೆ ನಿಶುಲ್ಕ ದೂರವಾಣಿ ಸಂಖ್ಯೆ 1967 ಹಾಗೂ 1800-425-9339 ಮತ್ತು 14445 ಕ್ಕೆ ಹಾಗೂ ಆಯಾ ತಾಲ್ಲೂಕಿನಲ್ಲಿರುವ ತಹಶೀಲ್ದಾರರ ಕಚೇರಿಗೆ ಅಥವಾ ಜಿಲ್ಲೆಯ ಜಂಟಿ ನಿರ್ದೇರ್ಶಕರ ಕಚೇರಿಗೆ ದೂರನ್ನು ಸಲ್ಲಿಸಬಹುದಾಗಿದೆ.

ಸದರಿ ಯೋಜನೆಯಡಿ ವಿತರಿಸಲಾದ ಆಹಾರ ಧಾನ್ಯಗಳನ್ನು ಹಣಕ್ಕಾಗಿ ಪಡಿತರ ಚೀಟಿದಾರರು ಮಾರಾಟ ಮಾಡುವುದಾಗಲಿ ಅಥವಾ ಸಂಗ್ರಹಣೆ ಮಾಡುವುದು ಕಂಡು ಬಂದಲ್ಲಿ ಅಂತಹ ಪಡಿತರ ಚೀಟಿದಾರರಿಗೆ ವಿತರಿಸಲಾದ ಆಹಾರ ಧಾನ್ಯಗಳಿಗೆ ಮುಕ್ತಮಾರುಕಟ್ಟೆ ದರಕ್ಕೆ ದಂಡ ವಿಧಿಸಲಾಗುವುದು ಮತ್ತು ಸದರಿ ಪಡಿತರ ಚೀಟಿಯನ್ನು ಆರು ತಿಂಗಳ ಅವಧಿಗೆ ಅಮಾನತ್ತು ಗೊಳಿಸಲಾಗುವುದೆಂದು ತಿಳಿಸಿದ್ದಾರೆ.

## ಗ್ರಾಮೀಣ ಜನರಲ್ಲಿ ಹೆಚ್ಚಿಸಿದ ಗ್ರಾಮ ಆಡಳಿತ ಅಧಿಕಾರಿ ಹುದ್ದೆ ನಿರೀಕ್ಷೆ

# ಸರ್ಕಾರಿ ಉದ್ಯೋಗ ಪಡೆಯುವುದು ಯುವಜನರ ಕನಸು

• ಪ್ರಜೋದಯ ವರದಿ



**ಹಾಸನ:** ಸರ್ಕಾರಿ ಉದ್ಯೋಗ ಪಡೆಯುವುದು ಅನೇಕ ಯುವಜನರ ಕನಸು ಅದರಲ್ಲೂ ಗ್ರಾಮೀಣ ಆಡಳಿತ ವ್ಯವಸ್ಥೆಯೊಂದಿಗೆ ನೇರವಾಗಿ ಸಂಪರ್ಕ ಹೊಂದಿರುವ ಗ್ರಾಮ ಆಡಳಿತ ಅಧಿಕಾರಿ ಹುದ್ದೆಯು ಉದ್ಯೋಗಾಂಕಾಕ್ಷಿಗಳಲ್ಲಿ ಹೆಚ್ಚಿನ ನಿರೀಕ್ಷೆ ಮೂಡಿಸಿದೆ ಎಂದು ಮೈಸೂರು ಭಾ.ಆ.ಸೇ., ಪ್ರಾದೇಶಿಕ ಆಯುಕ್ತರು, ಆಡಳಿತಾಧಿಕಾರಿ ಹಾಸನ ಮಹಾನಗರ ಪಾಲಿಕೆ ಮತ್ತು ಅಧ್ಯಕ್ಷ ನಿತೀಶ್ ಪಾಟೀಲ್ ಅವರು ತಿಳಿಸಿದ್ದಾರೆ.

ಜಿಲ್ಲಾ ಮತ್ತು ನಗರ ಕೇಂದ್ರ ಗ್ರಂಥಾಲಯ ಹಾಗೂ ಪವರ್ ಇಂಡಿಯನ್ ಅಕಾಡೆಮಿ ಸ್ಟಡಿ ಸೆಂಟರ್ ಹಾಸನ, ಸಂಸ್ಥೆಯ ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತು ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಅಣುಕು ಲಿಖಿತ ಪರೀಕ್ಷೆ ಮತ್ತು ಗ್ರಂಥಾಪಾಲಕರ ದಿನಾಚರಣೆಯ ಪ್ರಯುಕ್ತ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಪ್ರಯುಕ್ತ ಈಗಾಗಲೇ ಅಧಿಸೂಚನೆ ಆಗಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಗ್ರಾಮ ಆಡಳಿತ ಅಧಿಕಾರಿ ನೇಮಕಾತಿಗೆ ಸಂಬಂಧಿಸಿದಂತೆ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಆಕಾಂಕ್ಷಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಪರೀಕ್ಷಾ ಆಧಾರಿತ ನೇಮಕಾತಿ ನಡೆಯುತ್ತಿರುವುದರಿಂದ ಅಭ್ಯರ್ಥಿಗಳು ಕೇವಲ ಪಠ್ಯಪುಸ್ತಕದ ಜ್ಞಾನಕ್ಕೆ ಸೀಮಿತವಾಗದೆ ಸಾಮಾನ್ಯ ಜ್ಞಾನ, ಪ್ರಚಲಿತ ವಿದ್ಯಮಾನ, ಭಾಷಾ ಕೌಶಲ್ಯ, ಮಾನಸಿಕ ಸಾಮರ್ಥ್ಯ ಹಾಗೂ ಪ್ರಾಥಮಿಕ ಕಂಪ್ಯೂಟರ್ ಜ್ಞಾನವನ್ನು ಬೆಳಿಸಿಕೊಳ್ಳಬೇಕಾಗಿದೆ ಎಂದು ಅವರು ತಿಳಿಸಿದರು.

ಸರಿಯಾದ ಸಿದ್ದತೆಯೇ ಯಶಸ್ಸಿನ ದಾರಿ, ಅಣುಕು ಪರೀಕ್ಷೆ ಬರೆಯುವುದರಿಂದ ವೇಗ, ನಿಖರತೆ ಮತ್ತು ಸಮಯ ನಿರ್ವಹಣೆ ಸುಧಾರಿಸುತ್ತದೆ. ಯಶಸ್ಸು ಒಂದೇ ದಿನದಲ್ಲಿ ದೊರೆಯುವುದಿಲ್ಲ, ಪ್ರತಿದಿನ ಕಲಿಯುವ ಹೊಸ ವಿಷಯ, ಪ್ರತಿಯೊಂದು ತಪ್ಪಿನಿಂದ ಪಡೆಯುವ ಪಾಠ ಮತ್ತು ನಿರಂತರವಾಗಿ ಮುಂದುವರೆಸುವ ಪ್ರಯತ್ನವೇ ಅಂತಿಮವಾಗಿ ಅಭ್ಯರ್ಥಿಯನ್ನು ಗುರಿಯತ್ತ ಕೊಂಡುಯ್ಯುತ್ತದೆ. ಹೆಚ್ಚು ಓದುವುದಕ್ಕಿಂತೆ ಸರಿಯಾಗಿ ಓದಿ, ಓದಿದ್ದನ್ನು ಪುನರಾವರ್ತಿಸಿ ಪರೀಕ್ಷೆಯಲ್ಲಿ ಅದನ್ನು ಪರಿಣಾಮಕಾರಿಯಾಗಿ ಬಳಸುವ ಸಾಮರ್ಥ್ಯ ಬೆಳಿಸಿಕೊಳ್ಳುವುದೇ ಸ್ಪರ್ಧಾತ್ಮಕ ಪರೀಕ್ಷೆಯ ಯಶಸ್ಸಿನ ನಿಜವಾದ ಮಾರ್ಗ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಪವರ್ ಇಂಡಿಯನ್ ಅಕಾಡೆಮಿ ಸ್ಟಡಿ ಸೆಂಟರ್ ಹಾಸನ ಸಂಸ್ಥೆಯ ಸಂಸ್ಥಾಪಕರು ಮತ್ತು ಮುಖ್ಯಸ್ಥ ರಮೇಶ ಅವರು ಮತನಾಡಿ, ಅಣಕು ಪರೀಕ್ಷೆಯ ಬಗ್ಗ ಗ್ರಾಮ ಆಡಳಿತ ಅಧಿಕಾರಿ ಹುದ್ದೆಯ ಪರೀಕ್ಷೆ ಸಿದ್ದತೆಯಲ್ಲಿ ಮೊದಲ ಹೆಜ್ಜೆ ಪರೀಕ್ಷೆ ಅಧಿಸೂಚನೆ ಮತ್ತು ಪಠ್ಯ ಕ್ರಮವನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳುವುದಾಗಿದೆ ಎಂದು ಅವರು ತಿಳಿಸಿದರು.

ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ ಅರ್ಹತಾ ಸ್ವರೂಪದಾಗಿದ್ದು, ಅನಂತರ ನಡೆಯುವ ಬಹು ಆಯ್ಕೆ ಪರೀಕ್ಷಯಲ್ಲಿ ಸಾಮಾನ್ಯ ಜ್ಞಾನ, ಸಾಮಾನ್ಯ ಕನ್ನಡ, ಸಾಮಾನ್ಯ ಇಂಗ್ಲೀ ಮತ್ತು ಕಂಪ್ಯೂಟರ್ ಜ್ಞಾನಕ್ಕೆ ಸಂಬಂಧಿಸಿದ ಪತ್ರಿಕೆಗಳಿರುತ್ತವೆ. ಒಟ್ಟು ಅಂಕಗಳು ಸಮಯ ಮತ್ತು ಋಣಾತ್ಮಕ ಅಂಕಗಳ ನಿಯಮವನ್ನು ಗಮನದಲ್ಲಿ ಇಟ್ಟುಕೊಂಡು ಅಭ್ಯರ್ಥಿಗಳು ಪರೀಕ್ಷಾ ತಂತ್ರ ರೂಪಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು.

ಜಿಲ್ಲಾ, ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕ ಜಿ.ಐ.ನಳಿನಿ, ಜಿಲ್ಲಾ ಕೇಂದ್ರ ಗ್ರಂಥಾಲಯದ ಸಿಬ್ಬಂದಿ ಕಾಂತರಾಜು, ಜಿಲ್ಲಾ ಹಾಗೂ ನಗರ ಕೇಂದ್ರ ಗ್ರಂಥಾಲಯದ ಎಲ್ಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ನಿವೃತ್ತ ನ್ಯಾ. ಯಶವಂತ್ ವರ್ಮಾ ತಪ್ಪಿತಸ್ಥ: ಸಮಿತಿ

**ನವದೆಹಲಿ:** ಮನೆಯಲ್ಲಿ ಹಣ ಪತ್ತೆ ಪ್ರಕರಣದಲ್ಲಿ ದೆಹಲಿ ಹೈಕೋರ್ಟ್‌ನ ಮಾಜಿ ನ್ಯಾ. ಯಶವಂತ್ ವರ್ಮಾ ಅವರ ವಿರುದ್ಧದ ಮೂರು ಆರೋಪಗಳು ಸಾಬೀತಾಗಿವೆ ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ರಚಿಸಿದ್ದ ಮೂವರು ಸದಸ್ಯರ ವಿಚಾರಣಾ ಸಮಿತಿ ಹೇಳಿದೆ.

ನ್ಯಾಯಾಧೀಶರ (ವಿಚಾರಣಾ) ಕಾಯ್ದೆ, 1968ರ ಅಡಿಯಲ್ಲಿ ಸಲ್ಲಿಸಿದ ತನ್ನ ವರದಿಯಲ್ಲಿ ಸಮಿತಿಯು, ನ್ಯಾಯಾಧೀಶ ವರ್ಮಾ ಅವರ ಅಧಿಕೃತ ನಿವಾಸದ ಆವರಣದ ಭಾಗವಾಗಿರುವ ಸ್ಟೋರ್ ರೂಂನೊಳಗೆ ಅಪಾರ ಪ್ರಮಾಣದಲ್ಲಿ 500 ರೂ. ಮುಖಬೆಲೆಯ ನೋಟುಗಳು ಕಂಡುಬಂದಿವೆ ಎಂದು ತೀರ್ಮಾನಿಸಿದೆ.

ನಗದು ವಸೂಲಾತಿ ಪ್ರಕರಣದಲ್ಲಿ ಮಾಜಿ ನ್ಯಾಯಾಧೀಶರನ್ನು ತಪ್ಪಿತಸ್ಥರೆಂದು ಸಮಿತಿಯು ಘೋಷಿಸಿದೆ. 2025ರ ಮಾ. 14 ರಂದು ರಾತ್ರಿ ನ್ಯಾ. ವರ್ಮಾ ಅವರ ನಿವಾಸದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಬೆಂಕಿ ನಂದಿಸಲು ಬಂದಿದ್ದ ಅಗ್ನಿಶಾಮಕ ದಳದ ಸಿಬ್ಬಂದಿ, ನಿವಾಸದ ಕೋಣೆಯಲ್ಲಿ ಅಪಾರ ಪ್ರಮಾಣದ ಸುಟ್ಟ ಕರೆನ್ಸಿಗಳನ್ನು ಕಂಡಿದ್ದರು.

ನವದೆಹಲಿಯ ತುಘಲಕ್ ಕ್ರೆಸೆಂಟ್‌ನ 30ನೇ ಸಂಖ್ಯೆಯ ಅಧಿಕೃತ ನಿವಾಸದೊಳಗಿನ ಕೊಠಡಿಯಲ್ಲಿ 500 ರೂ. ಮುಖಬೆಲೆಯ ನೋಟುಗಳು ದೊಡ್ಡ ಪ್ರಮಾಣದಲ್ಲಿ ಪತ್ತೆಯಾಗಿವೆ.

# ಅ.1 ರಿಂದ 4ರ ವರೆಗೆ ಕ್ರಿಕೆಟ್ ಪಂದ್ಯಾವಳಿ

## ಯಗಟಿ ಗ್ರಾಮದಲ್ಲಿ ಪಂಚಾಯತ್ ಚಾಂಪಿಯನ್ ಟ್ರೋಫಿ-2026

• ಪ್ರಜೋದಯ ವರದಿ



**ಅರಕಲಗೂಡು:** ವಿಷ್ಣುವರ್ಧನ್ ಹಾಗೂ ಶಂಕರ್ ನಾಗ್ ಸೇನಾ ಸಮಿತಿ ವತಿಯಿಂದ ತಾಲ್ಲೂಕಿನ ಯಗಟಿ ಗ್ರಾಮದಲ್ಲಿ ಪಂಚಾಯತ್ ಚಾಂಪಿಯನ್ ಟ್ರೋಫಿ-2026 ಲೀಗ್ ಮಾದರಿಯ ಕ್ರಿಕೆಟ್ ಪಂದ್ಯಾವಳಿ ಅಕ್ಟೋಬರ್ 1 ರಿಂದ 4ರ ವರೆಗೆ ನಡೆಯಲಿದೆ ಎಂದು ಸಮಿತಿ ಉಪಾಧ್ಯಕ್ಷ ವಿಜಯ್ ಕುಮಾರ್ ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಪಂದ್ಯಾವಳಿಗೆ ತಂಡಗಳ ಪ್ರವೇಶ ಶುಲ್ಕ 15 ಸಾವಿರ ರೂ.ಗಳನ್ನು ನಿಗದಿಪಡಿಸಲಾಗಿದ್ದು, ತಂಡಗಳ ನೋಂದಣಿಗೆ ಆಗಸ್ಟ್ 20 ರಂದು ಕೊನೆಯ ದಿನವಾಗಿದೆ. ವಿಜೇತ ತಂಡಕ್ಕೆ ಒಂದು ಲಕ್ಷ ರೂ. ಹಾಗೂ ಟ್ರೋಫಿ, ದ್ವಿತೀಯ ಸ್ಥಾನಕ್ಕೆ 50 ಸಾವಿರ ರೂ., ತೃತೀಯ ಹಾಗೂ ಚತುರ್ಥ ಸ್ಥಾನ ಪಡೆದ ತಂಡಗಳಿಗೆ ತಲಾ 25 ಸಾವಿರ ರೂ. ಬಹುಮಾನ ನೀಡಲಾಗುವುದು. ವಿವಿಧ ವೈಯಕ್ತಿಕ ವಿಭಾಗಗಳಲ್ಲೂ ಆಕರ್ಷಕ ಬಹುಮಾನ ನೀಡಲಾಗುವುದು ಎಂದರು.

ಸಮಿತಿ ಸದಸ್ಯ ಮಧು ಮ್ಯಾಡಿ ಅವರು ಮಾತನಾಡಿ, ವಿಲ್ಸನ್ 4 ಬಾಲ್ ಮಾದರಿಯಲ್ಲಿ ಪಂದ್ಯಗಳು ನಡೆಯಲಿದ್ದು, ಪ್ರತಿ ಪಂದ್ಯ 5 ಓವರ್‌ಗಳಿಗೆ ಸೀಮಿತವಾಗಿರುತ್ತದೆ. ನಾಲ್ವರು ಬೌಲರ್‌ಗಳನ್ನು ಬಳಸುವುದು ಕಡ್ಡಾಯವಾಗಿದ್ದು, ಒಬ್ಬ ಬೌಲರ್‌ಗೆ ಗರಿಷ್ಠ 2 ಓವರ್ ಬೌಲಿಂಗ್ ಮಾಡಲು ಅವಕಾಶವಿದೆ. ಚೆಕ್ ಎಸೆತಗಳಿಗೆ ಅವಕಾಶವಿರುವುದಿಲ್ಲ ಎಂದು ತಿಳಿಸಿದರು.

ಪ್ರತಿ ತಂಡಕ್ಕೆ ಲೀಗ್ ಹಂತದಲ್ಲಿ ಕನಿಷ್ಠ ಮೂರು ಪಂದ್ಯಗಳು ನಡೆಯಲಿದ್ದು, ಗರಿಷ್ಠ 15 ಆಟಗಾರರಿಗೆ ಅವಕಾಶವಿದೆ. ಎಲ್ಲ ಆಟಗಾರರಿಗೆ ಜರ್ಸಿ ನೀಡಲಾಗುವುದು. ಪಂದ್ಯದಲ್ಲಿ ಸಮವಸ್ತ್ರ ಕಡ್ಡಾಯವಾಗಿದ್ದು, ಚಪ್ಪಲಿ ಧರಿಸಿ ಆಡಲು ಅವಕಾಶವಿಲ್ಲ. ಅರಕಲಗೂಡು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳ ಎಲ್ಲ ಗ್ರಾಮಗಳ ಆಟಗಾರರು ಭಾಗವಹಿಸಬಹುದು ಎಂದು ಮಾಹಿತಿ ನೀಡಿದರು.

ಪಂದ್ಯಗಳು ಯೂಟ್ಯೂಬ್‌ನಲ್ಲಿ ನೇರ ಪ್ರಸಾರವಾಗಲಿದ್ದು, ಆಟಗಾರರಿಗೆ ತಿಂಡಿ, ಊಟ, ಕಾಫಿ, ಟೀ ಹಾಗೂ ಸ್ನಾಕ್ಸ್ ವ್ಯವಸ್ಥೆ ಮಾಡಲಾಗುವುದು. ಭಾಗವಹಿಸುವ ಪ್ರತಿಯೊಂದು ತಂಡಕ್ಕೂ ಸ್ಮರಣಿಕೆ ಮತ್ತು ಟ್ರೋಫಿ ನೀಡಲಾಗುವುದು ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಮಿತಿ ಸದಸ್ಯರಾದ ವಿಷ್ಣು, ವಿಜಯ್, ಪುನೀತ್, ಸುನೀಲ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

### ಡಿ.ಕೆ.ಶಿವಕುಮಾರ್ ವಿರುದ್ಧ ಕೇಂದ್ರ ಸಚಿವ ಹೆಚ್.ಡಿ.ಕೆ. ತೀವ್ರ ವಾಗ್ದಾಳಿ

# ಕಾನೂನು ಪಂಡಿತರನ್ನು ಕತ್ತಲೆಯಲ್ಲಿಟ್ಟ ಸರ್ಕಾರ

• ಪ್ರಜೋದಯ ವರದಿ

**ನವದೆಹಲಿ:** ಕಾವೇರಿ ವಿಚಾರದಲ್ಲಿ ನಿರಂತರವಾಗಿ ತಪ್ಪು ಹೆಜ್ಜೆ ಇಡುತ್ತಿರುವ ರಾಜ್ಯ ಸರ್ಕಾರ ನಮ್ಮ ಕಾನೂನು ಪಂಡಿತರನ್ನು ಕತ್ತಲೆಯಲ್ಲಿಟ್ಟಿದೆ ಯೆಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾ ಡಿದ ಅವರು, ರಾಜ್ಯದ ಪರವಾಗಿ ಸುಪ್ರೀಂ ಕೋರ್ಟ್ ಮತ್ತು ಪ್ರಾಧಿಕಾರ, ಸಮಿತಿಗಳ ಮುಂದೆ ರಾಜ್ಯದ ಪರವಾಗಿ ವಾದ ಮಾಡುತ್ತಿ ರುವ ವಕೀಲರನ್ನು ಸರ್ಕಾರ ಗೌರವಯುತವಾಗಿ ನಡೆಸಿಕೊಳ್ಳುತ್ತಿಲ್ಲ ವೆಂದು ಬೇಸರ ವ್ಯಕ್ತಪಡಿಸಿದರು.

ನವದೆಹಲಿಯ ಕರ್ನಾಟಕ ಭವನದಲ್ಲಿ ಮುಖ್ಯಮಂತ್ರಿ ಕರೆದಿದ್ದ ಸಂಸದರ ಸಭೆಯಲ್ಲಿ ಹಿರಿಯ ವಕೀಲ ಮೋಹನ್ ಕಾತರಕಿ ಅವರಿಗೆ ಕುಳಿತುಕೊಳ್ಳಲು ಕುರ್ಚಿ ನೀಡಲಿಲ್ಲ. ಬೆಂಗಳೂ ರಿನ ಕೃಷ್ಣಾ ಕಚೇರಿಯಲ್ಲಿ ನಡೆದ ಸರ್ವಪಕ್ಷ ಸಭೆಯಲ್ಲಿ ಕೂಡ ಕಾನೂನು ಪಂಡಿತರನ್ನು ನಮ್ಮ ಮುಖ್ಯಮಂತ್ರಿ ಸರಿಯಾಗಿ ನಡೆಸಿಕೊಳ್ಳಲಿಲ್ಲ ಎಂದರು.

ಸಭೆ ಆರಂಭದಲ್ಲಿಯೇ ಅವರ ಅಭಿಪ್ರಾಯ ಪಡೆಯಬೇಕಿತ್ತು. ಮುಂದಾಲೋಚನೆ, ದೂರ ದೃಷ್ಟಿ ಇಲ್ಲದೆ ರಾಜ್ಯ ಸರ್ಕಾರ ಕೆಲಸ ಮಾಡುತ್ತಿದೆ ಎನ್ನುವುದಕ್ಕೆ ಇದು ಸ್ಪಷ್ಟ ನಿದರ್ಶನ. ಇಂತಹ ಸಭೆ ಕರೆದಾಗ ಕಾನೂನು ವಿಚಾರ, ತಾಂತ್ರಿಕ ವಿಚಾರಗಳನ್ನು ಸಭೆಯ ಮುಂದೆ ಮಂಡಿಸ ಬೇಕಿತ್ತು. ಮುಖ್ಯಮಂತ್ರಿ ಅದನ್ನು ಮಾಡದೇ ತಾವೇ ಎಲ್ಲಾ ಬಲ್ಲವರಂತೆ ಮಾತ ನಾಡುತ್ತ ಹೋದರು. ಕಾನೂನು ಪರಿಣಿತರನ್ನು ಹೀಗೆ ನಿರ್ಲಕ್ಷ್ಯ ಮಾಡಿದರೆ ಹೇಗೆ ಎಂದು ಖಾರವಾಗಿ ಪ್ರಶ್ನಿಸಿದರು.



ಕಾವೇರಿ ನದಿ ನೀರಿನ ಬಿಕ್ಕಟ್ಟು ನಿರ್ವಹಣೆ ಯಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲ ವಾಗಿದೆ. ಸದಾ ಎಚ್ಚರಿಕೆಯಿಂದ ಇರುವ ತಮಿಳು ನಾಡು ಸರ್ಕಾರ, ರಾಜ್ಯ ಸರ್ಕಾರದ ವೈಫಲ್ಯ ಗಳನ್ನು ತನ್ನ ಅನುಕೂಲಕ್ಕೆ ಬಳಕೆ ಮಾಡಿ ಕೊಳ್ಳುತ್ತಿದೆ. ಈ ವರೆಗೆ ಆಗಿರುವ ತಪ್ಪುಗಳಿಂದ ರಾಜ್ಯ ಪಾಠ ಕಲಿಯುವ ಲಕ್ಷಣ ಕಾಣುತ್ತಿಲ್ಲ ವೆಂದು ಸಚಿವರು ಕಟುವಾಗಿ ಟೀಕಿಸಿದರು.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಹಾಗು ಕಾವೇರಿ ನೀರು ನಿಯಂತ್ರಣಾ ಸಮಿತಿ ಎರಡೂ ಕಡೆಯಿಂದ 15 ದಿನ ತಮಿಳುನಾಡಿಗೆ ದಿನವೂ ತಲಾ 12,000 ಕ್ಯೂಸೆಕ್ ನೀರನ್ನು ತಮಿಳುನಾಡಿಗೆ ಹರಿಸಬೇಕೆಂಬ ಆದೇಶ ಪ್ರಕಟ ವಾಗಿದೆ. ಕಾವೇರಿ ನೀರು ಹರಿಸುವ ವಿಚಾರದಲ್ಲಿ ಕರ್ನಾಟಕಕ್ಕಿಂತ ತಮಿಳುನಾಡಿನ ಸಿದ್ಧತೆಗಳು ಬಿರುಸಾಗಿವೆ. ಕರ್ನಾಟಕವು ಜೂನ್‌ನಿಂದ ನೀರು ಬಿಡಬೇಕಿತ್ತು. ಆದರೆ ತಮಿಳುನಾಡು ಮೇ ತಿಂಗಳಲ್ಲೇ ಪ್ರಾಧಿಕಾರದ ಮೊರೆ ಹೋಯಿತು. ಆದರೆ, ಕಾನೂನು ಹೋರಾಟಕ್ಕೆ ನಮ್ಮ ತಂಡಕ್ಕೆ ಶಕ್ತಿ ತುಂಬುವುದು ಬಿಟ್ಟು ನಮ್ಮ ಮುಖ್ಯಮಂತ್ರಿ ಕಾವೇರಿ, ಕೃಷ್ಣಾ ನದಿ ಭಾಗದ ರೈತರು ಬೆಳೆ ಹಾಕಬೇಡಿ ಎಂದು ಉಪದೇಶ ಮಾಡಿದರು. ಅದ ರಿಂದ ನಷ್ಟ ಆಗಿದ್ದು ನಮ್ಮ ರೈತರಿಗೆ. ಬೆಳೆ ದಿದ್ದ ಬೆಳೆಯನ್ನು ಕೂಡ ನೀರಿಲ್ಲದೆ ಕಳೆದುಕೊಳ್ಳ ಬೇಕಾಯಿತೆಂದು ಬೇಸರ ವ್ಯಕ್ತಪಡಿಸಿದರು.

ಕಾವೇರಿ ವಿಷಯದಲ್ಲಿ ಸಿದ್ಧತೆ ಮಾಡಿಕೊಳ್ಳುವ ಬಗ್ಗೆ ತಮಿಳುನಾಡಿಗೂ ಮತ್ತು ನಮಗೂ ಇರುವ ವ್ಯತ್ಯಾಸಗಳ ಬಗ್ಗೆ ಹೇಳುತ್ತಿದ್ದೇನೆ. ಅದನ್ನು ಸರಿಪಡಿಸಿಕೊಂಡರೆ ಉತ್ತಮ. ಸಂಕಷ್ಟ ಸೂತ್ರದ ಬಗ್ಗೆ ಇದುವರೆಗೆ ಸುಪ್ರೀಂ ಕೋರ್ಟ್ ಯಾವ ಆದೇಶ ನೀಡಿಲ್ಲ. ಅಲ್ಲದೆ ಕಾವೇರಿ ಸಮಿತಿ ಮತ್ತು ಪ್ರಾಧಿಕಾರ ಅದರ ಬಗ್ಗೆ ಯಾವ ಕ್ರಮ ವಹಿಸಿಲ್ಲ. ರಾಜ್ಯವು ಸಂಕಷ್ಟ ಸೂತ್ರ ರೂಪಿಸುವ ಬಗ್ಗೆ ಒತ್ತಡ ಹೇರಬೇಕಿತ್ತು. ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆಗುವ ಮೊದಲು ಮೂರು ವರ್ಷ ಜಲಸಂಪನ್ಮೂಲ ಸಚಿವರಾಗಿದ್ದರು. ಆ ಸಂದರ್ಭದಲ್ಲಿ ಅವರು ಏನು ಮಾಡುತ್ತಿದ್ದರೆಂದು ಪ್ರಶ್ನಿಸಿದರು.

**ಕಾವೇರಿಗಿಂತ ಕ್ಯಾಬಿನೆಟ್ ಮುಖ್ಯ**

ಇವರ ಹಣೆಬರಹ ಎಲ್ಲಿಗೆ ಬಂದು ನಿಂತಿದೆ ಎಂದರೆ, ಮೂರು ವರ್ಷಗಳ ಕಾಲ ಮುಖ್ಯಮಂತ್ರಿ ಕುರ್ಚಿಗಾಗಿ ಕಾದಾಟ ನಡೆಸಿದರು. ಇವರು ಮುಖ್ಯಮಂತ್ರಿಯಾದ ಮೇಲೆ ಸಂಪುಟ ವಿಸ್ತರಣೆ, ಖಾತೆ ಹಂಚಿಕೆ ಬಗ್ಗೆಯೇ ಸಮಯ ವ್ಯರ್ಥವಾಯಿತು. ಇವರ ಆದ್ಯತೆ ಕಾವೇರಿಗಿಂತ ಕ್ಯಾಬಿನೆಟ್ ಮೇಲೆ ಜಾಸ್ತಿಯಾಗಿದೆ. ದಿನ ಬೆಳಗಾದರೆ ಮಲ್ಲಿಕಾರ್ಜುನ ಖರ್ಗೆ, ಕೆ.ಸಿ.ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲ ಅವರ ಮನೆಗಳ ಗೇಟು ಗಳನ್ನು ಕಾಯುವುದೇ ಇವರ ಕೆಲಸ ಆಗಿದೆ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

> ಮಳೆ ಬಂದು ಜಲಾಶಯಗಳು ತುಂಬಿದಾಗ ನೀರು ಬಿಡುತ್ತೀರಿ, ಜಲಾಶಯಗಳು ಖಾಲಿ ಯಾದಾಗ ತಮಿಳುನಾಡು ನೀರು ಕೇಳಿದಾಗ ಎಚ್ಚರಗೊಳ್ಳುತ್ತೀರಿ. ಯುದ್ಧ ಕಾಲದಲ್ಲಿ ಶಸ್ತ್ರಾ ಭ್ಯಾಸ ಮಾಡುವುದನ್ನು ಬಿಡಿ. ನೆರೆ ರಾಜ್ಯದ ಒತ್ತಡಕ್ಕೆ ಮಣಿಯದಂತೆ ಎಚ್ಚರ ವಹಿಸಿ.
> -ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

## ವಿಶ್ವಕಪ್ ಹಾಕಿ ತಂಡಕ್ಕೆ
# ಹೊನ್ನೇನಹಳ್ಳಿಯ ಮೋಹಿತ್ ಆಯ್ಕೆ

- ರಾಷ್ಟ್ರ ಮಟ್ಟದಲ್ಲಿ ಮಿಂಚಲಿರುವ ಹಳ್ಳಿ ಪ್ರತಿಭೆ
- ಹುಟ್ಟೂರಿನ ಗೌರವ ಹೆಚ್ಚಿಸುವ ತವಕ

- ಶ್ರೀನಿವಾಸ್ ಉಳ್ಳಾವಳ್ಳಿ ಆರ್.

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ನೆದರ್ಲ್ಯಾಂಡ್ ಹಾಗು ಬೆಲ್ಜಿಯಂನಲ್ಲಿ ಆ.15 ರಂದು ನಡೆಯಲಿರುವ 16ನೇ ಆವೃತ್ತಿಯ ಎಫ್.ಐ.ಹೆಚ್ (ಫೆಡರೇಷನ್ ಆಫ್ ಇಂಟರ್‌ನ್ಯಾಷನಲ್ ಹಾಕಿ) ವಿಶ್ವಕಪ್‌ನ ಭಾರತೀಯ ಪುರುಷರ ತಂಡಕ್ಕೆ ಹಿರೀಸಾವೆ ಹೋಬಳಿ ಹೆಚ್.ಹೊನ್ನೇನಹಳ್ಳಿ ಗ್ರಾಮದ ಹೆಚ್.ಎಸ್.ಮೋಹಿತ್ ಆಯ್ಕೆಯಾಗಿದ್ದಾರೆ.

ಗ್ರಾಮದ ಹೆಚ್.ವಿ.ಶಶಿಕುಮಾರ್ ಹಾಗು ಆಶಾರಾಣಿ ಅವರ ಪುತ್ರ, ಮೋಹಿತ್ 12 ವರ್ಷಗಳ ನಂತರ ಕರ್ನಾಟಕ ದಿಂದ ಭಾರತೀಯ ಸೀನಿಯರ್ ಹಾಕಿ ತಂಡಕ್ಕೆ ಆಯ್ಕೆಯಾ ಗಿರುವುದು ಹೆಮ್ಮೆಯ ವಿಷಯ.

1 ರಿಂದ 4ನೇ ತರಗತಿ ವರೆಗೆ ಚನ್ನರಾಯಪಟ್ಟಣದ ನಾಗಶ್ರೀ ವಿದ್ಯಾಸಂಸ್ಥೆಯಲ್ಲಿ ಶಿಕ್ಷಣ ಪಡೆದಿರುವ ಅವರು 4 ಹಾಗು 5ನೇ ತರಗತಿಯನ್ನು ಪಟ್ಟಣದ ಜ್ಞಾನಸಾಗರ ವಿದ್ಯಾಸಂಸ್ಥೆಯಲ್ಲಿ ಪಡೆದಿದ್ದಾರೆ.

ಕ್ರೀಡೆ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದರಿಂದ ಕುಶಾಲ ನಗರದ ಕೂಡಗಿ ಸ್ಪೋರ್ಟ್ಸ್ ಹಾಸ್ಟೆಲ್‌ನಲ್ಲಿ ನಂತರದ ಶಿಕ್ಷಣ ಮುಂದುವರಿಸಿದರು. ಪ್ರಾರಂಭದಲ್ಲಿ ವಾಲಿಬಾಲ್ ತರಬೇತಿ ಪಡೆಯುತ್ತಿದ್ದ ಮೋಹಿತ್ 9ನೇ ತರಗತಿಯ ಲ್ಲಿದ್ದಾಗ ವಾಲಿಬಾಲ್‌ನತ್ತ ಆಸಕ್ತಿ ಬೆಳೆಸಿಕೊಂಡರು. 2021ರಲ್ಲಿ ಖೇಲೋ ಇಂಡಿಯಾ ಮೂಲಕ ರಾಜ್ಯ ಮಟ್ಟದ ಹಾಕಿ ತಂಡಕ್ಕೆ ಮೊದಲ ಬಾರಿಗೆ ಆಯ್ಕೆಯಾಗಿ 2022ರಲ್ಲಿ ರಾಷ್ಟ್ರೀಯ ಶಿಬಿರದ ಮೂಲಕ 2022ರ ಜೂನಿಯರ್ ತಂಡಕ್ಕೆ ಆಯ್ಕೆಯಾದರು. ಅಲ್ಲಿಂದ ಶುರುವಾದ ಅವರ ಕ್ರೀಡಾ ಓಟ 2026ನೇ ಹಾಕಿ ವಿಶ್ವಕಪ್ ಪಂದ್ಯ ತಲುಪಿದೆ.

2022 ಹಾಗು 2023ನೇ ಸಾಲಿನಲ್ಲಿ ಮಲೇಷಿಯಾದಲ್ಲಿ ನಡೆದ ಸುಲ್ತಾನ್ ಜುವಾರ್ ಕಪ್‌ನಲ್ಲಿ ಗೋಲ್ ಕೀಪರ್ ಆಗಿ ಆಸ್ಟ್ರೇಲಿಯಾ ವಿರುದ್ಧ ಫೈನಲ್ ಪಂದ್ಯದಲ್ಲಿ ಭಾರ ತೀಯ ತಂಡವು ಗೆಲುವು ಸಾಧಿಸಿದ್ದು ಮೋಹಿತ್ ಅವರು ಗೋಲ್ಡ್ ಮೆಡಲ್ ಹಾಗು ಪಂದ್ಯ ಪುರುಷೋತ್ತಮ ಪ್ರಶಸ್ತಿ ಪಡೆದಿದ್ದಾರೆ.

2023ರಲ್ಲಿ ಜೂನಿಯರ್ ಏಷ್ಯಾ ಕಪ್‌ನಲ್ಲಿ ಪಾಕಿಸ್ತಾನ ವಿರುದ್ಧ ಭಾರತೀಯ ತಂಡವು ಗೆಲುವು ಸಾಧಿಸಿದ್ದು ಮೋಹಿತ್ ಮತ್ತೊಮ್ಮೆ ಗೋಲ್ಡ್ ಮೆಡಲ್ ಹಾಗೂ ಮ್ಯಾನ್ ಆಫ್ ದಿ ಮ್ಯಾಚ್ ಪ್ರಶಸ್ತಿಗೆ ಭಾಜನವಾಗಿದ್ದು ಅವರ ಯಶಸ್ಸಿಗೆ ಮತ್ತೊಂದು ಗರಿ ಸಿಕ್ಕಂತಾಗಿದೆ.

2023ರಲ್ಲಿ ಬೆಸ್ಟ್ ಗೋಲ್ ಕೀಪರ್ ಆಫ್ ದಿ ಇಯರ್ ಅವಾರ್ಡ್, 2024 ಹಾಗು 2025ರಲ್ಲಿ ಹಾಕಿ ಇಂಡಿಯನ್ ಲೀಗ್‌ನಲ್ಲಿ ಪಂಜಾಬ್ ತಂಡದಲ್ಲಿ ಸ್ಥಾನ ಪಡೆದು ಉತ್ತಮ ಪ್ರದರ್ಶನ ನೀಡುವ ಮೂಲಕ ಕ್ರೀಡಾಭಿಮಾನಿಗಳಿಂದ ಸೈ ಎನಿಸಿಕೊಂಡಿದ್ದಾರೆ.

ಕುಶಾಲನಗರ ಕೂಡಗಿಯ ಕ್ರೀಡಾ ವಸತಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ವೇಳೆ ಸಂಜಯ್ ಬಾಣತ್ ಅವರು ಹಾಕಿ ತರಬೇತಿ ನೀಡುವ ಮೂಲಕ ಮೋಹಿತ್ ಅವರ ಯಶಸ್ಸಿನ ಮೊದಲ ಗುರುವಾಗಿದ್ದಾರೆಂದು ಮೋಹಿತ್ ಅವರ ತಂದೆ ಶಶಿಕುಮಾರ್ ಅವರು ಹೇಳಿದರು.



> 12 ವರ್ಷಗಳ ಬಳಿಕ ರಾಜ್ಯದಿಂದ ಸೀನಿಯರ್ ಹಾಕಿ ವಿಶ್ವಕಪ್ ಪಂದ್ಯಕ್ಕೆ ತಾಲ್ಲೂಕಿನ ಯುವ ಪ್ರತಿಭೆ ಮೋಹಿತ್ ಆಯ್ಕೆಯಾಗಿರುವುದು ಸಂತಸದ ವಿಚಾರ. ಮೋಹಿತ್ ಮತ್ತಷ್ಟು ಎತ್ತರಕ್ಕೆ ಬೆಳೆಯಲಿ. ಆ ಮೂಲಕ ಹುಟ್ಟೂರು ಹಾಗು ಜಿಲ್ಲೆಯ ಕೀರ್ತಿಯನ್ನು ವಿಶ್ವದಾದ್ಯಂತ ಪಸರಿಸಲಿ.
> -ಶ್ರೇಯಸ್ ಎಂ, ಪಟೇಲ್, ಸಂಸದ

> ನಮ್ಮ ಊರಿನ ಹುಡುಗ ರಾಷ್ಟ್ರೀಯ ಕ್ರೀಡಾಕೂಟಕ್ಕೆ ಆಯ್ಕೆಯಾಗಿರುವುದು ಹೆಮ್ಮೆಯ ಸಂಗತಿ. ಹಳ್ಳಿಯ ಗಂಧ ದಿಲ್ಲಿ ವರೆಗೆ ಎಂಬ ಮಾತು ಅಕ್ಷರಶಹ: ಸತ್ಯ. ಮೋಹಿತ್ ಇನ್ನೂ ಎತ್ತರಕ್ಕೆ ಬೆಳೆದು ದೇಶಕ್ಕೆ ಹಾಗು ಹುಟ್ಟಿದ ಊರಿಗೆ ಕೀರ್ತಿ ತರಲಿ.
> -ಎಂ.ಎ.ಗೋಪಾಲಸ್ವಾಮಿ,
> ವಿಧಾನ ಪರಿಷತ್ ಮಾಜಿ ಸದಸ್ಯ

# ಮಾಜಿ ಶಾಸಕ ಲಿಂಗೇಶ್ ಸೇರಿ 71 ಮಂದಿಗೆ ಜಾಮೀನು

• ಪ್ರಜೋದಯ ವರದಿ

**ಹಾಸನ:** ಬೇಲೂರು ತಾಲ್ಲೂಕಿನಲ್ಲಿ ಬಗರ್ ಹುಕುಂ ಸಾಗುವಳಿ ಭೂಮಿ ಅಕ್ರಮ ಮಂಜೂರಾತಿ ಆರೋಪದಡಿ ಬಂಧನದಲ್ಲಿದ್ದ ಮಾಜಿ ಶಾಸಕ ಕೆ. ಎಸ್.ಲಿಂಗೇಶ್ ಸೇರಿ 71 ಸರ್ಕಾರಿ ನೌಕರರಿಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ.

ಆರೋಪಿಗಳ ಪರ ವಕೀಲರು ಸಲ್ಲಿಸಿದ್ದ ಜಾಮೀನು ಅರ್ಜಿಗಳ ವಿಚಾರಣೆ ನಡೆಸಿದ ಹೈಕೋರ್ಟ್ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠ ಜಾಮೀನು ನೀಡಿದೆ. ಮಾಜಿ ಶಾಸಕ ಕೆ.ಎಸ್.ಲಿಂಗೇಶ್, ತಹಶೀಲ್ದಾರ್‌ಗಳಾದ ಮೋಹನ್ ಕುಮಾರ್, ಪುಟ್ಟಶೆಟ್ಟಿ, ಪರಮೇಶ್ ಹಾಗು ಉಮೇಶ್ ಜಾಮೀನು ಪಡೆದಿದ್ದಾರೆ.

ಬೇಲೂರು ತಾಲ್ಲೂಕಿನಲ್ಲಿ ಬಗರ್ ಹುಕುಂ ಸಾಗುವಳಿ ಭೂಮಿಗಳ ಮಂಜೂರಾತಿ ಸಂದರ್ಭ ದಲ್ಲಿ ನಿಯಮ ಉಲ್ಲಂಘಿಸಿ ಸರ್ಕಾರಿ ಜಮೀನುಗಳನ್ನು ಅರ್ಹತೆ ಇಲ್ಲದ ವರಿಗೆ ಮಂಜೂರು ಮಾಡಲಾಗಿದೆ ಎಂಬ ಆರೋಪ ಕೇಳಿಬಂದಿತ್ತು. ಪ್ರಕರಣದ ತನಿಖೆಯನ್ನು ಅಪರಾಧ ತನಿಖಾ ಇಲಾಖೆ (ಸಿಐಡಿ) ಕೈಗೆತ್ತಿಕೊಂಡಿದ್ದು, ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿತ್ತು.



ತನಿಖಾ ದಾಖಲೆಗಳ ಪ್ರಕಾರ, ಬೇಲೂರು ತಾಲ್ಲೂಕಿನಲ್ಲಿ 2016ರಿಂದ 2022ರ ವರೆಗೆ ವಿವಿಧ ಅವಧಿಯಲ್ಲಿ ಕಾರ್ಯನಿರ್ವಹಿಸಿದ್ದ ತಹಶೀಲ್ದಾರ್ ಗಳ ಅವಧಿಯಲ್ಲಿ ಸಾವಿರಾರು ಎಕರೆ ಸರ್ಕಾರಿ ಭೂಮಿಗೆ ಸಾಗುವಳಿ ಚೀಟಿ ನೀಡಲಾಗಿದೆ ಎಂಬ ಅಂಶ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಒಟ್ಟು 2,750 ಎಕರೆ ಸರ್ಕಾರಿ ಭೂಮಿಗೆ ಸಾಗುವಳಿ ಚೀಟಿ ನೀಡಲಾಗಿದೆ ಎಂದು ದಾಖಲೆ ಗಳಲ್ಲಿ ಉಲ್ಲೇಖವಾಗಿದ್ದು, ಅಲ್ಲದೆ, ಬಗರ್ ಹುಕುಂ ಸಮಿತಿಯ ಮುಂದೆ ಸಲ್ಲಿಕೆಯಾಗಿದ್ದ ಹಲವು ಅರ್ಜಿಗಳಿಗೆ ಸಂಬಂಧಿಸಿದ ಮೂಲ ದಾಖಲೆಗಳು ಲಭ್ಯವಿಲ್ಲ ಎಂಬ ಅಂಶವೂ ತನಿಖೆಯಲ್ಲಿ ಉಲ್ಲೇಖವಾಗಿದೆ.

**ಲಿಂಗೇಶ್ ವಿರುದ್ಧದ ಆರೋಪ**

ಬೇಲೂರು ತಾಲ್ಲೂಕು ಬಗರ್‌ಹುಕುಂ ಸಾಗುವಳಿ ಸಮಿತಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಕೆ.ಎಸ್.ಲಿಂಗೇಶ್ ಅವರು ಸರ್ಕಾರಿ ಜಮೀನುಗಳ ಮಂಜೂರಾತಿ ಪ್ರಕ್ರಿಯೆಯಲ್ಲಿ ಅಧಿಕಾರ ದುರುಪಯೋಗ ಮಾಡಿದ್ದಾರೆಂದು ಆರೋಪಿಸಲಾಗಿದೆ.

ಈ ಸಂಬಂಧ ನಕಲಿ ದಾಖಲೆ ಸೃಷ್ಟಿ, ವಂಚನೆ, ನಂಬಿಕೆ ದ್ರೋಹ ಹಾಗು ಅಪರಾಧಿಕ ಒಳಸಂಚು ಸೇರಿ ವಿವಿಧ ಆರೋಪಗಳಡಿ ಪ್ರಕರಣ ದಾಖಲಿಸಿಕೊಂಡು ಸಿಐಡಿ ತನಿಖೆ ನಡೆಸು ತ್ತಿದೆ. ಈ ಹಿಂದೆ ಪ್ರಕರಣದ ಎಫ್‌ಐಆರ್ ರದ್ದುಪಡಿಸುವಂತೆ ಕೆ. ಎಸ್.ಲಿಂಗೇಶ್ ಸೇರಿ ಕೆಲವರು ಹೈಕೋರ್ಟ್ ಮೊರೆ ಹೋಗಿದ್ದರು. ಆದರೆ, ಎಫ್‌ಐಆರ್ ರದ್ದುಪಡಿಸಲು ನ್ಯಾಯಾಲಯ ನಿರಾಕರಿಸಿ ತನಿಖೆ ಮುಂದುವರಿಸಲು ಅವಕಾಶ ನೀಡಿತ್ತು. ಬಳಿಕ ಸಿಐಡಿ ಅಧಿಕಾರಿಗಳು ಕೆ.ಎಸ್.ಲಿಂಗೇಶ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು.

## ಇಎಸ್‌ಐ ಆಸ್ಪತ್ರೆ ಮೇಲ್ದರ್ಜೆಗೇರಿಸಲು ಒತ್ತಾಯ

» ಮೊದಲನೇ ಪುಟದಿಂದ

ಪ್ರಮಾಣದ ಕಾರ್ಮಿಕ ವರ್ಗ ವನ್ನು ಹೊಂದಿದೆ. ಈ ಹಿನ್ನಲೆ ಕಾರ್ಮಿ ಕರಿಗೆ ಅಗತ್ಯವಿರುವ ಗುಣಮಟ್ಟದ ಆರೋಗ್ಯ ಸೇವೆಯನ್ನು ಜಿಲ್ಲೆ ಯಲ್ಲಿಯೇ ಒದಗಿಸುವುದು ಅತ್ಯಂತ ಅಗತ್ಯವಾಗಿದೆ. ಪ್ರಸ್ತಾವಿತ 200 ಹಾಸಿಗೆಗಳ ಇಎಸ್‌ಐ ಆಸ್ಪತ್ರೆಗೆ ಸಂಬಂಧಿಸಿದಂತೆ ತಕ್ಷಣ ಸಾಧ್ಯತಾ ಅಧ್ಯಯನ ಹಾಗು ಅಗತ್ಯತಾ ಮೌಲ್ಯ ಮಾಪನ ನಡೆಸಬೇಕು. ಯೋಜನೆಗೆ ಅಗತ್ಯವಿರುವ ಆಡಳಿತಾತ್ಮಕ ಅನು ಮೋದನೆ ಮತ್ತು ವೆಚ್ಚ ಮಂಜೂರಾತಿ ನೀಡಬೇಕು. ಅಲ್ಲದೆ, ಆಸ್ಪತ್ರೆ ನಿರ್ಮಾಣಕ್ಕೆ ಸೂಕ್ತ ಜಾಗ ಗುರುತಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳ ಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗಿದೆ.

ಆಸ್ಪತ್ರೆಯಲ್ಲಿ ತಜ್ಞ ವೈದ್ಯಕೀಯ ವಿಭಾಗಗಳು,ತುರ್ತು ಚಿಕಿತ್ಸಾ ಘಟಕ, ತೀವ್ರ ನಿಗಾಘಟಕ,ಶಸ್ತ್ರ ಚಿಕಿತ್ಸಾ ಕೊಠಡಿಗಳು, ರೋಗ ನಿರ್ಣಯ ಸೌಲಭ್ಯಗಳು ಹಾಗು ಔಷ ಧಾಲಯ ಸೇರಿ ಅಗತ್ಯ ವೈದ್ಯ ಕೀಯ ಮೂಲಸೌಕರ್ಯಗಳನ್ನು ಕಲ್ಪಿಸಬೇಕು. 61,337 ಇಎಸ್‌ಐ ಫಲಾನುಭವಿಗಳ ಹಿತದೃಷ್ಟಿಯಿಂದ ಈ ಮಹತ್ವದ ಯೋಜನೆಯನ್ನು ಆದ್ಯತೆಯ ಮೇರೆಗೆ ಹಾಗು ಕಾಲಮಿತಿಯೊಳಗೆ ಜಾರಿಗೊ ಳಿಸಬೇಕೆಂದು ಮನವಿ ಮಾಡಿದ್ದಾರೆ.

## ಮುಂಬೈನಲ್ಲಿ ಭೂಕುಸಿತ : ಏಳು ಮಂದಿ ಸಾವು

**ಮುಂಬೈ:** ನಗರದ ಘಾಟ್ಕೋಪರ್ ಪ್ರದೇಶ ದಲ್ಲಿ ಬುಧವಾರ ಸುರಿದ ಅತಿಯಾದ ಮಳೆ ಯಿಂದಾಗಿ ಭೂಕುಸಿತ ಸಂಭವಿಸಿ, ಏಳು ಜನ ಮೃತಪಟ್ಟಿದ್ದು, 7ಮಂದಿ ಗಾಯಗೊಂಡಿದ್ದಾ ರೆಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ. ಮೃತಪಟ್ಟವರಲ್ಲಿ ಮೂವರು ಮಕ್ಕಳಿ ದ್ದಾರೆ. ಗೌಸಿಯಾ ಚಾಲ್‌ನ ಅಶೋಕ ನಗರ ವಸತಿ ಪ್ರದೇಶದ ಚಿರಾಗ್ ನಗರದಲ್ಲಿ ಬೆಳಗಿನ ಜಾವ 3.48ರ ಸುಮಾರಿಗೆ ಭೂಕುಸಿತ ಸಂಭವಿಸಿದೆ. ಘಾಟ್ಕೋಪರ್‌ನ ರಾಜಾವಾಡಿ ಆಸ್ಪತ್ರೆ ಅಧಿಕಾರಿಗಳು ಮೃತಪಟ್ಟವರ ಮಾಹಿತಿ ನೀಡಿದ್ದಾರೆ.



## ಕಾವೇರಿ ವಿವಾದ: ಆ.17ರಂದು ಸುಪ್ರೀಂ ವಿಚಾರಣೆ

• ಪ್ರಜೋದಯ ವರದಿ

**ನವದೆಹಲಿ:** ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶವನ್ನು ಪಾಲಿಸುವಂತೆ ಕರ್ನಾಟಕಕ್ಕೆ ನಿರ್ದೇಶನ ನೀಡ ಬೇಕೆಂದು ಕೋರಿ ತಮಿಳುನಾಡು ಸಲ್ಲಿಸಿರುವ ಅರ್ಜಿಯನ್ನು ಆ.17ರಂದು ವಿಚಾರಣೆಗೆ ಕೈಗೆತ್ತಿಕೊಳ್ಳಲು ಸುಪ್ರೀಂಕೋರ್ಟ್ ಬುಧವಾರ ನಿರ್ಧರಿಸಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯ ಮೂರ್ತಿಗಳಾದ ಜಾಯ್‌ಮಾಲ್ಯಾ ಬಾಗ್ಚಿ ಮತ್ತು ವಿ.ಮೋಹನಾ ಅವರನ್ನು ಒಳಗೊಂಡ ನ್ಯಾಯಪೀಠ, ಈ ಅರ್ಜಿಯ ವಿಚಾರಣೆಯನ್ನು ಇದೇ 13ರಂದು ಕೈಗೆತ್ತಿಕೊಳ್ಳುವು ದಾಗಿ ಈ ಹಿಂದೆ ಹೇಳಿತ್ತು. ಪ್ರಕರಣದ ವಿಚಾರಣೆಯಿಂದ ನ್ಯಾಯ ಮೂರ್ತಿ ವಿ.ಮೋಹನಾ ಹಿಂದಕ್ಕೆ ಸರಿದಿದ್ದಾರೆ.

ಡಿಎಂಕೆ ಹಾಗೂ ರಾಜ್ಯದ ಕೆಲವು ರೈತರ ಪರವಾಗಿ ಬುಧವಾರ ಹಾಜರಾದ ಹಿರಿಯ ವಕೀಲ ಪಿ.ವಿಲ್ಸನ್, ತುರ್ತು ವಿಚಾರಣೆಗಾಗಿ ಪ್ರತ್ಯೇಕ ಅರ್ಜಿ ಸಲ್ಲಿಸಿರುವುದನ್ನು ಪ್ರಸ್ತಾಪಿಸಿ ದರು. ಈ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ವಿಕ್ರಮ್‌ನಾಥ್ ನೇತೃತ್ವದ ಪೀಠ ಗುರುವಾರ ನಡೆಸಬೇಕಿತ್ತು. ಅವರು ಅನಾರೋಗ್ಯದಿಂದ ಬಳಲುತ್ತಿರುವುದರಿಂದ ಅರ್ಜಿ ವಿಚಾರಣೆ ಸೋಮವಾರ ನಡೆಯಲಿದೆಂದು ಸಿಜೆಐ ತಿಳಿಸಿದರು.

## ಜಿಲ್ಲೆಯ ಅಥ್ಲೆಟಿಕ್ಸ್ ಕ್ರೀಡಾಪಟುಗಳ ಸಾಧನೆ

• ಪ್ರಜೋದಯ ವರದಿ

**ಹಾಸನ:** ಕರ್ನಾಟಕ ಅಥ್ಲೆಟಿಕ್ ಸಂಸ್ಥೆಯ ವತಿಯಿಂದ ಆಯೋಜಿಸಿರುವ ಕರ್ನಾಟಕ ಕಿರಿಯರ ರಾಜ್ಯಮಟ್ಟದ ಅಥ್ಲೆಟಿಕ್ಸ್ ಕ್ರೀಡಾ ಕೂಟದ ಮೊದಲ ದಿನದ ಸ್ಪರ್ಧೆಗಳಲ್ಲಿ ಜಿಲ್ಲಾ ತಂಡದ ಕ್ರೀಡಾಪಟುಗಳು ಉತ್ತಮ ಸಾಧನೆ ಮಾಡಿದ್ದಾರೆ.



ಬಾಲಕಿಯರ 20 ವರ್ಷ ವಯೋಮಿತಿಯ ಉದ್ದ ಜಿಗಿತ ಸ್ಪರ್ಧೆಯಲ್ಲಿ ಬಿ.ಆರ್.ದೀಕ್ಷಿತಾ ದ್ವಿತೀಯ ಸ್ಥಾನ ಗಳಿಸಿದ್ದಾರೆ. ಬಾಲಕರ 16 ವರ್ಷ ವಯೋಮಿತಿಯ ಗುಂಡು ಎಸೆತ ಸ್ಪರ್ಧೆಯಲ್ಲಿ ಆದರ್ಶ್ ದ್ವಿತೀಯ ಸ್ಥಾನ ಹಾಗು ಬಾಲಕರ 18 ವರ್ಷ ವಯೋಮಿತಿಯ ಗುಂಡು ಎಸೆತ ಸ್ಪರ್ಧೆ ಯಲ್ಲಿ ಸಂತೋಷ್ ತೃತೀಯ ಸ್ಥಾನ ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಕ್ರೀಡಾಪಟುಗಳ ಸಾಧನೆಗೆ ಜಿಲ್ಲಾ ಅಮೆಚೂರ್ ಅಥ್ಲೆಟಿಕ್ ಸಂಸ್ಥೆಯ ಕಾರ್ಯದರ್ಶಿ ಎಸ್.ಎಲ್. ಪ್ರಸನ್ನಕುಮಾರ್, ಸಹಾಯಕ ಕಾರ್ಯ ದರ್ಶಿ ಪ್ರಜ್ವಲ್, ಅಧ್ಯಕ್ಷೆ ಎಂ.ಕೆ.ಆಶಾ ಸೇರಿ ಸಂಸ್ಥೆಯ ಪದಾಧಿಕಾರಿಗಳು ಅಭಿನಂದನೆ ಸಲ್ಲಿಸಿದ್ದಾರೆ.

## ಅಕ್ರಮವಾಗಿ ಸಾಗಿಸುತ್ತಿದ್ದ ಮರದ ದಿಮ್ಮಿ ವಶ



• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಬೆಳಗೋಡು ವ್ಯಾಪ್ತಿಯ ಈಶ್ವರಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ಮರದ ದಿಮ್ಮಿಗಳನ್ನು ಅರಣ್ಯ ಇಲಾಖೆ ಅಧಿಕಾರಿ ಗಳು ವಶಕ್ಕೆ ಪಡೆದಿದ್ದಾರೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ ಮಾರ್ಗದರ್ಶನ ದಲ್ಲಿ ಕೈಗೊಂಡ ಕಾರ್ಯಾಚರಣೆಯಲ್ಲಿ ಅರಣ್ಯಾ ಧಿಕಾರಿ ಹೆಚ್.ಆರ್.ಹೇಮಂತ್ ಕುಮಾರ್ ಹಾಗು ಸಿಬ್ಬಂದಿ ದಾಳಿ ನಡೆಸಿ, 15.960 ಘನ ಮೀಟರ್ ಮರದ ದಿಮ್ಮಿ ಹಾಗು ಲಾರಿಯನ್ನು ವಶಕ್ಕೆ ಪಡೆದು ಕೊಂಡಿದ್ದಾರೆ. ಕಾರ್ಯಾಚರಣೆಯಲ್ಲಿ ಉಪ ವಲಯ ಅರಣ್ಯಾಧಿಕಾರಿಗಳಾದ ಮಂಜುನಾಥ್, ಅರ್ಜುನ್, ಧನಂಜಯ್, ಗಸ್ತು ಅರಣ್ಯ ಪಾಲಕ ರಾದ ಉಮೇಶ್, ಕುಮಾರ್, ಅರಣ್ಯ ವೀಕ್ಷಕರಾದ ಲೋಕೇಶ್, ಪೃಥ್ವಿರಾಜ್, ನಿಶಾಂತ್ ಇದ್ದರು.

# ಧಾರ್ಮಿಕ ಕೇಂದ್ರಗಳು ಜ್ಞಾನ ಪಸರಿಸುವ ಕೇಂದ್ರಗಳಾಗಲಿ

• ಪ್ರಜೋದಯ ವರದಿ

**ಅರಸೀಕೆರೆ:** ಗ್ರಾಮೀಣ ಪ್ರದೇಶದ ದೇವಾ ಲಯಗಳು ಕೇವಲ ಧಾರ್ಮಿಕ ಆಚರಣೆಗೆ ಸೀಮಿತವಾಗದೆ ಶ್ರದ್ಧೆ-ಭಕ್ತಿಯ ಜೊತೆಗೆ ಜ್ಞಾನ, ಸಂಸ್ಕೃತಿ ಹಾಗು ಸಾಮಾಜಿಕ ಸಾಮರಸ್ಯ ಬೆಳೆಸುವ ಕೇಂದ್ರಗಳಾಗ ಬೇಕೆಂದು ಕರ್ನಾಟಕ ಜಾನಪದ ಪರಿಷತ್ ತಾಲ್ಲೂಕು ಅಧ್ಯಕ್ಷ ಬಿ.ಪರಮೇಶ್ ಅವರು ಹೇಳಿದರು.

ತಾಲ್ಲೂಕಿನ ಬಾಳೇನಹಳ್ಳಿಯ ಬಯಲು ಬಸವೇಶ್ವರ ದೇವಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ರಾಮೀಣ ಭಾಗದ ಹಲವು ದೇವಾಲಯ ಗಳಲ್ಲಿ ಪ್ರತಿ ಅಮಾವಾಸ್ಯೆ ಹಾಗು ಹುಣ್ಣಿಮೆ ದಿನ ನೂರಾರು ಭಕ್ತರು ಶ್ರದ್ಧಾಭಕ್ತಿಯಿಂದ ಪೂಜೆ ಸಲ್ಲಿಸುತ್ತಾರೆ. ಪ್ರತಿ ತಿಂಗಳು ವಿಭಿನ್ನ ಕಾರ್ಯಕ್ರಮ ಆಯೋಜಿಸಿ ಜ್ಞಾನ ದಾಸೋಹ ನಡೆಸುವ ಪರಂಪರೆ ಆರಂಭವಾ ಗಬೇಕೆಂದರು.

ವಿವಿಧ ಕ್ಷೇತ್ರಗಳ ಪರಿಣಿತರನ್ನು ಆಹ್ವಾನಿಸಿ ವಿಚಾರ ವಿನಿಮಯ, ಉಪ ನ್ಯಾಸ, ಜಾನಪದ ಗೀತೆ ಹಾಗು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಬಹುದು. ಅದರಿಂದ ಭಕ್ತರು ಕೆಲಕಾಲ ಒಟ್ಟಿಗೆ ಕುಳಿತು ವಿಚಾರಗಳನ್ನು ಆಲಿಸುವ ಅವಕಾಶ ದೊರೆ ಯುತ್ತದೆ. ಬಳಿಕ ಸಹಪಂಕ್ತಿ ಭೋಜನದಲ್ಲಿ ಎಲ್ಲರೂ ಒಂದಾಗಿ ಕುಳಿತು ಊಟ ಮಾಡುವುದರಿಂದ ಪರಸ್ಪರ ಪರಿಚಯ, ಆತ್ಮೀಯತೆ ಮತ್ತು ಸಾಮಾಜಿಕ ಸಾಮರಸ್ಯ ಮತ್ತಷ್ಟು ಬಲಗೊಳ್ಳುತ್ತದೆಂದು ಹೇಳಿದರು.



ಬಾಳೇನಹಳ್ಳಿಯ ಬಯಲು ಬಸವೇಶ್ವರ ದೇವಾಲಯದ ವಿಶೇಷತೆಯನ್ನು ಉಲ್ಲೇಖಿ ಸಿದ ಪರಮೇಶ್, ದೇವಾಲಯದ ವಿಹಂ ಗಮ ನೋಟ ಹಾಗು ಗ್ರಾಮಸ್ಥರು ಒಟ್ಟಾಗಿ ಸೇರಿ ನೆಲದ ಮೇಲೆ ಕುಳಿತು ಸಹಪಂಕ್ತಿ ಭೋಜನ ಮಾಡುವ ಸಾಂಪ್ರದಾಯಿಕ ವ್ಯವಸ್ಥೆ ಗಮನ ಸೆಳೆಯುತ್ತದೆ. ದೇವಾಲ ಯದ ಆವರಣದಲ್ಲಿರುವ ಹಳೆಯ ಬೇವಿನ ಮರದ ಎಲೆಗಳನ್ನು ಬಳಸಿಕೊಂಡು ಒಗ್ಗರಣೆ ಹಾಕಿ ಸಾಂಬಾರು ತಯಾರಿಸುವ ಗ್ರಾಮೀಣ ಪರಂಪರೆಯೂ ವಿಶೇಷವಾ ಗಿದ್ದು, ಇಂತಹ ಆಚರಣೆಗಳು ನಮ್ಮ ಸಂಸ್ಕೃತಿ ಮತ್ತು ಸಾಮೂಹಿಕ ಜೀವನದ ಪ್ರತೀಕವಾಗಿವೆ ಎಂದರು.

ಬಾಳೇನಹಳ್ಳಿ ತಾಲ್ಲೂಕಿನ ವಿದ್ಯಾವಂತ ಹಾಗು ಸಾಂಸ್ಕೃತಿಕವಾಗಿ ಶ್ರೀಮಂತ ಗ್ರಾಮವಾಗಿದ್ದು, ಪ್ರತಿ ಅಮಾವಾಸ್ಯೆ ಯಂದು ಗ್ರಾಮಸ್ಥರು, ನೌಕರವರ್ಗ ಹಾಗು ನಂದಿ ಗೆಳೆಯರ ಬಳಗದ ವತಿ ಯಿಂದ ನಡೆಯುತ್ತಿರುವ ಸಮಾಜಮುಖಿ ಕಾರ್ಯಗಳು ಶ್ಲಾಘನೀಯ ಎಂದು ಮೆಚ್ಚು ಗೆ ವ್ಯಕ್ತಪಡಿಸಿದರು.

ಕರ್ನಾಟಕ ಜಾನಪದ ಪರಿಷತ್ ಕಾರ್ಯದರ್ಶಿ ದಿಬ್ಬೂರು ಯೋಗೀಶ್, ಖಜಾಂಚಿ ಕಾತ್ಯಾಯಿನಿ ತೇವರಿಮಠ, ಶ್ರೀಧರ್ ಕಣಕಟ್ಟೆ ಮತ್ತಿತರರಿದ್ದರು.

## ಇತಿಹಾಸ ನೆನಪಿಟ್ಟುಕೊಳ್ಳುವ ಕೆಲಸ ಮಾಡಲು ಶ್ರೀಗಳ ಸಲಹೆ

» ಮೊದಲನೇ ಪುಟದಿಂದ

ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಮಾತನಾಡಿ, ಕಣಕಟ್ಟೆ ಹೋಬಳಿ ಕೆರೆಕಟ್ಟೆಗಳಿಗೆ ಹೇಮಾವತಿ ನದಿ ಮೂಲ ಹಾಗು ಕೆರೆಗಳಿಗೆ ಎತ್ತಿನಹೊಳೆ ಯೋಜನೆ, ಬಾಣಾವರ ಹೋಬಳಿಯ ಕೆರೆಗಳಿಗೆ ಭದ್ರಾ ಮೇಲ್ದಂಡೆ ಯೋಜನೆಯಿಂದ ನೀರು ಹರಿಸಲಾಗುವುದೆಂದು ಭರವಸೆ ನೀಡಿದರು.

ಇಲಾಖೆಗಳ ವ್ಯಾಪ್ತಿಯಲ್ಲಿ ಮಾಡಬೇಕಾದ ಕೆಲಸವನ್ನು ತಾರತಮ್ಯ ಮಾಡದೆ ನಿಷ್ಪಕ್ಷಪಾತವಾಗಿ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ಅಲ್ಲದೆ ಜನರು ನನ್ನ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ಆಭಾರಿಯಾಗಿದ್ದೇನೆಂದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಎಂ.ಎಸ್.ವಿ.ಸ್ವಾಮಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಯೋಗೇಶ್ ಮುಂತಾದವರಿದ್ದರು.

ಸಂಘದ ಅಧ್ಯಕ್ಷ ಎಸ್.ಎಂ.ಓಂಕಾರ್ ಮೂರ್ತಿ, ಉಪಾಧ್ಯಕ್ಷ ರಂಗನಾಥ್, ಮುಖಂಡರಾದ ಶಿವದೇವ್, ಮಾಡಾಳು ಶಿವಲಿಂಗಪ್ಪ, ಎಂ.ಡಿ.ಸೋಮಶೇಖರ್, ಎಂ.ಜಿ.ಜಯಪ್ಪ, ಚಂದ್ರಪ್ಪ, ವಿಜಯ್‌ಕುಮಾರ್ ಹಾಜರಿದ್ದರು.



## ರುದ್ರೇಶ್‌ಗೌಡ ಅವಧಿಯಲ್ಲಿ ಅಕ್ರಮ ನಡೆದಿಲ್ಲ



• ಪ್ರಜೋದಯ ವರದಿ

**ಬೇಲೂರು:** ಮಾಜಿ ಶಾಸಕ ದಿ||ವೈ. ಎನ್.ರುದ್ರೇಶ್‌ಗೌಡ ಅವರು ಬಗರ್ ಹುಕುಂ ಸಮಿತಿ ಅಧ್ಯಕ್ಷರಾಗಿದ್ದ ಅವ ಧಿಯಲ್ಲಿ ಬಡವರು ಹಾಗು ರೈತರಿಗೆ ಜಮೀನು ಮಂಜೂರು ಮಾಡುವ ಪ್ರಕ್ರಿಯೆಯಲ್ಲಿ ಯಾವುದೇ ಅಕ್ರಮ ನಡೆದಿಲ್ಲ ಎಂದು ಕಾಂಗ್ರೆಸ್ ಮುಖಂಡ ವೈ.ಎನ್.ಕೃಷ್ಣೇಗೌಡ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬರ ಪರಿಸ್ಥಿತಿ ವೀಕ್ಷಣೆಗೆ ಬೇಲೂರಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಬಂದಿದ್ದ ವೇಳೆ, ಮಾಜಿ ಸಚಿವ ಬಿ. ಶಿವರಾಂ ಅವರು ರುದ್ರೇಶ್‌ಗೌಡ ಅವರ ಅವಧಿಯಲ್ಲಿ ಹೆಚ್ಚು ಅಕ್ರಮ ನಡೆದಿದೆ ಎಂದು ಆರೋಪಿಸಿರುವುದು ನೋವುಂಟುಮಾಡಿದೆಂದು ಹೇಳಿದರು.

ಬಗರ್‌ಹುಕುಂ ಅರ್ಜಿಗಳನ್ನು ಅಧಿಕಾರಿಗಳು ಪರಿಶೀಲಿಸಿ, ಅರ್ಹತೆ, ದಾಖಲೆ ಹಾಗು ಜಮೀನಿನ ವಿವರಗಳ ಆಧಾರದಲ್ಲಿ ವರದಿ ಸಲ್ಲಿಸುತ್ತಿದ್ದರು. ಆ ವರದಿ ಆಧರಿಸಿಯೇ ಸಮಿತಿ ತೀರ್ಮಾನಕ್ಕೆಗೊಳ್ಳುತ್ತಿತ್ತು. ಅಧ್ಯಕ್ಷರು ತಮಗೆ ಬೇಕಾದವರಿಗೆ ನೇರವಾಗಿ ಜಮೀನು ಮಂಜೂರು ಮಾಡಲು ಸಾಧ್ಯವಿಲ್ಲ. ಹೀಗಾಗಿ ರಾಜಕೀಯ ಆರೋಪ-ಪ್ರತ್ಯಾರೋಪಗಳಿಗೆ ಅವಕಾಶ ನೀಡದೆ ಕಡತಗಳು, ದಾಖಲೆ ಗಳು ಹಾಗು ಅಧಿಕಾರಿಗಳ ವರದಿ ಗಳನ್ನು ಪರಿಶೀಲಿಸಿ ನಿಜಾಂಶ ಹೊರತರ ಬೇಕು. ಅರ್ಹ ರೈತರಿಗೆ ಅನ್ಯಾಯವಾಗ ಬಾರದೆಂದು ಒತ್ತಾಯಿಸಿದರು.

ಮಾಜಿ ಪುರಸಭೆ ಅಧ್ಯಕ್ಷ ಎ.ಆರ್. ಅಶೋಕ್, ಅಲ್ಪಸಂಖ್ಯಾತರ ರಾಜ್ಯ ಕಾರ್ಯದರ್ಶಿ ಅಬ್ದುಲ್ ಸಮ್ಮದ್, ಹಳೇಬೀಡು ಗಂಗಾಧರ್, ಸತ್ಯ ನಾರಾಯಣ, ಕೆಪಿಸಿಸಿ ಸದಸ್ಯ ರಮೇಶ್ ಉಪಸ್ಥಿತರಿದ್ದರು.

# ಸಚಿವ ನಾಗೇಂದ್ರ ರಾಜೀನಾಮೆಗೆ ಆಗ್ರಹ

### ರಾಜ್ಯಾದ್ಯಂತ ಪ್ರತಿಭಟನೆ: ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ

• ಪ್ರಜೋದಯ ವರದಿ

**ಹಾಸನ:** ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋ.ರೂ. ಮೊತ್ತದ ಹಗರಣದಲ್ಲಿ ಸಿಲುಕಿರುವ ಬಿ. ನಾಗೇಂದ್ರ ಅವರನ್ನು ಮತ್ತೆ ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಿಕೊಂಡಿರುವುದು ಖಂಡನೀಯ. ರಾಜೀ ನಾಮೆಗೆ ಆಗ್ರಹಿಸಿ ಸದನದ ಒಳಗೆ ಮತ್ತು ಹೊರಗೆ ರಾಜ್ಯಾದ್ಯಂತ ಪ್ರತಿಭಟನೆ ನಡೆಸಲಾಗುವುದೆಂದು ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಅವರು ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಣ ಅಕ್ರಮ ಹಂಚಿಕೆ ತನಿಖೆ ಇನ್ನೂ ಮುಗಿದಿಲ್ಲ. ಆದರೂ ಕ್ಲೀನ್ ಚಿಟ್ ಸಿಕ್ಕಿದೆ ಎಂಬಂತೆ ನಾಗೇಂದ್ರ ಅವರನ್ನು ಮಂತ್ರಿ ಮಾಡಿರುವುದು ಸರಿಯಲ್ಲ. ಪರಿಶಿಷ್ಟ ಪಂಗಡದ ಜನರ ಆರ್ಥಿಕ ಮತ್ತು ಸಾಮಾಜಿಕ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನು ದುರ್ಬಳಕೆ ಮಾಡಲಾ ಗಿದೆ. ಅಂತಹವರನ್ನೇ ರಕ್ಷಿಸುವ ಕೆಲಸ ವನ್ನು ಸರ್ಕಾರ ಹಾಗು ಮುಖ್ಯ ಮಂತ್ರಿ ಮಾಡುತ್ತಿದ್ದಾರೆಂದು ದೂರಿದರು.



ಆರೋಪ ಎದುರಿಸುತ್ತಿರುವ ವ್ಯಕ್ತಿ ಯನ್ನೇ ಮತ್ತೆ ಸಚಿವರನ್ನಾಗಿ ಮಾಡಿ ರುವುದು ಸರ್ಕಾರದ ನಿರ್ಧಾರದ ಮೇಲೆ ಅನುಮಾನ ಮೂಡಿಸಿದೆ. ಸಾರ್ವಜನಿಕರಲ್ಲಿ ತಪ್ಪು ಸಂದೇಶ ರವಾನಿಸುತ್ತದೆ. ಸಿದ್ದರಾಮಯ್ಯ ಅವರೂ ಅಕ್ರಮದ ಬಗ್ಗೆ ಒಪ್ಪಿ ಕೊಂಡಿದ್ದರು. ತನಿಖೆ ಪೂರ್ಣ ಗೊಳ್ಳುವ ಮುನ್ನವೇ ನಾಗೇಂದ್ರ ಅವರನ್ನು ಮತ್ತೆ ಸಚಿವ ಸಂಪುಟಕ್ಕೆ ಸೇರಿಸಿರುವುದು ಅರ್ಥವಾಗದ ನಿರ್ಧಾರ. ನಾಗೇಂದ್ರಗೆ ಕ್ಲೀನ್‌ಚಿಟ್ ಸಿಕ್ಕಿದೆಯೇ ಎಂಬುದನ್ನು ಸರ್ಕಾರ ಬಹಿರಂಗಪಡಿಸಬೇಕು. ಇಲ್ಲವಾದರೆ ಕೂಡಲೇ ಸಚಿವ ಸ್ಥಾನದಿಂದ ಅವ ರನ್ನು ಕೆಳಗಿಳಿಸಿ ಅದೇ ಸಮುದಾಯದ ಬೇರೆಯವರನ್ನು ಮಂತ್ರಿ ಮಾಡಿ ಎಂದು ಆಗ್ರಹಿಸಿದರು.

ಮುಖ್ಯಮಂತ್ರಿ ಕೂಡಲೇ ನಾಗೇಂದ್ರ ಅವರ ರಾಜೀನಾಮೆ ಪಡೆಯದಿದ್ದರೆ, ದೋಸ್ತಿ ಪಕ್ಷ ಜೆಡಿ ಎಸ್ ಜೊತೆ ಗೂಡಿ ಸದನದ ಒಳಗೆ ಮಾತ್ರವಲ್ಲದೆ ಹೊರಗೂ ಹೋರಾಟ ಮಾಡಲಾಗುವುದು. ಹಾಗೆಯೇ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿ ಭಟನೆ ನಡೆಸಲಾಗುವುದು. ಸರ್ಕಾರ ಯಾವುದೇ ರಾಜಕೀಯ ಒತ್ತಡಕ್ಕೆ ಮಣಿಯದೆ ನಿಷ್ಪಕ್ಷಪಾತ ತನಿಖೆಗೆ ಅವಕಾಶ ನೀಡಬೇಕು. ನೈತಿಕ ಹೊಣೆ ಹೊತ್ತು ನಾಗೇಂದ್ರ ಅವರ ರಾಜೀ ನಾಮೆ ಪಡೆಯುವ ಮೂಲಕ ಸರ್ಕಾರ ತನ್ನ ಬದ್ಧತೆ ತೋರಿಸ ಬೇಕೆಂದು ಒತ್ತಾಯಿಸಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯ ದರ್ಶಿಗಳಾದ ಅಮಿತ್ ಶೆಟ್ಟಿ, ರಾಜ ಕುಮಾರ್, ಮಾಧ್ಯಮ ವಕ್ತಾರ ಆರ್. ಮೋಹನ್, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಜಿತೇಂದ್ರ, ವೇದಾವತಿ ಇದ್ದರು.

## ಸಾರ್ವಜನಿಕರ ಹಣಕ್ಕೆ ಬ್ಯಾಂಕ್ ಮಹಿಳಾ ಸಿಬ್ಬಂದಿ ಕನ್ನ

» ಮೊದಲನೇ ಪುಟದಿಂದ

ತಾಲ್ಲೂಕು ರೈತ ಸಂಘದ ಅಧ್ಯಕ್ಷ ರಾಮಚಂದ್ರ ಅವರು ಮಾತನಾಡಿ, ಬ್ಯಾಂಕ್‌ನಲ್ಲೇ ಈ ರೀತಿ ಅವ್ಯವಹಾರ ನಡೆದರೆ ಯಾರನ್ನು ನಂಬಬೇಕು. ಈ ಬಗ್ಗೆ ಜಿಲ್ಲಾ ಬ್ಯಾಂಕ್‌ನ ಅಧಿಕಾರಿಗಳು ಸೂಕ್ತ ತನಿಖೆ ನಡೆಸಿ ತಪ್ಪಿಸಸ್ಥರಿಗೆ ಶಿಕ್ಷೆ ವಿಧಿಸುವುದರ ಜೊತೆಗೆ ನೊಂದವರಿಗೆ ನ್ಯಾಯ ಒದಗಿಸಬೇಕೆಂದು ಆಗ್ರಹಿಸಿದರು.

ಗ್ರಾಹಕರು ಆಭರಣ ಸಾಲ ಪಡೆದಿದ್ದಾರೆ. ಆದರೆ, ಸಾಲದ ಚೀಟಿ ಇಲ್ಲವೆಂದು ಒಡವೆ ಕೊಡಲು ನಿರಾಕರಿಸಿರುವ ಪ್ರಕರಣ ಗಳಿವೆ. ಇನ್ನೂ ಹೆಚ್ಚಿನ ಬಡ್ಡಿ ಪಡೆದಿರುವ ಬಗ್ಗೆಯೂ ದೂರುಗಳು ಬಂದಿವೆ. ಈ ಬಗ್ಗೆ ಹಿರಿಯ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಜಿಲ್ಲಾ ಬ್ಯಾಂಕ್ ನಿರ್ದೇಶಕ ಸಿ.ಎನ್.ಬಾಲಕೃಷ್ಣ ಅವರು ಈ ವಿಚಾರದಲ್ಲಿ ಮೌನವಾಗಿರುವುದು ಖಂಡನೀಯ ಎಂದರು.

ಪ್ರತಿಭಟನಾ ಸ್ಥಳಕ್ಕೆ ಜಿಲ್ಲಾ ಸಹಕಾರ ಬ್ಯಾಂಕ್ ಉಪ ವ್ಯವಸ್ಥಾಪಕ ವೆಂಕಟೇಶ್, ಸ್ವಸಹಾಯ ಸಂಘಗಳ ವಿಭಾಗದ ಹಿರಿಯ ವ್ಯವ ಸ್ಥಾಪಕ ಜಗದೀಶ್, ಸಹಾಯಕ ವ್ಯವಸ್ಥಾಪಕ ಗುರು ಭೇಟಿ ನೀಡಿ ಮಾಹಿತಿ ಪಡೆದರು.

**ಸ್ಥಳದಲ್ಲಿ ಬಿಗುವಿನ ವಾತಾವರಣ:** ಪ್ರತಿಭಟನಾ ನಿರತ ರೈತರು ಬ್ಯಾಂವಕ್ ವ್ಯವಸ್ಥಾಪಕರ ವಿರುದ್ಧ ಧಿಕ್ಕಾರ ಕೂಗಿದರು. ತಪ್ಪಿತಸ್ಥರ ವಿರುದ್ಧ ತಕ್ಷಣ ಕ್ರಮ ಜರುಗಿಸಬೇಕು ಹಾಗು ಸಮಗ್ರ ತನಿಖೆ ನಡೆಸ ಬೇಕೆಂದು ಪಟ್ಟು ಹಿಡಿದರು. ಈ ವೇಳೆ ಸ್ಥಳದಲ್ಲಿ ಬಿಗುವಿನ ವಾತಾ ವರಣ ನಿರ್ಮಾಣವಾಯಿತು. ಪ್ರತಿಭಟನಾಕಾರರ ಸಮಾಧಾನ ಪಡಿಸಲು ಪೊಲೀಸರು ಹರಸಾಹಸ ಪಡಬೇಕಾಯಿತು.

ತಾಲ್ಲೂಕು ವೀರಶೈವ ಸಮಾಜದ ಅಧ್ಯಕ್ಷ ರಾಜಣ್ಣ, ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಹಿರೀಸಾವೆ ರಘು, ಕಾರ್ಯಾಧ್ಯಕ್ಷ ಎಂ.ಎಲ್. ಹರೀಶ್, ರೈತ ಸಂಘದ ಪ್ರಮುಖರಾದ ನಾಗರತ್ನಮ್ಮ, ಸೋಮ ಶೇಖರಯ್ಯ,ಕುಮಾರ್, ಕೋವಿಬಾಬು,ಹಿರೀಸಾವೆಅಣ್ಣಪ್ಪ ಸ್ವಾಮಿ, ಮಂಜೇಗೌಡ, ಪ್ರಕಾಶ್, ಹೆಚ್.ಎಂ.ಜಯರಾಮ್ ಇದ್ದರು.

## ಜಿಲ್ಲೆಗೆ ಆಗಮಿಸಿದ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು

» ಮೊದಲನೇ ಪುಟದಿಂದ

ಪ್ರಾಯೋಗಿಕ ಸಂಚಾರ ಸಕಲೇಶಪುರದವರೆಗೆ ನಡೆದಿ ರುವುದು ಈ ಭಾಗದ ನಾಗರಿಕರಿಗೆ ಸುದಿನ ಎಂದು ಹೇಳಿದರು.

ವಂದೇ ಭಾರತ್ ರೈಲು ದೇಶದ ಅಭಿವೃದ್ಧಿಯ ವೇಗದ ಸಂಕೇತವಾಗಿದ್ದು, ದೇಶೀಯವಾಗಿ ನಿರ್ಮಾಣ ವಾಗುತ್ತಿರುವ ಈ ಅತ್ಯಾಧುನಿಕ ರೈಲು ಸೇವೆ ನಮ್ಮ ಕ್ಷೇತ್ರಕ್ಕೂ ತಲುಪಿರುವುದು ಹೆಮ್ಮೆಯ ಸಂಗತಿ. ಅದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹಾಗು ರಾಜ್ಯ ಸಚಿವ ವಿ.ಸೋಮಣ್ಣ ಅವರಿಗೆ ಅಭಿನಂದನೆ ಸಲ್ಲಿಸುವುದಾಗಿ ಹೇಳಿದರು.

ತಾವು ಶಾಸಕರಾದ ಬಳಿಕ ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ ಅವರನ್ನು ಭೇಟಿ ಮಾಡಿ ಬೆಂಗಳೂರು -ಮಂಗಳೂರು ನಡುವೆ ವಂದೇ ಭಾರತ್ ರೈಲು ಹಾಗು ಇಂಟರ್‌ಸಿಟಿ ರೈಲು ಸೇವೆಯನ್ನು ಈ ಭಾಗಕ್ಕೆ ವಿಸ್ತರಿ ಸುವಂತೆ ಮನವಿ ಮಾಡಲಾಗಿತ್ತು. ಪ್ರಾಯೋಗಿಕ ಸಂಚಾರ ಯಶಸ್ವಿಯಾದ ಬಳಿಕ ಕೆಲವೇ ದಿನಗಳಲ್ಲಿ ಸಾರ್ವಜನಿಕರಿಗೆ ರೈಲು ಸೇವೆ ಲಭ್ಯವಾಗುವ ನಿರೀಕ್ಷೆ ಇದೆ ಎಂದರು.

ಶಿರಾಡಿಘಾಟ್ ಮಾರ್ಗದಲ್ಲಿ ಮಳೆ, ಭೂಕುಸಿತ ಹಾಗು ಸಂಚಾರ ದಟ್ಟಣೆಯಿಂದ ರಸ್ತೆ ಪ್ರಯಾಣಕ್ಕೆ ಅಡಚಣೆ ಉಂಟಾಗುವ ಸಂದರ್ಭದಲ್ಲಿ ರೈಲು ಸೇವೆ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲ ಕಲ್ಪಿಸಲಿದೆ. ವಂದೇ ಭಾರತ್ ರೈಲಿನಲ್ಲಿ ಆಧುನಿಕ ಸೌಲಭ್ಯಗಳಿದ್ದು, ಹೆಚ್ಚಿನ ಸಂಖ್ಯೆಯ ಪ್ರಯಾಣಿಕರಿಗೆ ಆರಾಮದಾಯಕ ಪ್ರಯಾ ಣದ ಅನುಭವ ನೀಡಲಿದೆ ಎಂದು ಹೇಳಿದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019